ಕನ್ನಡ

# ಬಾಲಭಾರತಿ



ಆರನೆಯ ಇಯತ್ತೆ

# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಮಂಜೂರಿ ಕ್ರಮಾಂಕ: ಜಾ.ಕ್ರ.ಮರಾಶೈಸಂಪ್ರಪ/ಅವಿವಿ/ಶಿಪ್ರ/೨೦೧೫-೧೬/೧೬೭೩
ದಿನಾಂಕ: ೦೬/೦೪/೨೦೧೬

# ಕನ್ನಡ
# ಬಾಲಭಾರತಿ
## ಆರನೆಯ ಇಯತ್ತೆ

85RA76

ನಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವQ.R. Codeದ ಮೂಲಕ ಆ ಪಾಠಕ್ಕೆಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ ೪.

ಪ್ರಥಮಾವೃತ್ತಿ: ೨೦೧೬
ಪುನರ್ಮುದ್ರಣ: ೨೦೨೨

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋದನ ಮಂಡಳ, ಪುಣೆ- ೪

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನುಕಾಯಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.


| | |
|---|---|
| ಕನ್ನಡ ಭಾಷಾ ಸಮಿತಿ : | ಡಾ. ಕೆ.ಕೆ . ಪತ್ತಾರ, ಅಧ್ಯಕ್ಷ<br>ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯ<br>ಶ್ರೀ. ಬಿ.ಎಸ್. ಕಾಪಸೆ, ಸದಸ್ಯ<br>ಶ್ರೀ . ಹಣಮಂತ ಎಮ್. ಕುಂಭಾರ, ಸದಸ್ಯ<br>ಶ್ರೀಮತಿ . ಜಯದೇವಿ ಆಯ್. ಉಕ್ಕಲಿ, ಸದಸ್ಯೆ<br>ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ- ಸಚಿವರು |
| ಕನ್ನಡ ಅಭ್ಯಾಸಗಟ ಸದಸ್ಯರು : | ಶ್ರೀ. ಜಿ.ಡಿ. ಮೋರೆ<br>ಶ್ರೀ. ಟಿ.ವ್ಹಿ. ಸದಾನಂದ<br>ಶ್ರೀ. ಶ್ರೀಶೈಲ ಜಿ. ಅವಟಿ |
| ಸಂಯೋಜನ ಪ್ರಮುಖ : | ಡಾ. ಸದಾನಂದ ಎಂ ಬಿಳ್ಳೂರ, ವಿಶೇಷಾಧಿಕಾರಿಗಳು ಕನ್ನಡ, ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ-೪<br>ಶ್ರೀ. ಆರ್. ಎಮ್. ಗಣಾಚಾರಿ, ವಿಷಯ ಸಹಾಯಕ ಕನ್ನಡ |
| ಚಿತ್ರಕಾರ: : | ಶ್ರೀ. ಕಿಶೋರ ಗಿರಧಾರಿ |
| ಮುಖಪುಟ : | ರೇಶ್ಮಾ ಬರ್ವೆ |
| ಅಕ್ಷರ ಜೋಡಣೆ : | ಆರಿಕ್ ಪಬ್ಲಿಷಿಂಗ್, ಮುಂಬೈ |
| ನಿರ್ಮಿತಿ : | ಶ್ರೀ. ಸಚ್ಚಿತಾನಂದ ಆಫಳೆ, ಮುಖ್ಯ ನಿರ್ಮಿತಿ ಅಧಿಕಾರಿ<br>ಶ್ರೀ. ಸಚಿನ ಮೆಹತಾ, ನಿರ್ಮಿತಿ ಅಧಿಕಾರಿ<br>ಶ್ರೀ. ನಿತಿನ ವಾಣಿ, ನಿರ್ಮಿತಿ ಸಹಾಯಕ |
| ಕಾಗದ : | ೭೦ ಜಿ.ಎಸ್.ಎಮ್. ಕ್ರೀಮ್‌ವ್ಹೋವ್ಹ್ |
| ಮುದ್ರಣಾದೇಶ : | N/PB/2022-23/3,000 |
| ಮುದ್ರಕ : | M/S. SHARP INDUSTRIES, RAIGAD |
| ಪ್ರಕಾಶಕ : | ಶ್ರೀ. ವಿವೇಕ ಗೋಸಾವಿ, ನಿಯಂತ್ರಕ<br>ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ – ೨೫ |

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

**‘ರಾಷ್ಟ್ರೀಯ ಅಭ್ಯಾಸಕ್ರಮ ರೂಪರೇಷೆ ೨೦೦೫**, ಮತ್ತು **‘ಬಾಲಕರ ಉಚಿತ ಶಿಕ್ಷಣದ ಅಧಿಕಾರ ಅಧಿನಿಯಮ ೨೦೦೯’** ಇವುಗಳ ಅನುಸಾರವಾಗಿ ರಾಜ್ಯದಲ್ಲಿ **‘ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮ ೨೦೧೨’** ವನ್ನು ಸಿದ್ಧಪಡಿಸಲಾಯಿತು. ಈ ಸರಕಾರಮಾನ್ಯ ಅಭ್ಯಾಸಕ್ರಮವು ೨೦೧೩–೧೪ ಈ ವರ್ಷದಿಂದ ಕ್ರಮೇಣವಾಗಿ ಜಾರಿಯಲ್ಲಿ ಬಂತು. ಈ ಸರಕಾರಮಾನ್ಯ ಅಭ್ಯಾಸಕ್ರಮದ ಮೇಲೆ ಆಧಾರಿತವಾದ ಆರನೆಯ ಇಯತ್ತೆಯ ಕನ್ನಡ ಬಾಲಭಾರತಿ ಈ ಪುಸ್ತಕವನ್ನು ತಯಾರಿಸಲಾಗಿದೆ. ಈ ಪಠ್ಯಪುಸ್ತಕವನ್ನು ತಮ್ಮ ಕೈಯಲ್ಲಿಡಲು ನಮಗೆ ಆನಂದವಿರುತ್ತದೆ.

ಅಧ್ಯಯನ– ಅಧ್ಯಾಪನ ಪ್ರಕಿಯೆ ಬಾಲಕೇಂದ್ರಿತವಾಗಿರಬೇಕು. ಸ್ವಯಂ ಅಧ್ಯಯನಕ್ಕೆ ಮಹತ್ವ ದೊರೆಯಬೇಕು. ಅಧ್ಯಯನ ಹಾಗೂ ಅಧ್ಯಾಪನಪ್ರಕ್ರಿಯೆ ಆನಂದಮಯವಾಗಿರಬೇಕು ಎಂಬ ವ್ಯಾಪಕ ದೃಷ್ಟಿಕೋನದಿಂದ ಈ ಪುಸ್ತಕವನ್ನು ರಚಿಸಲಾಗಿದೆ. ಪ್ರಾಥಮಿಕ ಶಿಕ್ಷಣದ ವಿವಿಧ ಹಂತಗಳಲ್ಲಿ ವಿದ್ಯಾರ್ಥಿಗಳು ನಿಶ್ಚಿತವಾಗಿ ಪ್ರಾಪ್ತಗೊಳಿಸುವ ಕ್ಷಮತೆಗಳು ಯಾವವು ಎಂಬುದನ್ನು ಅಧ್ಯಯನ– ಅಧ್ಯಾಪನ ಮಾಡುವಾಗ ಸ್ಪಷ್ಟವಾಗಬೇಕೆಂದು, ಭಾಷಾ ವಿಷಯದ ಅಪೇಕ್ಷಿತ ಕ್ಷಮತೆಗಳ ವಿಧಾನಗಳನ್ನು ಈ ಪಠ್ಯಪುಸ್ತಕದಲ್ಲಿ ಸಮಾವೇಶ ಮಾಡಲಾಗಿದೆ.

ಮಕ್ಕಳ ವಯೋಮಾನ ಹಾಗೂ ಭಾವವಿಶ್ವಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳಿಗೆ ಪೂರಕವೆನಿಸುವ ಗದ್ಯ –ಪದ್ಯಗಳನ್ನು ಇಲ್ಲಿ ಕೊಡಲಾಗಿದೆ. ಆನಂದದಾಯಕ ಶಿಕ್ಷಣದ ಸಲುವಾಗಿ ನೀತಿಬೋಧಕ ಕಥೆ, ಹಾಡು, ವೈಜ್ಞಾನಿಕ ಹಾಗೂ ದೇಶಭಕ್ತಿ ಪರವಾದ ಕವಿತೆಗಳನ್ನು ಕೊಡಲಾಗಿದೆ. ‘ಬ್ಯಾಂಕ, ಅಡಗಿಸಿಟ್ಟ ಚಿನ್ನ. ಜನಸಂಖ್ಯಾಸ್ಪೋಟ‘ ಈ ಪಾಠಗಳು ಜೀವನಾಭಿಮುಖ ಶಿಕ್ಷಣವನ್ನು ನೀಡುತ್ತವೆ. ಭಾಷಿಕ ಕೌಶಲಗಳ ವಿಕಾಸಕ್ಕಾಗಿ ನಾವಿನ್ಯಪೂರ್ಣ ಅಭ್ಯಾಸ, ಉಪಕ್ರಮಗಳನ್ನು ಕೊಡಲಾಗಿದೆ. ‘ಥಟ್ಟನೆ ಹೇಳಿ, ಯೋಚಿಸಿ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿರಿ, ಚೌಕಟ್ಟಿನಲ್ಲಿಯ ಅಕ್ಷರಗಳಿಂದ ಶಬ್ದಗಳನ್ನು ರಚಿಸಿರಿ, ಅಂತ್ಯಾಕ್ಷರಗಳನ್ನು ಬಳಸಿ ಶಬ್ದಗಳನ್ನು ರಚಿಸಿರಿ, ಚಿತ್ರಗಳ ಸಹಾಯದಿಂದ ಗಾದೆಮಾತುಗಳನ್ನು ಪೂರ್ಣ ಮಾಡಿರಿ‘ ಈ ಶೀರ್ಷಿಕೆಗಳ ಅಡಿಯಲ್ಲಿರುವ ಸಂಗತಿಗಳಿಂದ ವಿದ್ಯಾರ್ಥಿಗಳ ನಿರೀಕ್ಷಣಾಕ್ಷಮತೆ, ವಿಚಾರಕ್ಷಮತೆ ಹಾಗೂ ಕೃತಿಶೀಲತೆ ಇವುಗಳ ಬೆಳವಣಿಗೆಗೆ ಚಾಲನೆ ದೊರೆಯುತ್ತದೆ. ಅದರಂತೆ ಸಹಜವಾಗಿ ವ್ಯಾಕರಣದ ಜ್ಞಾನವಾಗಲೆಂದು ಈ ಎಲ್ಲ ಸಂಗತಿಗಳನ್ನು ಮನೋರಂಜಕವಾಗಿ ಹಾಗೂ ಸುಲಭ ಪದ್ಧತಿಯಲ್ಲಿ ಕೊಡಲಾಗಿದೆ. ಚಿತ್ರಗಳ ನಿರೀಕ್ಷಣೆ, ಯೋಚನೆ, ಚರ್ಚೆ ಹಾಗೂ ಅವುಗಳ ಕುರಿತು ಸ್ವಂತದ ಅನುಭವಕಥನ ಇವುಗಳಿಂದ ಮಕ್ಕಳಲ್ಲಿ ತಿಳುವಳಿಕೆಯುಂಟಾಗುವದು. ಮಕ್ಕಳಿಗೆ ಸ್ವಂತ ಕಲ್ಪನೆ ಮಾಡಿ ಲೇಖನ ಮಾಡಲು, ಅವರಿಗೆ ವಿಚಾರಗಳನ್ನು ವ್ಯಕ್ತಪಡಿಸಲು ಬರಬೇಕು ಎಂಬ ಉದ್ದೇಶದಿಂದ ಈ ಪಠ್ಯಪುಸ್ತಕದಲ್ಲಿ ವಿವಿಧ ಪ್ರಕಾರದ ಪ್ರಶ್ನೆಗಳನ್ನು ಹಾಗೂ ಕೃತಿಗಳನ್ನು ಸಮಾವೇಶ ಮಾಡಲಾಗಿದೆ.

ಕನ್ನಡ ಭಾಷಾ ಸಮಿತಿ ಹಾಗೂ ಅಭ್ಯಾಸಗಟ ಸದಸ್ಯರು ಹಾಗೂ ಚಿತ್ರಕಾರರು ಇವರ ಪ್ರಾಮಾಣಿಕ ಪರಿಶ್ರಮದಿಂದ ಈ ಪುಸ್ತಕವು ಸಿದ್ಧವಾಗಿದೆ. ಈ ಪಠ್ಯಪುಸ್ತಕವು ದೋಷರಹಿತ ಮತ್ತು ಉತ್ತಮ ಗುಣಮಟ್ಟದ್ದು ಆಗಬೇಕೆಂಬ ಉದ್ದೇಶದಿಂದ ರಾಜ್ಯದ ವಿವಿಧ ಭಾಗಗಳಿಂದ ಆಯ್ದ ಪ್ರಾಥಮಿಕ ಶಾಲೆಯ ಶಿಕ್ಷಕರಿಂದ ಮತ್ತು ತಜ್ಞರಿಂದ ಈ ಪುಸ್ತಕದ ಸಮೀಕ್ಷಣೆಯನ್ನು ಮಾಡಲಾಗಿದೆ. ಸಮೀಕ್ಷಕರ ಸೂಚನೆ ಹಾಗೂ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಈ ಪುಸ್ತಕಕ್ಕೆ ಅಂತಿಮ ಸ್ವರೂಪವನ್ನು ಕೊಡಲಾಗಿದೆ.

ಕನ್ನಡ ಭಾಷಾ ಸಮಿತಿಹಾಗೂ ಅಭ್ಯಾಸಗಟ ಸದಸ್ಯರು, ನಿಮಂತ್ರಿತ ತಜ್ಞರು, ಸಂಬಂಧಿತ ಸಮೀಕ್ಷಕರು ಹಾಗೂ ಚಿತ್ರಕಾರರು ಇವರೆಲ್ಲರಿಗೆ ಮಂಡಳವು ಮನಃಪೂರ್ವಕವಾಗಿ ಆಭಾರಿಯಾಗಿದೆ. ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಪಾಲಕರು ಈ ಪುಸ್ತಕವನ್ನು ಸ್ವಾಗತಿಸುವರೆಂದು ಆಶಿಸಿದ್ದೇವೆ.

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ

ದಿನಾಂಕ: ೯ ಮೇ ೨೦೧೬ ಅಕ್ಷಯತೃತಿಯಾ

ಭಾರತೀಯ ಸೌರ: ೧೯ ವೈಶಾಖ ೧೯೩೮

# ಆರನೆಯ ಇಯತ್ತೆ – ಕನ್ನಡ ಅಧ್ಯಯನ ನಿಷ್ಪತ್ತಿಗಳು

| ಅಧ್ಯಯನದಲ್ಲಿ ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆಗಳು | ಅಧ್ಯಯನ ನಿಷ್ಪತ್ತಿಗಳು |
| --- | --- |
| **ಎಲ್ಲ ವಿದ್ಯಾರ್ಥಿಗಳಿಗೆ (ಬೇರೆ ಬೇರೆ ರೂಪದಲ್ಲಿ ಸಕ್ಷಮ ಮಕ್ಕಳು ಸಹಿತ) ವೈಯಕ್ತಿಕ ಅಥವಾ ಸಾಮೂಹಿಕ ಸ್ವರೂಪ ದಲ್ಲಿ ಪ್ರೋತ್ಸಾಹನೆ ನೀಡಬೇಕು. ಕಾರಣ ಅವರಿಗೆ–**<br>• ನಮ್ಮ ಭಾಷೆಯಲ್ಲಿ ಮಾತಾಡುವ ಆದರಂತೆ ಚರ್ಚೆ ಮಾಡುವ ಅವಕಾಶ ಕೊಡಬೇಕು.<br>• ಬಳಸಿದ ಭಾಷೆಯ ಸೂಕ್ಷ್ಮತೆಯ ಮೇಲೆ ಚರ್ಚೆ ಮಾಡುವ ಅವಕಾಶ ಕೊಡಬೇಕು.<br>• ಸಕ್ರಿಯತೆ ಮತ್ತು ಜಾಗರೂಕತೆ ತರುವ ಸಾಹಿತ್ಯ (ಉದಾ: ವರ್ತಮಾನ ಪತ್ರ, ಪತ್ರಿಕೆ, ಚಿತ್ರಪಟ ಮತ್ತು ದೃಕ್ ಶ್ರಾವ್ಯ ಸಾಹಿತ್ಯ ಇತ್ಯಾದಿ) ನೋಡುವ, ಕೇಳುವ, ಓದುವ, ಬರೆಯುವ ಮತ್ತು ಚರ್ಚೆ ಮಾಡುವ ಅವಕಾಶ ಕೊಡಬೇಕು.<br>• ಗುಂಪಿನಲ್ಲಿ ಕಾರ್ಯ ಮಾಡುವ ಮತ್ತು ಒಬ್ಬರಿಗೊಬ್ಬರ ಕೆಲಸದ ಚರ್ಚೆ ಮಾಡುವದು ಮತ ಕೊಡಕೊಳ್ಳುವಿಕೆ ಪ್ರಶ್ನೆ ಕೇಳುವ ಸ್ವಾತಂತ್ರ್ಯ ಕೊಡಬೇಕು.<br>• ಕನ್ನಡದ ಜೊತೆಗೆ ಇತರ ಭಾಷೆಯಲ್ಲಿಯ ಸಾಹಿತ್ಯ ಓದುವ ಆದರಂತೆ ಬರೆಯುವ ಅವಕಾಶ ಮತ್ತು ಅದರ ಮೇಲೆ ಚರ್ಚೆ ಮಾಡುವ ಸ್ವಾತಂತ್ರ್ಯ ಕೊಡಬೇಕು.<br>• ತನ್ನ ಪರಿಸರ ಕಾಲ ಮತ್ತು ಸಮಾಜ ಇವುಗಳ ಸಂಬಂಧಿತ ವಿವಿಧ ಸಾಹಿತ್ಯಗಳ ವಾಚನ ಮತ್ತು ಅದರ ಮೇಲೆ ಚರ್ಚೆ ಮಾಡುವ ಅವಕಾಶ ಕೊಡಬೇಕು.<br>• ತನ್ನ ಭಾಷೆಯ ರಚನೆ ಮಾಡುವಾಗ ಬರೆಯುವ ಸಂದರ್ಭದಲ್ಲಿ ಉಪಕ್ರಮ ಆಯೋಜಿಸಬೇಕು. ಉದಾ: ಶಬ್ದಗಳಆಟ, ಶಬ್ದ ಗಮ್ಮತ್ತು.<br>• ಕನ್ನಡ ಭಾಷೆಯಲ್ಲಿಯ ಸಂದರ್ಭಕ್ಕೆನುಸಾರ ಭಾಷೆಯ ವಿಶ್ಲೇಷಣ (ವಾಕ್ಯರಚನೆ, ವಿರಾಮಚಿಹ್ನೆ ಇತ್ಯಾದಿ ಮಾಡುವ ಅವಕಾಶ ಕೊಡಬೇಕು)<br>• ಕಲ್ಪನಾ ಶಕ್ತಿ ಮತ್ತು ಸೃಜನ ಶೀಲತೆಯ ವಿಕಾಸ ಮಾಡುವ ಉಪಕ್ರಮಗಳ ಉದಾ– ಅಭಿನಯ, ಮೂಕ ಅಭಿನಯ, ಕವಿತೆ, ಪಾಠ, ಸೃಜನಾತ್ಮಕ ಲೇಖ, ವಿವಿಧ ಸ್ಥಿತಿಯಲ್ಲಿಯ ಸಂವಾದ ಇತ್ಯಾದಿಗಳು ಆಯೋಜಿಸಬೇಕು. ಮತ್ತು ಅವುಗಳನ್ನು ತಯಾರಿಸಿ ಸಂಬಂಧಿತ ಹಸ್ತಲಿಖಿತ ಮತ್ತು ಅಹವಾಲ ಲೇಖನದ ಅವಕಾಶ ಕೊಡಬೇಕು. | **ಅಧ್ಯಯನಾರ್ಥಿಗಳು –**<br>06.06.01 ವಿವಿಧ ಪ್ರಕಾರದ ಸಪ್ಪಳ (ಉದಾ.ಮಳೆ, ಗಾಳಿ ರೇಲ್ವೆ,ಮಾರಾಟಗಾರ) ಕೇಳುವ ಅನುಭವ ವಿವಿಧ ವಿದ್ಯಾರ್ಥಿ ಗಳ ಸ್ವಾದ ಇತ್ಯಾದಿಗಳ ಬಗ್ಗೆ ಅನುಭವ ಸ್ವಂತದ ಶಬ್ದಗಳಲ್ಲಿ ಸಾಂಕೇತಿಕ ಭಾಷೆಯಲ್ಲಿ ಹೇಳುವನು.<br>06.06.02 ನೋಡಿದ ಮತ್ತು ಕೇಳಿದ ಘಟನೆ (ಉದಾ.ಸ್ಥಾನಿಕ ಸಾಮಾಜಿಕ ಘಟನೆ ಕಾರ್ಯಕ್ರಮ) ಈ ವಿಷಯಗಳ ಬಗ್ಗೆ ನಿರರ್ಗಳವಾಗಿ ಹೇಳುವನು. ಪ್ರಶ್ನೆ ಕೇಳುತ್ತಾರೆ ಮತ್ತು ಮಂಡಿಸುವನು.<br>06.06.03 ನೋಡಿದ, ಕೇಳಿದ ವಿಷಯ/ಘಟನೆ/ಅಂಶ ಇವುಗಳ ಮೇಲೆ ಚರ್ಚೆ ತನ್ನ ಭಾಷೆಯಲ್ಲಿ ಮುಂದೆ ಒಯುತ್ತಾರೆ. (ಉದಾ.ಅಪೂರ್ಣ ವಿಷಯ ಪೂರ್ಣ ಮಾಡುವನು.)<br>06.06.04 ರೇಡಿಯೋ, ದೂರದರ್ಶನ, ವರ್ತಮಾನ ಪತ್ರಗಳು ಇಂಟರನೆಟ್ ಇವುಗಳ ಮುಖಾಂತರ ನೋಡಿದ/ ಕೇಳಿದ ಘಟನೆಗಳನ್ನು ಸ್ವಂತದ ಶಬ್ದಗಳಲ್ಲಿ ಮಂಡಿಸುವನು.<br>06.06.05 ವಿವಿಧ ಪ್ರಸಂಗಗಳಲ್ಲಿ /ಸಂದರ್ಭಗಳಲ್ಲಿ ಹೇಳುವ ಬೇರೊಬ್ಬರ ಅನುಭವಗಳನ್ನು ತಮ್ಮ ಶೈಲಿಗಳಲ್ಲಿ ಹೇಳುವನು/ಬರೆಯುವನು.<br>06.06.06 ತಮ್ಮ ಪರಿಸರದಲ್ಲಿಯ ವಿಭಿನ್ನ ಆಡುಭಾಷೆಯಲ್ಲಿಯ ಜನಪದ ಕಥೆ ಮತ್ತು ಜನಪದ ಗೀತೆಗಳನ್ನು ಇವುಗಳ ವಿಷಯವಾಗಿ ಮಾಹಿತಿಯನ್ನು ಪಡೆಯುವನು, ತಿಳಿದುಕೊಳ್ಳುವನು. ಮತ್ತು ಅದರ ಮೇಲೆ ಚರ್ಚೆ ಮಾಡುವನು.<br>06.06.07 ತಮಗಿಂತ ಭಿನ್ನವಿರುವ ಭಾಷೆಗಳು, ಕುಡಿಯುವ, ತಿನ್ನುವ ರೂಢಿಗಳು, ವಾಸಿಸುವ ರೂಢಿಗಳು ಇವುಗಳಲ್ಲಿಯ ವಿವಿಧತೆಗಳ ಬಗ್ಗೆ ಚರ್ಚೆ ಮಾಡುವನು.<br>06.06.08 ಕೆಲವೊಂದು ವಿಷಯಗಳನ್ನು ಮನಸಾ ಪೂರ್ವಕವಾಗಿ ಓದಿ, ಅದರಲ್ಲಿಯಲ್ಲಿಯ ಕೆಲವೊಂದು ವಿಷಯದ ಸೂಕ್ಷ್ಮ ನಿರೀಕ್ಷಣೆ ಮಾಡಿ, ಅದರಲ್ಲಿಯ ವಿಶಿಷ್ಠ ಅಂಶಗಳ ಶೋಧ ಮಾಡುವನು, ಅಂದಾಜು ಕಟ್ಟುವನು ಮತ್ತು ನಿಶ್ಕರ್ಷ ತೆಗೆಯುವನು.<br>06.06.09 ಕನ್ನಡ ಭಾಷೆಯಲ್ಲಿಯ ವಿವಿಧ ಸಾಹಿತ್ಯ ಪ್ರಕಾರಗಳ (ವಾರ್ತೆಗಳು, ವರ್ತಮಾನ ಪತ್ರಗಳು, ಕಥೆಗಳು, ಮಾಸಿಕ ಪತ್ರಗಳು, ಇಂಟರನೆಟದ ಮೇಲೆ ಪ್ರಸಿದ್ಧವಾಗುವ ಸಾಹಿತ್ಯಗಳು ಇತ್ಯಾದಿ) ಅರ್ಥಪೂರ್ಣವಾಗಿ ಓದಿ ಸ್ವಂತದ ತಿಳುವಳಿಕೆಯ ಬಗ್ಗೆ ಹೇಳುವನು. ಅನಿಸಿಕೆಗಳನ್ನು ಹೇಳುವನು. ಸೂಚನೆಗಳನ್ನು ನೀಡುವನು. |

| ಅಧ್ಯಯನದಲ್ಲಿ ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆಗಳು | ಅಧ್ಯಯನ ನಿಷ್ಪತ್ತಿಗಳು |
|---|---|
| • ಸಾಹಿತ್ಯ ಮತ್ತು ಸಾಹಿತ್ಯಿಕ ತತ್ವಗಳ ತಿಳಿಯುವ ಅವಕಾಶ ಕೊಡಬೇಕು.<br>• ಶಬ್ದಕೋಶದ ಉಪಯೋಗ ಮಾಡುವ ಸಲುವಾಗಿ ಪ್ರೋತ್ಸಾಹ ಕೊಡಬೇಕು. ಅದಕ್ಕಾಗಿ ಸುಯೋಗ್ಯವಾತಾವರಣ ಇರಬೇಕು.<br>• ಸಾಂಸ್ಕೃತಿಕ ಕಾರ್ಯಕ್ರಮದ ನಿಮಿತ್ಯವಾಗಿ ಬರುವ ವಿವಿಧ ಜನಪದ ಗೀತೆ ಸಂಗ್ರಹ ಮಾಡುವ ಅದರಂತೆ ಅವುಗಳ ತಾಳ-ಲಯದಲ್ಲಿ ಸಾದರ ಮಾಡುವ ಅವಕಾಶ ಉಪಲಬ್ಧ ಕೊಡಬೇಕು.<br>• ಭಾಷೆಯ ಸಮೃದ್ಧಿಸಲುವಾಗಿ ಬಾಲ ಸಾಹಿತ್ಯದ ಜೊತೆಗೆ ಇತರ ಸಾಹಿತ್ಯದ ಸಂಗ್ರಹ ಮಾಡುವ ಮತ್ತು ಅದರ ಸಾದರಿಕರಣ ಮಾಡುವ ಅವಕಾಶ ಉಪಲಬ್ಧ ಮಾಡಿಕೊಡಬೇಕು. | 06.06.10 ಕನ್ನಡ ಭಾಷೆಯಲ್ಲಿಯ ಸೂಕ್ಷ್ಮತೆ, ರಚನೆಗಳು ಇವುಗಳ ಕಡೆಗೆ ಲಕ್ಷ್ಯಕೊಟ್ಟು ಅವುಗಳನ್ನು ಹೊಗಳುವನು. (ಉದಾ.ಕವಿತೆಯ ತಾಲಬದ್ಧತೆ, ಕಥೆಯಲ್ಲಿಯ, ನಿಬಂಧದಲ್ಲಿಯ, ವಾಕ್ಯಪ್ರಚಾರ, ಪಡೆನುಡಿಗಳು, ಸುವಿಚಾರ)<br>06.06.11 ವಿವಿಧ ಶೈಲಿಯಲ್ಲಿಯ ಸಾಹಿತ್ಯ ಪ್ರಕಾರಗಳಲ್ಲಿಯ ಆರೋಹ, ಅವರೋಹಗಳ ಮತ್ತು ಯೋಗ್ಯ ಗತಿಯಿಂದ ವಾಚನ ಮಾಡುವನು.<br>06.06.12 ಹೊಸ ಶಬ್ದಗಳ ವಿಷಯವಾಗಿ ಜಿಜ್ಞಾಸೆಯನ್ನು ವ್ಯಕ್ತಪಡಿಸುವನು. ಆ ಶಬ್ದಗಳ ಅರ್ಥ ತಿಳಿದು ಕೊಳ್ಳುವ ಸಲುವಾಗಿ ಶಬ್ದಕೋಶ ಉಪಯೋಗ ಮಾಡುವನು.<br>06.06.13 ವಿವಿಧ ಕಲೆಗಳಲ್ಲಿ (ಉದಾ:ಹಸ್ತಕಲೆ, ವಾಸ್ತು ಕಲೆ, ಕೃಷಿಕಲೆ, ನೃತ್ಯಕಲೆ, ಚಿತ್ರ ಕಲೆ) ಉಪಯೋಗಿಸುವ ಭಾಷೆಯ ಸಂಬಂಧವಾಗಿ ಜಿಜ್ಞಾಸೆಯನ್ನು ವ್ಯಕ್ತ ಪಡಿಸುವನು ಮತ್ತು ಅದನ್ನು ಹೊಗಳುವನು.<br>06.06.14 ಬೇರೆಯವರು ಹೇಳಿದ ಅನುಭವ ಅವಶ್ಯಕಥೆಯ ಅನುಸಾರ ಬರೆಯುವನು. ಉದಾ: ಸಾರ್ವಜನಿಕ ಸ್ಥಳಗಳಲ್ಲಿ (ಸಾರ್ವಜನಿಕ ನೀರಿನ ಪೂರೈಕೆ, ಬಸ್ ನಿಲ್ದಾಣ ಇತ್ಯಾದಿ) ಕೇಳಿದ ಕಥೆಗಳನ್ನು ಪ್ರಸಂಗಗಳನ್ನು ಬರೆಯುವನು.<br>06.06.15 ವಿವಿಧ ವಿಷಯಗಳ ಸಲುವಾಗಿ, ವಿವಿಧ ಉದ್ದೇಶಗಳ ಸಲುವಾಗಿ ಲೇಖನ ಮಾಡುವಾಗ. ವಿರಾಮ ಚಿಹ್ನೆಗಳ ಯೋಗ್ಯ ಉಪಯೋಗ ಮಾಡುವನು.<br>06.06.16 ಬೇರೆ ಬೇರೆ ಪ್ರಸಂಗ, ಬೇರೆ ಬೇರೆ ಉದ್ದೇಶಗಳಿಗೆನುಗುಣವಾಗಿ ಬರೆಯುವಾಗ ಶಬ್ದ ಸಮೂಹ, ವಾಕ್ಯಪ್ರಚಾರ, ವಾಕ್ಯಪ್ರಕಾರ ಪಡೆನುಡಿ ಇವುಗಳ ಯೋಗ್ಯ ಉಪಯೋಗ ಮಾಡುವನು. |

# ಪರಿವಿಡಿ


| ಅ. ಕ್ರ. | ಪಾಠಗಳು | ಕವಿ/ಲೇಖಕರು | ಪುಟ ಸಂಖ್ಯೆ |
|---|---|---|---|
| ೧. | ಕನ್ನಡ ನುಡಿ (ಕವಿತೆ) | ಆನಂದಕಂದ | ೧ |
| ೨. | ನಿಯತ್ತಿನ ಮೌಲ್ಯ | ನರೇಂದ್ರ | ೪ |
| ೩. | ಬ್ಯಾಂಕು | -------- | ೯ |
| ೪. | ಹೆಮ್ಮೆ ನನಗೆ ಅಮ್ಮ (ಕವಿತೆ) | ಎಸ್.ಎಸ್. ಲಕ್ಷ್ಮೀನಾರಾಯಣಭಟ್ಟ | ೧೭ |
| ೫. | ಜೋಗ ಜಲಪಾತ | -------- | ೨೦ |
| ೬. | ಅತ್ತೆಯ ಮನೆಗೆ ಆಳಿಯ ಬಂದ | -------- | ೨೬ |
| ೭. | ಮಾವಿನ ಗೊಲ್ಲೆ (ಕವಿತೆ) | -------- | ೩೨ |
| ೮. | ಸರದಾರ ವಲ್ಲಭಬಾಯಿ ಪಟೇಲ | ಎಸ್.ಆರ್. ರಾಮಸ್ವಾಮಿ | ೩೫ |
| ೯. | ಅಡಗಿಸಿಟ್ಟ ಚಿನ್ನ | -------- | ೪೨ |
| ೧೦. | ಈ ಮಣ್ಣು ನಮ್ಮದು (ಕವಿತೆ) | ಆರ್.ಎನ್. ಜಯಗೋಪಾಲ | ೫೦ |
| ೧೧. | ರೇಷ್ಮೆ ಸಾಕಾಣಿಕೆ | -------- | ೫೪ |
| ೧೨. | ದೇವಾನಾಂಪ್ರಿಯ | ಆರ್.ಜಿ.ಡಿ. | ೬೧ |
| ೧೩. | ಕಲ್ಲು ಸಕ್ಕರೆ (ಕವಿತೆ) | ಪುರಂದರದಾಸರು | ೬೮ |
| ೧೪. | ಹಂಪೆ | -------- | ೭೧ |
| ೧೫. | ಶಿವರಾಮ ಕಾರಂತರು | ಮಂಜುನಾಥ ಮೇಗರವಳ್ಳಿ | ೭೭ |
| ೧೬. | ನನ್ನ ದೇಹದ ಬೂದಿ (ಕವಿತೆ) | ದಿನಕರ ದೇಸಾಯಿ | ೮೩ |
| ೧೭. | ಪರಮವೀರ ಚಕ್ರ: ನಮ್ಮ ಮಹಾ ಸಾಹಸಿಗಳು | -------- | ೮೬ |
| ೧೮. | ಬಿದಿರು ನಾನಾರಿಗಲ್ಲದವಳು(ಕವಿತೆ) | ಶಿಶುನಾಳ ಶರೀಫ ಸಾಹೇಬರು | ೯೦ |
| ೧೯. | ಸೌರ ಕೊಡೆ | -------- | ೯೩ |
| ೨೦. | ಜನಸಂಖ್ಯಾ ಸ್ಫೋಟ | -------- | ೯೮ |
| ೨೧. | ಸುಗ್ಗಿ (ಕವಿತೆ) | ದಾ.ರಾ. ಬಳೂರಗಿ | ೧೦೩ |

# ೧ ಕನ್ನಡ ನುಡಿ

ಎನಿತು ಇನಿದು ಈ ಕನ್ನಡ ನುಡಿಯು
ಮನವನು ತಣಿಸುವ ಮೋಹನ ಸುಧೆಯು

ಗಾನವ ಬೆರೆಯಿಸಿ
ವೀಣೆಯ ದನಿಯೊಳು
ವಾಣಿಯ ನೇವುರ
ನುಡಿಸುತೆ ಕುಣಿಯಲು

ಮಾಣದೆ ಮೆರೆಯುವ ಮಂಜುಳ ರವವೋ?
ಎನಿತು ಇನಿದು ಈ ಕನ್ನಡ ನುಡಿಯು!

ರಂಗನ ಮುರಲಿಯು
ಹಿಂಗದ ಸರದಲ್ಲಿ
ಹೆಂಗಳೆಯರು ಬೆಳ
ದಿಂಗಳಿನಿರುಳಲಿ

ಸಂಗೀತವನೊರೆದಂಗವಿದೇನೋ?
ಎನಿತು ಇನಿದು ಈ ಕನ್ನಡ ನುಡಿಯು

ಗಿಳಿಗಳು ಉಲಿಯುವ
ಮೆಲು ಮಾತುಗಳೋ?
ಕಳಕಂಠಗಳಾ
ಚೆಲುವಿನ ಕುಕಿಲೋ?

ಅಳಿಗಳ ಬಳಗದ ಬೆಳಗಿನ ಉಲಿಯೋ
ಎನಿತು ಇನಿದು ಈ ಕನ್ನಡ ನುಡಿಯು

– ಆನಂದಕಂದ



## ಶಬ್ದಗಳ ಅರ್ಥ

ಇನಿದು – ಇಂಪು
ನೇವುರ – ಕಾಲ್ಗೆಜ್ಜೆ
ಕಳಕಂಠ – ಕೋಗಿಲೆ
ಅಳಿ – ದುಂಬಿ

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ

ವೀಣೆ ............... ವಾಣಿ ............... ರವ ...............

ಮುರಲಿ ............... ಉಲಿ ...............

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಮನವನ್ನು ತಣಿಸುವ ಸುಧೆಯು ಯಾವುದು?

..........................................................

ಆ) ಕನ್ನಡ ನುಡಿಯು ಹೇಗಿದೆ?

..........................................................

ಇ) ಗಿಳಿಗಳ ಮಾತುಗಳು ಹೇಗಿರುತ್ತವೆ?

..........................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ..........................................................................

ಉತ್ತರ ..........................................................................

ಆ) ..........................................................................

ಉತ್ತರ ..........................................................................

ಪ್ರಶ್ನೆ ೩) ಕನ್ನಡ ನುಡಿ ಇಂಪು ಎಂಬುದಕ್ಕೆ ಕವಿಯು ಯಾವ ಯಾವ ಉದಾಹರಣೆಗಳನ್ನು ಕೊಟ್ಟಿದ್ದಾನೆ?

ಪ್ರಶ್ನೆ ೪) ಕೆಳಗಿನ ಕವಿತೆಯ ಸಾಲುಗಳನ್ನು ಪೂರ್ಣ ಮಾಡಿರಿ.

ರಂಗನ ..............................

........................................

........................................

........................................

....................................................................................

................................................... ಈ ಕನ್ನಡ ನುಡಿಯು

ಪ್ರಶ್ನೆ ೫) ಕೆಳಗಿನ ವಾದ್ಯಗಳನ್ನು ಬಳಸುವ ವಿಧಾನ ಹೇಳಿರಿ.

ಉದಾಹರಣೆ- ವೀಣೆ – ನುಡಿಸುತ್ತಾರೆ

ಅ) ಕೊಳಲು ..................

ಆ) ತಬಲಾ ..................

ಇ) ನಗಾರಿ ..................

ಪ್ರಶ್ನೆ ೬) ಕೆಳಗೆ ಕೊಟ್ಟ ಚೌಕಟ್ಟುಗಳಲ್ಲಿ ಅದಕ್ಕೆ ಸರಿಯಾಗಿ ಹೊಂದುವ ಅಕ್ಷರಗಳನ್ನು ತುಂಬಿ ಪದ ರಚಿಸಿರಿ.

| | | | |
|---|---|---|---|
| ಪಾ | ರಿ | | |
| ಕೋ | | | |
| ಗಿ | | | |

| | | |
|---|---|---|
| ತ | | |
| ತಂ | | |
| | ದಂ | ಗ |

ಉಪಕ್ರಮ:
ಐದು ಪ್ರಕಾರದ ಸಂಗೀತ ಸಾಧನಗಳ ಮಾದರಿಗಳನ್ನು ತಯಾರಿಸಿರಿ.

**ಕನ್ನಡ ಕಂಪು ಮನಕ್ಕೆ ಇಂಪು**

ಥಟ್ಟನೆ ಹೇಳಿ:
ಕೇಳಲು ಒಂದು
ಹಿಡಿದರೆ ಸಿಗದು
ಬೇಡಬೇಡವೆಂದರೂ
ಕಿವಿಗಿಳಿಯುವುದು

ಧ್ವನಿ

# ೨ ನಿಯತ್ತಿನ ಮೌಲ್ಯ



ರಾಜು ಮತ್ತು ರಮೇಶ ಒಂದೇ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದರು. ನಿಯತ್ತಿನ ಉಸಿರು ರಾಜುವಾದರೇ, ಅಕ್ರಮ ಸಂಪಾದನೆಯ ಗುತ್ತಿಗೆದಾರ ರಮೇಶ.

ಒಂದು ದಿನ ಆಫೀಸಿನಿಂದ ಬಂದ ರಾಜುವಿನೊಂದಿಗೆ, "ಏನ್ರೀ! ಹಬ್ಬ ಹತ್ತಿರ ಬರುತ್ತಿದೆ. ಮಕ್ಕಳಿಗೆ ಹೊಸ ಬಟ್ಟೆಗಳು ತರುವ ಯೋಚನೆ ಇದೆಯೋ ಇಲ್ಲವೋ?" ಎಂದು ಚುಚ್ಚಿದಂತೆ ಕೇಳಿದಳು ರಾಜುವಿನ ಹೆಂಡತಿ ರಾಧಾ.

"ಇದೆ ರಾಧ, ಆದರೂ ಈಗ ತಿಂಗಳ ಕೊನೆ ಅಲ್ಲವೇ? ಕೈಯಲ್ಲಿ ಹಣ ಇಲ್ಲ.. ಮೊನ್ನೆ ಸಾಲ ಮಾಡಿ ನಮ್ಮ ತಂದೆಗೆ ನಾಲ್ಕು ನೂರು ರೂಪಾಯಿಗಳನ್ನು ಕಳುಹಿಸಿದೆ. ಸಂಬಳ ಬಂದಮೇಲೆ ಮಕ್ಕಳಿಗೆ ಬಟ್ಟೆ ಕೊಂಡುಕೊಳ್ಳೋಣ ಎಂದನು ರಾಜು.

ಗಂಡನ ಮಾತು ಕೇಳಿ ರಾಧಾಳಿಗೆ ಬೇಸರವಾಯಿತು. ಯಾವಾಗ ನೋಡಿದರೂ ನಿಮಗೆ ತಾಪತ್ರಯವೇ. ಮಕ್ಕಳ ಬಗ್ಗೆ ನಿಮಗೆ ಕಾಳಜಿ ಇಲ್ಲ. ಹಬ್ಬದ ದಿನವೇ ಬಟ್ಟೆಗಳನ್ನು ತಂದು ಕೊಟ್ಟರೆ ಟೇಲರ್ ಯಾವಾಗ ಹೊಲಿದು ಕೊಡುತ್ತಾನೆ?

ಹೆಂಡತಿಯ ಮಾತು ಕೇಳಿ ಮನಸ್ಸು ನೊಂದಿತು. ಮಧ್ಯಮ ವರ್ಗದವರ ಕಷ್ಟಸುಖಗಳನ್ನು ವಿವರಿಸುತ್ತಾ ಆಕೆಯನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದನು.

"ನಿಮ್ಮ ಆಫೀಸಿನಲ್ಲಿ ರಮೇಶ ಕೂಡ ನಿಮ್ಮ ಹಾಗೆ ಗುಮಾಸ್ತ ತಾನೆ!

ಅವರ ಸಂಸಾರ ನೋಡಿದರೆ ತುಂಬಾ ಸಂತೋಷವಾಗುತ್ತೆ. ಅವರ ಮನೆಯಲ್ಲಿ ಇಲ್ಲದ ವಸ್ತುವಿಲ್ಲ. ಮೊನ್ನೆ ಕಲರ್ ಟಿ.ವಿ., ಡಿ.ವಿ.ಡಿ. ಪ್ಲೇಯರ್, ಫ್ರಿಜ್ ಕೊಂಡರಂತೆ, ನೋಡಲು ಬರಹೇಳಿದಳು ಮಾಲತಿ. ನಮ್ಮ ಮನೆಯಲ್ಲಿ ಕನಿಷ್ಟ ಟೀ.ವಿ. ಕೂಡ ಇಲ್ಲ! ಎಂದಳು ಹುಬ್ಬುಗಂಟು ಹಾಕಿಕೊಂಡು.

"ಅಕ್ರಮ ಸಂಪಾದನೆಯಲ್ಲಿ ಅನ್ನ ತಿನ್ನೊದಕ್ಕಿಂತ, ನ್ಯಾಯ ನಿಯತ್ತುಗಳಿಂದ ಬಾಳಿ ಒಪ್ಪತ್ತು ಗಂಜಿ ಕುಡಿದರೂ ಸಾಕು, ನೆಮ್ಮದಿಯಾಗಿರಬಹುದು" ಎಂದನು ರಾಜು.

"ನಿಯತ್ತು ನಿಯತ್ತು ಅಂತಾ ಬಾಯಿ ಹರಿದು ಹೋಗೋ ಹಾಗೆ ಮಾತಾಡುವುದಕ್ಕಿಂತ ನನಗೆ ಸಂಪಾದನೆ ಮಾಡೋದಕ್ಕೆ ಆಗೋದಿಲ್ಲಾಂತ ಹೇಳಬಹುದಲ್ಲಾ" ಬೆಂಕಿಯ ಉಂಡೆಯಂತೆ ಮಾತಾಡಿದಳು ರಾಧಾ. ಮರು ಮಾತನಾಡದೆ ಹೊರಟು ಹೋದ ರಾಜು.

ಆ ದಿನ ಭಾನುವಾರ ಆದುದರಿಂದ ರಾಜು ಮನೆಯಲ್ಲೆಯೇ ಇದ್ದನು. ಪಕ್ಕದ ಮನೆಯ ರಮೇಶ ಬಂದನು. ಸಾಧಾರಣವಾಗಿ ರಮೇಶ ರಾಜುವಿನ ಮನೆ ಕಡೆ ತಿರುಗಿ ಸಹ ನೋಡುವುದಿಲ್ಲ. ಆದರೆ ರಾಜುವಿನ ಹೆಂಡತಿ ಆಗಿಂದಾಗ ಬಂದು ರಾಧಾಳ ತಿಳಿ ಮನಸ್ಸಿನಲ್ಲಿ ಕಲ್ಲೆಸೆದು ಹೋಗುತ್ತಿದ್ದಳು. ಈಗ ಈತನೇಕೆ ಬಂದನೆಂದು ಅರ್ಥವಾಗಲಿಲ್ಲ ರಾಜುಗೆ.

ಒಳಗಿನಿಂದ ಬಂದ ರಾಧಾ ರಮೇಶನನ್ನು ನೋಡಿ, "ಬನ್ನಿ ಅಣ್ಣಾ! ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದ ಹಾಗಾಯಿತು. ಮಾಲತಿ ಏಕೆ ಬರಲಿಲ್ಲ? ಕೂತ್ಕೊಳ್ಳಿ ಅಣ್ಣಾ!" ಎಂದಳು ಸಡಗರದಿಂದ.

"ರಾಜೂ! ನಿಮ್ಮಿಂದ ನನಗೆ ಒಂದು ಸಹಾಯ ಆಗಬೇಕು. ಅದಕ್ಕಾಗಿ ಬಂದಿದ್ದೇನೆ" ಎಂದನು ರಮೇಶ.

"ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳಿಗೆ ನನ್ನ ಆದಾಯದ ಮೇಲೆ ಅನುಮಾನ ಬಂದಿದೆ. ಯಾವ ಸಮಯದಲ್ಲಿ ಬೇಕಾದರೂ ನಮ್ಮ ಮನೆಯನ್ನು ತನಿಖೆ (ರೇಡ್) ಮಾಡಬಹುದೆಂದು ನನಗೆ ಇದೀಗ ಸುದ್ದಿ ಬಂತು. ದಯವಿಟ್ಟು ಈ ಲಕ್ಷ ರೂಪಾಯಿಗಳನ್ನು ನಿಮ್ಮ ಮನೆಯಲ್ಲಿ ಬಚ್ಚಿಡಿ. ಪ್ರತಿಫಲವಾಗಿ ನಾನು ನಿಮಗೆ ಹತ್ತು ಸಾವಿರ ಕೊಡುತ್ತೇನೆ" ಎಂದನು. ರಾಧಾಳ ಕಣ್ಣುಗಳಲ್ಲಿ ದೀಪ ಬೆಳಗಿತು. ರಾಜು ಹೆಂಡತಿಯನ್ನು ಕಠಿಣವಾಗಿ ನೋಡಲು, ಅವಳು ತಲೆ ಬಗ್ಗಿಸಿದಳು. ರಾಜು ತನ್ನ ಕೋಪವನ್ನು ಅಡಗಿಸಿಕೊಂಡು "ಈ ಪಾಪಿ ಹಣ ನಮ್ಮ ಮನೆ ಒಳಗೆ ಬಂದಿದ್ದೇ ನಮ್ಮ ಅವಮಾನವಾಗಿದೆ. ಇನ್ನು ಅಧಿಕಾರಿಗಳಿಗೆ ಅನುಮಾನ ಬಂದು ನಮ್ಮ ಮನೆಯಲ್ಲಿ ಹುಡುಕಿ ಪತ್ತೆ ಮಾಡಿದರೇ..." ಎಂದು ಆತನು ಹೇಳುತ್ತಿರುವುದನ್ನು ತಡೆದ "ಇಲ್ಲ... ಇಲ್ಲ... ಅವರಿಗೆ ನಿಮ್ಮ ಮೇಲೆ ಅನುಮಾನ ಬರುವುದಿಲ್ಲ. ನೀವು ತುಂಬಾ ನಿಯತ್ತಿನವರು, ನ್ಯಾಯದಿಂದ ಬಾಳುವವರು ಎಂದು ಆಫೀಸ್‌ನಲ್ಲಿ ಪ್ರತಿ ಒಬ್ಬರಿಗೂ ಗೊತ್ತು. ನನಗೂ ನಿಮ್ಮ ಹಾಗೆ ಇರಬೇಕೆಂದು ಆಸೆ ಇತ್ತು. ಆದರೆ ಸಾಧ್ಯವಾಗಲಿಲ್ಲ. ಅನ್ಯಾಯದ ಹಣದಲ್ಲಿ ಸುಖ ಅನುಭವಿಸುತ್ತಿದ್ದರೂ ಭಯದಿಂದ ಕ್ಷಣಕ್ಷಣವೂ ನಡುಗುತ್ತಿದ್ದೇನೆ. ನೆಮ್ಮದಿ ಇಲ್ಲದೆ ಬಾಳುತ್ತಿದ್ದೇನೆ. ನಿಮ್ಮನ್ನ ಕೇಳಲು ನನಗೆ ಮನಸ್ಸಿಲ್ಲ. ಆದರೆ ಮಾಲತಿ ಹೇಳಿದಳು, ನಿಮ್ಮವರಿಗೆ ಹಣದ ಆಸೆ ತೋರಿಸಿದರೆ ಒಪ್ಪಿಕೊಳ್ಳಬಹುದು ಅಂತ. ಸರಿ ನಾನಿನ್ನು ಬರುತ್ತೇನೆ." ಎಂದು ರಮೇಶ ಹೊರಟುಹೋದ.

ಆ ದಿನವೇ ಅಧಿಕಾರಿಗಳು ರಮೇಶನ ಮನೆಯನ್ನು ತನಿಖೆ ಮಾಡಿದರು. ಜನರೆಲ್ಲಾ ಅವರ ಮನೆಯ ಮುಂದೆ ಸೇರಿದರು. ಎಲ್ಲರೂ

ಆತನ ಅಕ್ರಮ ಸಂಪಾದನೆ ಬಗ್ಗೆ ಅಸಹ್ಯವಾಗಿ ಮಾತನಾಡಿದರು. ಈ ದೃಶ್ಯಗಳನ್ನೆಲ್ಲಾ ನೋಡಿದ ರಾಧಾಳ ಕಣ್ಣು ತೆರೆಯಿತು.

"ನನಗೆ ಈಗ ನಿಯತ್ತಿನ ಮೌಲ್ಯ ತಿಳಿಯಿತು. ನಿಮ್ಮನ್ನು ಅನ್ಯಾಯಕ್ಕೆ ಅನೀತಿಗೆ ಪ್ರೋತ್ಸಾಹಿಸಿದ ನನ್ನನ್ನು ಕ್ಷಮಿಸಿರಿ. ನೀವು ನಿಯತ್ತಿನ ಮನುಷ್ಯರಾದ ಕಾರಣ ದೃಢವಾಗಿ ತಿರಸ್ಕರಿಸಿದಿರಿ. ಇಲ್ಲದಿದ್ದರೇ...." ಎಂದು ನಡುಗಿದಳು.

"ರಾಧಾ! ಅನೀತಿಯ ಹಣ ಆರಂಭದಲ್ಲಿ ಎಲ್ಲ ಸುಖಗಳನ್ನು ಕೊಡುತ್ತದೆ. ನಂತರ ನಮ್ಮನ್ನು ಬೀದಿಯಲ್ಲಿ ನಿಲ್ಲಿಸಿ ಚಾಟಿಯಿಂದ ಹೊಡೆಯುತ್ತದೆ. ನಾವು ಇದ್ದುದರಲ್ಲಿಯೇ ಸಂತೋಷವಾಗಿ ಬಾಳಬೇಕು" ಎಂದನು ರಾಜು ನಗುತ್ತಾ.

– ನರೇಂದ್ರ

## ಶಬ್ದಗಳ ಅರ್ಥ

ಮೌಲ್ಯ– ಬೆಲೆ; ಇನ್‌ಕಮ್ ಟ್ಯಾಕ್ಸ್ – ಆದಾಯ ತೆರಿಗೆ; ಅನೀತಿ – ದುರ್ಮಾರ್ಗ; ದೃಢ – ನಿಶ್ಚಿತ

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ನಿಯತ್ತು ......................; ಗುಮಾಸ್ತ ..................;

ಅನುಮಾನ ..................; ತನಿಖೆ ......................

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ರಮೇಶನು ರಾಜುವಿನ ಮನೆಗೆ ಏಕೆ ಬಂದಿದ್ದನು?

.......................................................................................

ಆ) ರಾಜು ಏಕೆ ಭಯಭೀತನಾಗಿದ್ದನು?

.......................................................................................

ಇ) ರಾಧಾ ಏಕೆ ಪಶ್ಚಾತ್ತಾಪ ಪಟ್ಟಳು?

.......................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು–ಯಾರಿಗೆ ಹೇಳಿದರು.

ಅ) "ಹಬ್ಬದ ದಿನ ಬಟ್ಟೆಗಳನ್ನು ತಂದುಕೊಟ್ಟರೆ ಟೇಲರ್ ಯಾವಾಗ ಹೊಲಿದು ಕೊಡುತ್ತಾನೆ"?

ಉತ್ತರ ..........................................................................................

ಆ) "ಅಕ್ರಮ ಸಂಪಾದನೆಯಲ್ಲಿ ಅನ್ನ ತಿನ್ನೋದಕ್ಕಿಂತ ನ್ಯಾಯ ನಿಯತ್ತುಗಳಿಂದ ಬಾಳಿ ಒಪ್ಪತ್ತು ಗಂಜಿ ಕುಡಿದರೂ ಸಾಕು ನೆಮ್ಮದಿಯಾಗಿರಬಹುದು".

ಉತ್ತರ ..........................................................................................

ಇ) "ಬನ್ನಿ ಅಣ್ಣಾ! ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದಂತಾಯಿತು".

ಉತ್ತರ ..........................................................................................

ಈ) "ರಾಜು! ನಿಮ್ಮಿಂದ ನನಗೊಂದು ಸಹಾಯ ಆಗಬೇಕು ಅದಕ್ಕಾಗಿ ಬಂದಿದ್ದೇನೆ."

ಉತ್ತರ ..........................................................................................

ಪ್ರಶ್ನೆ ೪) ಯೋಚಿಸಿ ಈ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿರಿ.

ಅ) ನಿಯತ್ತಿನ ಉಸಿರು ರಾಜು ಹಾಗಾದರೆ ನಿಯತ್ತು ಅಂದರೆ ..............................

ಆ) ಹಬ್ಬ ಹತ್ತಿರ ಬರುತ್ತಿದೆ. ಮಕ್ಕಳಿಗೆ ಹೊಸ ಬಟ್ಟೆಗಳನ್ನು ತರುವ ಯೋಚನೆ ಇದೆಯೇ? ಹಾಗಾದರೆ ನೀವು ಆಚರಿಸುವ ಹಬ್ಬಗಳು ..............................

ಇ) ನ್ಯಾಯ, ನಿಯತ್ತುಗಳಿಂದ ಬಾಳಿ ಒಪ್ಪತ್ತು ಗಂಜಿ ಕುಡಿದರು ಸಾಕು ನೆಮ್ಮದಿಯಾಗಿರಬಹುದು. ಹಾಗಾದರೆ ಗಂಜಿ ಅಂದರೆ ..............................

ಈ) ಬನ್ನಿ ಅಣ್ಣಾ ಬಡವರ ಮನೆಗೆ ಭಾಗ್ಯಲಕ್ಷ್ಮಿ ಬಂದ ಹಾಗಾಯಿತು. ಹಾಗಾದರೆ ಭಾಗ್ಯಲಕ್ಷ್ಮಿ ಅಂದರೆ ..............................

**ಪ್ರಶ್ನೆ 3) ಕೆಳಗಿನ ಪಡೆನುಡಿಗಳ ಅರ್ಥ ಹೇಳಿ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.**

ಅ) ಕಣ್ಣುತೆರೆ ಆ) ಹುಬ್ಬುಗಂಟು ಹಾಕು

**ಉಪಕ್ರಮ:** ಲಾಲಬಹಾದ್ದೂರ ಶಾಸ್ತ್ರೀಯವರ ಜೀವನ ಚರಿತ್ರೆಯನ್ನು ಓದಿ ತಿಳಿದುಕೊಳ್ಳಿರಿ.

## ನಿಯತ್ತಿನ ಜೀವನ ಜನ್ಮ ಪಾವನ

**ಥಟ್ಟನೆ ಹೇಳಿ:**

ಎರಡು ಚಕ್ರವುಂಟು ಬಂಡಿಯಲ್ಲ
ದೀಪವುಂಟು ಶಿವಾಲಯವಲ್ಲ
ಗಂಟೆಯುಂಟು ದೇವಾಲಯವಲ್ಲ
ಸವಾರಿ ಮಾಡಬಹುದು ಕುದುರೆಯಲ್ಲ
ಹಾಗಾದರೆ ನಾನು ಯಾರು?

ಸೈಕಲ್



# ೩ ಬ್ಯಾಂಕು



(ಶಿಕ್ಷಕ ಮತ್ತು ವಿದ್ಯಾರ್ಥಿಗಳು ಕೂಡಿ ಬ್ಯಾಂಕಿಗೆ ಬರುತ್ತಾರೆ.)

**ಶಿಕ್ಷಕ** : ನಮಸ್ಕಾರಗಳು! ಶಾಖಾಧಿಕಾರಿ ಸಾಹೇಬರಿಗೆ.

**ಶಾಖಾಧಿಕಾರಿ** : ನಮಸ್ಕಾರ ಗುರುಗಳೆ. ಬನ್ನಿ. ಬನ್ನಿ.

**ವಿದ್ಯಾರ್ಥಿಗಳು** : ನಮಸ್ಕಾರ ಸಾಹೇಬರೆ.

**ಶಾಖಾಧಿಕಾರಿ** : ನಮಸ್ಕಾರ ಮಕ್ಕಳೆ ಬನ್ನಿ. ನಿಮಗೆಲ್ಲ ನಮ್ಮ ಬ್ಯಾಂಕಿನವತಿಯಿಂದ ಆದರದ ಸ್ವಾಗತ.

**ಶಿಕ್ಷಕ** : ಸರ್, ನಮ್ಮ ವಿದ್ಯಾರ್ಥಿಗಳು ಕ್ಷೇತ್ರಭೇಟಿ ಉಪಕ್ರಮದ ಅನ್ವಯ ತಮ್ಮೊಡನೆ ಸಂಭಾಷಣೆ ನಡೆಸಲು ಬಂದಿದ್ದಾರೆ. ದಯವಿಟ್ಟು ಸಹಕರಿಸುವಿರಾ?

**ಶಾಖಾಧಿಕಾರಿ** : ಆಗಲಿ ಗುರುಗಳೆ. ನಾನು ಪೂರ್ಣ ಮಾಹಿತಿ ಕೊಡುತ್ತೇನೆ.

**ಸಂಗೀತಾ** : ಸರ್, ಬ್ಯಾಂಕು ಎಂದರೇನು?

**ಶಾಖಾಧಿಕಾರಿ** : ಜನರ ಹಣವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವ, ಇಟ್ಟ ಹಣವನ್ನು ಖಾತೆದಾರರಿಗೆ ವಿಶ್ವಾಸ ಪೂರ್ವಕವಾಗಿ ಹಿಂತಿರುಗಿಸುವ ಮತ್ತು ಹಣದ ಅವಶ್ಯಕತೆಯುಳ್ಳವರಿಗೆ ಸಾಲದ ರೂಪದಲ್ಲಿ ಹಣ ಪೂರೈಕೆ ಮಾಡುವ ಸಂಸ್ಥೆ. ಒಟ್ಟಿನಲ್ಲಿ ಇದೊಂದು ನಾಗರಿಕ ಸೌಲಭ್ಯ ಕೇಂದ್ರ.

**ಸುಶಾಂತ** : ಸರ್, ಬ್ಯಾಂಕುಗಳಲ್ಲಿ ಎಷ್ಟು ಪ್ರಕಾರಗಳಿವೆ?

**ಶಾಖಾಧಿಕಾರಿ** : ಸಾರ್ವಜನಿಕ ವಲಯದ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ಎಂದು ಪ್ರಕಾರಗಳಿವೆ.

**ಪ್ರಜ್ವಲ** : ಸಾರ್ವಜನಿಕ ವಲಯದ ಬ್ಯಾಂಕುಗಳೆಂದರೆ ಯಾವುವು?

**ಶಾಖಾಧಿಕಾರಿ** : ಇದರಲ್ಲಿ ಮೂರು ವಿಭಾಗಗಳಿವೆ. ೧) ಭಾರತ ಸರಕಾರದ ಅಧಿಪತ್ಯದಲ್ಲಿರುವ ಹತ್ತೊಂಬತ್ತು ಬ್ಯಾಂಕುಗಳು. ಇವು ರಾಷ್ಟ್ರೀಕೃತ ಬ್ಯಾಂಕುಗಳು. ೨) ಸ್ಟೇಟ್ ಬ್ಯಾಂಕ್ ಸಮೂಹ ೩) ಖಾಸಗಿ ಬ್ಯಾಂಕುಗಳು.

**ಗಜಾನನ** : ಸರ್, ಗ್ರಾಮೀಣ ಬ್ಯಾಂಕುಗಳು ಎಂದರೆ ಯಾವವು?

**ಶಾಖಾಧಿಕಾರಿ** : ಗ್ರಾಮೀಣ ಪ್ರದೇಶದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸ್ಥಾಪಿಸಲಾದ ಬ್ಯಾಂಕುಗಳು. ಇವುಗಳ ಕಾರ್ಯಕ್ಷೇತ್ರ ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿರುತ್ತದೆ. ಈ ಬ್ಯಾಂಕುಗಳು ಗ್ರಾಮಸ್ಥರಿಂದ ಹಣವನ್ನು ಸಂಗ್ರಹಿಸುತ್ತವೆ. ಅದನ್ನು ತಿರುಗಿ ಗ್ರಾಮೀಣ ಜನರಿಗೆ ಕೃಷಿ, ಪಶುಪಾಲನೆ, ಗೃಹ, ಕೈಗಾರಿಕೆ, ಚಿಲ್ಲರೆ ವ್ಯಾಪಾರ ಮುಂತಾದ ಚಟುವಟಿಕೆಗಳಿಗೆ ಹಣಕಾಸಿನ ನೆರವು ನೀಡುತ್ತದೆ.

**ಸೌಮ್ಯ** : ಸರ್, ಸಹಕಾರಿ ಬ್ಯಾಂಕು ಅಂದರೇನು?

**ಶಾಖಾಧಿಕಾರಿ** : ಜನರು ತಮ್ಮ-ತಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಬ್ಯಾಂಕುಗಳನ್ನು ಸ್ಥಾಪಿಸುವುದು. ಈ ಬ್ಯಾಂಕುಗಳು ರಾಜ್ಯ ಸಹಕಾರಿ ಸಂಘಗಳ ನಿಯಮಗಳ ಪ್ರಕಾರ ಕೆಲಸ ಮಾಡುತ್ತವೆ.

**ಶಿಕ್ಷಕ** : ಸಾಹೇಬರೆ, ಇವರಿಗೆ “ಉಳಿತಾಯ ಖಾತೆ” ಪ್ರಾರಂಭಿಸುವ ವಿಧಾನವನ್ನು ಹೇಳಿರಿ.

**ಸಂಗೀತಾ** : ಗುರುಗಳೆ, ಉಳಿತಾಯ ಖಾತೆ ಎಂದರೇನು?

**ಶಾಖಾಧಿಕಾರಿ** : ಅದನ್ನು ನಾನು ಹೇಳುತ್ತೇನೆ. ನಿಮಗೆ ತಂದೆ-ತಾಯಿ ಅಥವಾ ಸಂಬಂಧಿಕರು ಪ್ರೀತಿಯಿಂದ ಖರ್ಚಿಗೆ ಹಣ ಕೊಟ್ಟರೆ ಅದನ್ನು ನೀವು ಹೇಗೆ ಖರ್ಚು ಮಾಡುತ್ತೀರಿ?

ಸೌಮ್ಯ : ಸ್ವಲ್ಪ ಹಣದಿಂದ ತಿಂಡಿ ತಿನ್ನುತ್ತೇನೆ. ಉಳಿದ ಹಣವನ್ನು ಉಳಿತಾಯ ಡಬ್ಬಿಯಲ್ಲಿ ಕೂಡಿಡುತ್ತೇನೆ.

ಶಾಖಾಧಿಕಾರಿ : ಡಬ್ಬಿಯಲ್ಲಿ ಕೂಡಿಡುವ ಹಣವನ್ನೇ ತಂದು ಬ್ಯಾಂಕಿನಲ್ಲಿ ಇಡುವುದು.

ಸುಶಾಂತ : ಅದು ಹೇಗೆ ಸಾಧ್ಯ ಸರ್!

ಶಾಖಾಧಿಕಾರಿ : ಸಾಧ್ಯವಿದೆ. ನೀವು ಬ್ಯಾಂಕಿನಲ್ಲಿ ಖಾತೆಯನ್ನು ಪ್ರಾರಂಭಿಸಬೇಕು. ಆಮೇಲೆ ನಿಮ್ಮ ಹಣವನ್ನು ಅದರಲ್ಲಿ ಜಮಾ ಮಾಡಲು ಬರುತ್ತದೆ.

ಸುಷ್ಮಿತಾ : ಖಾತೆಯನ್ನು ಪ್ರಾರಂಭಿಸುವ ವಿಧಾನ ಹೇಳಿರಿ ಸರ್.

ಶಾಖಾಧಿಕಾರಿ : ಹಣವಿಲ್ಲದೆಯೇ ಖಾತೆಯನ್ನು ಪ್ರಾರಂಭಿಸಬಹುದು. ವಿಳಾಸಕ್ಕಾಗಿ ನಿಮ್ಮ ಗುರುತಿನ ಚೀಟಿ, ಶಾಲೆಯ ಮುಖ್ಯಾಧ್ಯಾಪಕರಿಂದ ಪ್ರಮಾಣಪತ್ರ ಮತ್ತು ನಿಮ್ಮ ಸ್ವಂತದ ಮೂರು ಫೋಟೋಗಳು ಬೇಕು. ನಿಮ್ಮ ಸ್ವಂತದ ಮಾಹಿತಿಯನ್ನು ಸಂಬಂಧಿತ ಖಾತೆಯನ್ನು ಆರಂಭಿಸುವ ಫಾರ್ಮದಲ್ಲಿ ತುಂಬಿ ಸಹಿ ಮಾಡಿ ಕೊಡಬೇಕು. ಆಮೇಲೆ ಬ್ಯಾಂಕು ನಿಮಗೆ 'ಪಾಸ್‌ಬುಕ್' ನೀಡುತ್ತದೆ. ಆಗಾಗ ನೀವು ಮಾಡಿದ ಬ್ಯಾಂಕ್ ವ್ಯವಹಾರಗಳ ಮಾಹಿತಿ ಈ ಪಾಸ್‌ಬುಕ್‌ದಲ್ಲಿ ಬರೆದು ಕೊಡಲಾಗುವುದು.

ಗಜಾನನ : ಸರ್, ಬ್ಯಾಂಕಿನಲ್ಲಿ ಹಣ ಜಮಾ ಮಾಡುವುದು ಹೇಗೆ?

ಶಾಖಾಧಿಕಾರಿ : ಇದೋ ನೋಡಿರಿ. ಇದು ಚಲನ. ಇದರಲ್ಲಿ ನಿಮ್ಮ ಹೆಸರು, ಖಾತೆಯ ಕ್ರಮಾಂಕ, ಜಮಾ ಮಾಡುವ ಹಣದ ಮೊತ್ತ, ದಿನಾಂಕ ಇವೆಲ್ಲ ಯೋಗ್ಯವಾಗಿ ಬರೆದು, ನಿಮ್ಮ ಸಹಿ ಹಾಕಿ ಪೂರ್ತಿ ಮಾಡಿಕೊಟ್ಟರೆ ಆ ಹಣವನ್ನು ನಿಮ್ಮ ಖಾತೆಯಲ್ಲಿ ಜಮಾ ಮಾಡುತ್ತೇವೆ. ಪಾಸ್‌ಬುಕ್‌ದಲ್ಲಿ ಅದನ್ನು ಬರೆದು ಕೊಡುತ್ತೇವೆ.

ಸೌಮ್ಯ : ನಮಗೆ ಹಣದ ಆವಶ್ಯಕತೆಯಾದಾಗ ಅದನ್ನು ಹೇಗೆ ಹಿಂಪಡೆಯುವುದು ಸರ್?

ಶಾಖಾಧಿಕಾರಿ : ನೀವು ಬ್ಯಾಂಕಿಗೆ ಹಣ ತೆಗೆಯುವ ಚಲನನ್ನು ತುಂಬಿಕೊಟ್ಟರೆ ಅದು ನಿಮಗೆ ತಿರುಗಿ ದೊರೆಯುವುದು. ಇದು ಒಂದು ವಿಧಾನ. ಇನ್ನು "ಎ.ಟಿ.ಎಮ್." ನಿಂದ ಹಣಪಡೆಯುವುದು ಇನ್ನೊಂದು ವಿಧಾನ.

ಪ್ರಜ್ವಲ: : "ಎ.ಟಿ.ಎಮ್." ಅಂದರೇನು ಸರ್?

ಶಾಖಾಧಿಕಾರಿ : "ಎ.ಟಿ.ಎಮ್." ಅಂದರೆ 'ಅಟೋಮೇಟೆಡ್ ಟೆಲ್ಲರ್ ಮಶೀನ್' ಎಂದರ್ಥ. ಅದನ್ನೇ "ಎನಿ ಟೈಂ ಮನಿ" ಎಂದೂ ಹೇಳುತ್ತಾರೆ.

ದಿವಸದ ೨೪ ಗಂಟೆಗಳಲ್ಲಿ ನಿಮಗೆ ಯಾವಾಗ ಹಣದ ಆವಶ್ಯಕತೆಯೆನಿಸುತ್ತದೆಯೋ ಆಗ ಹಣವನ್ನು ಪಡೆಯುವ ವಿಧಾನ. ಈ ಯೋಜನೆಯ ಲಾಭ ಪಡೆಯಲು ನೀವು ಪಾಸ್‌ಬುಕ್ಕಿನಲ್ಲಿ ಕನಿಷ್ಟ ೫೦೦ ರೂಪಾಯಿಗಳನ್ನು ಬ್ಯಾಲನ್ಸ್ ಇಡಬೇಕಾಗುತ್ತದೆ. ಇವೆರಡರ ಹೊರತಾಗಿ ಇನ್ನೂ ಒಂದು ವಿಧಾನವಿದೆ. ಅದು ಚೆಕ್‌ಬುಕ್ ವಿಧಾನ. ನೀವು ಯಾರಿಗಾದರೂ ಹಣ ಕೊಡಬೇಕಾದರೆ ಚೆಕ್ ಮುಖಾಂತರ ಕೊಡಲು ಬರುತ್ತದೆ. ಇದರಿಂದ ಹಣ ಕೊಟ್ಟ ಬಗ್ಗೆ ದಾಖಲೆ ಸಿಗುತ್ತದೆ. ಅದೇ ರೀತಿ ಇಂದಿನ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಇ-ಬ್ಯಾಂಕಿಂಗ್ ಸೇವೆ ಮತ್ತು ಮೊಬೈಲ್ ಬ್ಯಾಂಕಿಂಗ್ ಸೇವೆ ಈ ರೀತಿ ಹಲವಾರು ಸೇವೆಗಳನ್ನು ಬ್ಯಾಂಕುಗಳು ಜನರಿಗೆ ಒದಗಿಸಿ ಕೊಡುತ್ತಿವೆ.

ಶಿಕ್ಷಕ : ಸಾಹೇಬರೆ, ನಮ್ಮ ವಿದ್ಯಾರ್ಥಿಗಳಿಗೆ ಬ್ಯಾಂಕಿನ ಬಗ್ಗೆ ಚೆನ್ನಾಗಿ ಮಾಹಿತಿ ನೀಡಿದಿರಿ. ನಿಮಗೆ ತುಂಬಾ ಧನ್ಯವಾದಗಳು.

ಶಾಖಾಧಿಕಾರಿ : ಧನ್ಯವಾದಗಳು ಗುರುಗಳೇ, ಮಕ್ಕಳ ಜೊತೆಗೆ ಚರ್ಚೆ ಮಾಡಿದ್ದಕ್ಕೆ ನನಗೂ ಸಂತೋಷವಾಯಿತು. ಮಕ್ಕಳೇ, ಇನ್ನು ಮುಂದೆ ನೀವು ಬ್ಯಾಂಕಿನ ಜೊತೆಗೆ ವ್ಯವಹಾರಮಾಡಿ ಸಂಪರ್ಕದಲ್ಲಿರಿ. ನಿಮಗೂ ಧನ್ಯವಾದಗಳು.

## ಶಬ್ದಗಳ ಅರ್ಥ

ಶಾಖಾಧಿಕಾರಿ – ವ್ಯವಸ್ಥಾಪಕ; ಅಭಿವೃದ್ಧಿ – ಪ್ರಗತಿ; ಫೋಟೋ – ಭಾವಚಿತ್ರ; ಜಮಾ – ಕೂಡಿಡು, ಸಂಗ್ರಹಿಸು

ಶಬ್ದಕೋಶದ ಸಹಾಯದಿಂದ ಕೆಳಗಿನ ಪದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಆದರ–............................;    ಅಧಿಪತ್ಯ –............................;

ಕೃಷಿ –............................;    ಹಿಂಪಡೆ – ............................;

ದಾಖಲೆ –............................;

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಬ್ಯಾಂಕು ಎಂದರೇನು?

.............................................................................................

.............................................................................................

ಆ) ಬ್ಯಾಂಕಿನಿಂದ ಹಣ ಪಡೆಯುವ ವಿಧಾನಗಳನ್ನು ವಿವರಿಸಿರಿ?

.............................................................................................

.............................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ, ಉತ್ತರ ಬರೆಯಿರಿ.

ಅ .............................................................................................

ಉತ್ತರ .............................................................................................

ಆ .............................................................................................

ಉತ್ತರ .............................................................................................

ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು.

ಅ) "ನಿಮಗೆಲ್ಲ ನಮ್ಮ ಬ್ಯಾಂಕಿನವತಿಯಿಂದ ಆದರದ ಸ್ವಾಗತ."

.............................................................................................

ಆ) "ಸಾಹೇಬರೆ, ಇವರಿಗೆ ಉಳಿತಾಯ ಖಾತೆ ಪ್ರಾರಂಭಿಸುವ ವಿಧಾನ ಹೇಳಿರಿ"

..........................................................................................

ಇ) "ಉಳಿತಾಯ ಖಾತೆ ಎಂದರೇನು ಸರ್?"

..........................................................................................

..........................................................................................

ಈ) "ನಮಗೆ ಹಣದ ಅವಶ್ಯಕತೆಯಾದಾಗ ಅದನ್ನು ಹೇಗೆ ಹಿಂಪಡೆಯುವುದು ಸರ್?"

..........................................................................................

ಉ) ಎ.ಟಿ.ಎಮ್. ಅಂದರೇನು ಸರ್?

..........................................................................................

ಪ್ರಶ್ನೆ ೪) ಯೋಚಿಸಿ ಈ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿರಿ.

ಅ) ನಮ್ಮ ವಿದ್ಯಾರ್ಥಿಗಳು ಕ್ಷೇತ್ರಭೇಟಿ ಉಪಕ್ರಮದ ಅನ್ವಯ ತಮ್ಮೊಡನೆ ಸಂಭಾಷಣೆ ನಡೆಸಲು ಬಂದಿದ್ದಾರೆ. ಹಾಗಾದರೆ ನಮ್ಮ ಶಾಲೆಯ ಉಪಕ್ರಮಗಳು ........................

ಆ) ಗ್ರಾಮೀಣ ಬ್ಯಾಂಕುಗಳು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಸಹಾಯ ಮಾಡುತ್ತವೆ. ಹಾಗಾದರೆ ನಿಮ್ಮ ಪರಿಸರದಲ್ಲಿರುವ ಸಹಕಾರಿ ಸಂಘಗಳ ಹೆಸರು ..............................

ಇ) ಸ್ವಲ್ಪ ಹಣ ಖರ್ಚುಮಾಡಿ ಉಳಿದ ಹಣವನ್ನು ಉಳಿತಾಯ ಡಬ್ಬಿಯಲ್ಲಿ ಕೂಡಿಡುತ್ತೇವೆ. ಹಾಗಾದರೆ ಉಳಿತಾಯ ಮಾಡಬಹುದಾದ ಇತರ ವಸ್ತುಗಳು ..............................

ಈ) ಚೆಕ್ ಮುಖಾಂತರ ಹಣಕೊಟ್ಟರೆ ದಾಖಲೆ ಸಿಗುತ್ತದೆ. ಹಾಗಾದರೆ ಮರ ಬೆಳೆಸಿದರೆ ..............................

ಪ್ರಶ್ನೆ ೫) ಈ ಪಾಠದಲ್ಲಿ ಬರುವ ಇಂಗ್ಲಿಷ್ ಶಬ್ದಗಳನ್ನು ಆರಿಸಿ ಬರೆಯಿರಿ.

..........................................................................................

ಪ್ರಶ್ನೆ ೬) ಕೆಳಗಿನ ಗದ್ಯಖಂಡವನ್ನು ಓದಿ, ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ನೀರು ನಿಸರ್ಗದ ಕೊಡುಗೆ. ಅದು ಸೀಮಿತವಾಗಿದೆ. ಆದ್ದರಿಂದ ನೀರನ್ನು ಹಿತಮಿತವಾಗಿ ಬಳಸಬೇಕು. ಕುಡಿಯುವ ನೀರನ್ನು ಪರೀಕ್ಷೆಗೆ ಒಳಪಡಿಸಬೇಕು. ಅವಶ್ಯಕತೆ ಕಂಡು ಬಂದರೆ ಅದರಲ್ಲಿ ಜಂತುನಾಶಕ ಔಷಧಿಯನ್ನು ಬೆರೆಸಬೇಕು. ಮನೆಯಲ್ಲಿ ಕುಡಿಯುವ ನೀರನ್ನು ಎತ್ತರ ಸ್ಥಳದಲ್ಲಿ ಇಡಬೇಕು. ಅದರಲ್ಲಿ ಧೂಳು ಬೀಳದಂತೆ ಜಾಗ್ರತೆ ವಹಿಸಬೇಕು. ಶುದ್ಧ ನೀರು ಕುಡಿಯುವುದರಿಂದ ಆರೋಗ್ಯ ಚೆನ್ನಾಗಿರುತ್ತದೆ. ನಲ್ಲಿಯಿಂದ ನೀರು ವ್ಯರ್ಥವಾಗಿ ಹರಿದು ಹೋಗದಂತೆ ಎಚ್ಚರವಹಿಸಬೇಕು. ಬಳಸಿದ ನೀರಾಗಲಿ, ಮಳೆಯ ನೀರಾಗಲಿ ನೆಲದಲ್ಲಿ ಇಂಗುವಂತೆ ವ್ಯವಸ್ಥೆ ಮಾಡಬೇಕು. ಇದರಿಂದ ಅಂತರ್ಜಲದ ಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

ಪ್ರಶ್ನೆ ಅ) ನೀರನ್ನು ಏಕೆ ಹಿತಮಿತವಾಗಿ ಬಳಸಬೇಕು?

..........................................................................................................

ಆ) ಅಂತರ್ಜಲದ ಮಟ್ಟವು ಹೇಗೆ ಹೆಚ್ಚಾಗುತ್ತದೆ?

..........................................................................................................

**ಉಪಕ್ರಮ:**

ಅಂಚೆ ಕಚೇರಿಗೆ ಭೇಟಿನೀಡಿ ವಿವಿಧ ಯೋಜನೆಗಳ ಕುರಿತು ಮಾಹಿತಿ ಪಡೆಯಿರಿ.

**ಇಂದಿನ ಉಳಿತಾಯ ಮುಂದಿನ ಜೀವನ ಸುಖಮಯ**

**ಥಟ್ಟನೆ ಹೇಳಿ:**

ನೋಡುವುದಕೆ ಹುಡುಗ
ಆಡುವುದಕೆ ಬಾಯಿಲ್ಲ
ನಡೆಯುವುದಕೆ ಕಾಲಿಲ್ಲ
ಊರೂರು ತಿರಗತಾನೆ
ಮನಸ್ಸಿನಾಗಿನ ಮಾತು ಹೇಳತಾನೆ


ಔಷ

## ವ್ಯಾಕರಣ

ಕೆಳಗಿನ ಶಬ್ದಗಳನ್ನು ನಿರೀಕ್ಷಿಸಿರಿ.

ಅರಸ, ಆಟ, ಓಟ, ಇಲಿ, ಊಟ, ಎಲೆ, ಏಡಿ

'ಸ್ವರ' ಎಂದರೆ ಬೇರೆ ಅಕ್ಷರಗಳ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು ಕನ್ನಡ – ವರ್ಣಮಾಲೆಯಲ್ಲಿ ಒಟ್ಟು ೧೩ ಸ್ವರಗಳಿವೆ.




ಸೂಚನೆ – ಹಳದಿ ಹೂಗಳಲ್ಲಿರುವ ಅಕ್ಷರಗಳು ಹ್ರಸ್ವಸ್ವರಗಳು. ಗುಲಾಬಿ ಹೂಗಳಲ್ಲಿರುವ ಅಕ್ಷರಗಳು ದೀರ್ಘಸ್ವರಗಳು.

ಹ್ರಸ್ವಸ್ವರ:– ಸ್ವಲ್ಪ ಸಮಯದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು.

ದೀರ್ಘಸ್ವರ:– ಹೆಚ್ಚು ಸಮಯದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು.

ಯೋಗವಾಹಗಳು:– ಸ್ವರದ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳು ಅಂ, ಅಃ.

'ಂ' ಇದಕ್ಕೆ ಅನುಸ್ವಾರ ಎಂದು ಕರೆಯುವರು.

'ಃ' ಇದಕ್ಕೆ ವಿಸರ್ಗ ಎಂದು ಕರೆಯುವರು.

B6R2AG

# ೪ ಹೆಮ್ಮೆ ನನಗೆ ಅಮ್ಮ

ಹೆಮ್ಮೆ ನನಗೆ ಅಮ್ಮ ನಿನ್ನ
ತಾಯಿಯೆಂದು ಕರೆಯಲು
ಕಂದನೆಂಬ ನಿನ್ನ ಪ್ರೀತಿ
ಸವಿಯು ಜೇನಿಗಿಂತಲೂ ॥೧॥

ಏನೂ ತಾನೆ ಇದ್ದರೂ
ನಿನಗೂ ಸಿರಿವಂತರು?
ಇರುವರೇನು ಧರೆಯೊಳಲ್ಲಿ
ನಿನಗೂ ಧೀಮಂತರು ॥೨॥

ಬಾಳಿ ಬಂದ ಗರಿಮೆಯಲ್ಲಿ
ಯಾರು ಸಮಕೆ ಬರುವರು
ತಾಳಿ ನಿಂತ ಸಹನೆಯಲ್ಲಿ
ನಿನ್ನ ಯಾರು ಗೆಲುವರು? ॥೩॥

ಪ್ರಾಚೀನಿ ಎನಿಸಿದರೂ
ಚಿರನೂತನೆ ನೀನು
ವೇದ ಮೂಲವಾದ ಜ್ಞಾನ-
ಸುಧೆಗೆ ನೀನು ಧೇನು ॥೪॥

ಕೋಟಿ ಕೋಟಿ ಬೆಳಗು ಅರಳಿ
ನಿನ್ನ ಪಾದ ತೊಳೆದಿವೆ
ನಿನ್ನ ಕಾಣಲೆಂದೆ ಚಂದ್ರ
ತಾರೆ ನಭದಿ ನೆರೆದಿವೆ ॥೫॥

ನನ್ನ ಮನದಿ ಅರಳುತ್ತಿದೆ
ತಾಯಿ ನಿನ್ನ ರೂಪ
ಕಂಪು ಬೀರಿ ಸುತ್ತಲೆಲ್ಲ
ಹರಡಿ ನಿಲುವ ಧೂಪ ॥೬॥



– ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ

## ಶಬ್ದಗಳ ಅರ್ಥ

ಕಂದ – ಮಗು; ಧರೆ – ಭೂಮಿ ; ಧೀಮಂತ – ಬುದ್ಧಿವಂತ;

ಗರಿಮೆ – ಹಿರಿಮೆ; ಪ್ರಾಚೀನ – ಪುರಾತನ; ಸಮಕೆ – ಸಮಾನ;

ಜ್ಞಾನಸುಧೆ – ಜ್ಞಾನಾಮೃತ;

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಹೆಮ್ಮೆ– ..........................; ಸವಿ– ..............................;

ನಭ– ..............................; ಧೂಪ–............................

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಜೇನಿಗಿಂತಲೂ ಯಾವುದು ಸವಿಯಾಗಿದೆ?

..........................................................................................

ಆ) ಯಾವ ವಿಷಯದಲ್ಲಿ ತಾಯಿಯನ್ನು ಗೆಲ್ಲಲು ಸಾಧ್ಯವಿಲ್ಲ?

..........................................................................................

ಇ) ಯಾವುದರಲ್ಲಿ ತಾಯಿ ಧೇನು ಆಗಿದ್ದಾಳೆ?

..........................................................................................

ಈ) ಮಗುವಿನ ಮನದಲ್ಲಿ ಏನು ಅರಳುತ್ತಿದೆ?

..........................................................................................

೨) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಮಾಡಿರಿ.

ಕೋಟಿ ಕೋಟಿ ....................................

..........................................................

..........................................................

..........................................................

..........................................................ನೆರೆದಿವೆ.

ಪ್ರಶ್ನೆ ೩) ಕೆಳಗಿನ ಮುಖ್ಯಾಂಶಗಳ ಆಧಾರದ ಮೇಲೆ ಕಥೆ ರಚಿಸಿರಿ.

ಶ್ರವಣಕುಮಾರ ...................... ತೀರ್ಥಯಾತ್ರೆ ............................

ಬಾಯಾರಿಕೆ .......................... ಬುಡುಬುಡುಶಬ್ದ .......................

ದಶರಥ ಮಹಾರಾಜ! ಅಯ್ಯೋ! ಅಮ್ಮಾ! ............................

ನೀರು ಕುಡಿಯಿರಿ ............................ ಪುತ್ರವಿಯೋಗ ಶಾಪ.

ಪ್ರಶ್ನೆ ೪) ನಿಮಗೆ ಗೊತ್ತಿರುವ ಕವಿತೆಯ ಒಂದು ನುಡಿ ಬರೆಯಿರಿ.

...............................................................

...............................................................

...............................................................

ಉಪಕ್ರಮ:

ಶಿವರಾಯರ ಬೆಳವಣಿಗೆಯಲ್ಲಿ ಜೀಜಾಮಾತೆಯ ಪಾತ್ರ ಕುರಿತು ಐದು ಸಾಲು ಬರೆಯಿರಿ.

...............................................................

...............................................................

ತಾಯಿಯ ಒಡಲು ಮಮತೆಯ ಕಡಲು

ಥಟ್ಟನೆ ಹೇಳಿ:

ಎರಡಕ್ಷರ ಹೊಂದಿದವಳು

ಪ್ರೀತಿಯಲಿ ಭೂಮಿಗಿಂತ ಭಾರದವಳು

ಪ್ರತಿಮನೆಯ ಬೆಳಕಿವಳು

ಹಾಗಾದರೆ ಇವಳಾರು? ᘎᘏᘍᘐ

# ೩ ಜೋಗ ಜಲಪಾತ



ಕರ್ನಾಟಕ ಅಂದಕೂಡಲೇ ನಮ್ಮ ನೆನಪಿಗೆ ಬರುವುದು ಜೋಗ ಜಲಪಾತ. ಇದು ವಿಶ್ವವಿಖ್ಯಾತವಾದ ಒಂದು ಜಲಪಾತ. ಶಿವಮೊಗ್ಗ ಜಿಲ್ಲೆಯಲ್ಲಿ ಶರಾವತಿ ಎಂಬುದೊಂದು ಸಣ್ಣ ನದಿ ಇದೆ. ಈ ಶರಾವತಿ ಹೊಸನಗರ, ಸಾಗರ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಹರಿದು ಮುಂದೆ ಅರಬೀ ಸಮುದ್ರವನ್ನು ಸೇರುತ್ತದೆ. ಈ ನದಿಯ ಉದ್ದ ೧೩೬ ಕಿಲೋಮೀಟರ್. ಇದು ಆರಂಭದಲ್ಲಿ ಕೇವಲ ಸಮತಟ್ಟಾದ ನೆಲದ ಮೇಲೆಯೇ ಹರಿಯುತ್ತದೆ. ಸಾಗರ ತಾಲೂಕಿನ ಜೋಗದ ಬಳಿ ಕೊರಕಲಿಗೆ ಹಾರಿ ಮುಂದೆ ಮತ್ತೆ ಕಣಿವೆಯಲ್ಲಿ ಹರಿಯುತ್ತದೆ. ಗೇರಸೊಪ್ಪೆ ಎಂಬಲ್ಲಿ ವಿಶಾಲವಾಗಿ ಹರಿದು ಹೊನ್ನಾವರದ ಬಳಿ ಸಮುದ್ರವನ್ನು ಸೇರುತ್ತದೆ. ಈ ಪ್ರಯಾಣದ ನಡುವೆ ಶರಾವತಿ ಎರಡು ಜಲಪಾತಗಳಿಗೆ ಜನ್ಮ ನೀಡುತ್ತದೆ. ಒಂದು ನಮಗೆಲ್ಲ ಗೊತ್ತಿರುವ ಜೋಗ ಜಲಪಾತ. ಇನ್ನೊಂದು ಅಂಬುತೀರ್ಥದ ಬಳಿಯೇ ಇರುವ ಕನ್ಯಾ ಜಲಪಾತ.

ಶರಾವತಿಯ ಎರಡನೇ ಜಿಗಿತವೇ ಜೋಗ. ಈ ವಿಶ್ವವಿಖ್ಯಾತ ಜಲಪಾತವು ನಾಲ್ಕು ಕವಲುಗಳಾಗಿ ಧುಮುಕುತ್ತದೆ. ರಾಜಾ, ರೋರರ್, ರಾಕೆಟ್, ರಾಣಿ. ಈ ನಾಲ್ಕು ಕವಲುಗಳು. ನದಿ ೨೯೩

ಮೀಟರ ಎತ್ತರದಿಂದ ಪ್ರತಾಪಕ್ಕೆ ಧುಮುಕುವುದೇ ಒಂದು ಚೆಂದ.

ಹೆಸರಿಗೆ ತಕ್ಕಂತೆ ರಾಜಾ ಅತೀ ಎತ್ತರದಿಂದ ಧುಮುಕುತ್ತಾನೆ. ಮೇಲಿಂದ ಮೈ ಚಳಿ ಬಿಟ್ಟು ಹಾರಿದವನು, ನೇರವಾಗಿ ಕೆಳಗಿನ ಪ್ರತಾಪಕ್ಕೇನೆ ಬಂದು ಬೀಳುತ್ತಾನೆ. ಅವನ ಧೈರ್ಯ, ದಿಟ್ಟತನ, ಎದೆಗಾರಿಕೆ ಮೆಚ್ಚಬೇಕು. ಆದರೆ ರೋರರ್ ಹಾಗಲ್ಲ. ಆತ ನಡುವೆ ಎಲ್ಲಿಂದಲೋ ಬಂದು ರಾಜನಿಗೆ ತೆಕ್ಕೆ ಬೀಳುತ್ತಾನೆ. ಅಬ್ಬರವೆಲ್ಲ ಅವನದ್ದೇ. ಹೀಗಾಗಿ ಈತನಿಗೆ ರೋರರ್ ಎಂದು ಹೆಸರು. ಮೂರನೆಯ ಜಲಪಾತವೇ ರಾಕೆಟ್. ಬಂಡೆಗೆ ಬಡಿದ ನೀರು ಚಿಮ್ಮಿ ಬಿಟ್ಟ ರಾಕೆಟ್ಟುಗಳ ಹಾಗೆ ಕೆಳಗೆ ಬೀಳುವುದು ಸುಂದರ ನೋಟ. ನೀರು ಇಲ್ಲಿ ಛಿದ್ರ ಛಿದ್ರವಾಗುತ್ತದೆ. ನಾಲ್ಕನೆಯದಾದ ರಾಣಿ ಹೆಸರಿಗೆ ತಕ್ಕಂತೆ ರಾಣಿಯೇ. ನಡುವೆ ಸಿಗುವ ಬಂಡೆಗಳ ಮೇಲೆ ಮೈ ಚಾಚುತ್ತ, ಬಳುಕಿ ಬಾಗುತ್ತ, ನಿಧಾನವಾಗಿ ರಾಣಿ ಕೆಳಗಿನ ಪ್ರಪಾತಕ್ಕೆ ಇಳಿಯುತ್ತಾಳೆ.

ಜೋಗ ಜಲಪಾತದಲ್ಲಿಯ ಈ ವೈವಿಧ್ಯತೆ ಪ್ರಪಂಚದ ಬೇರೆ ಯಾವ ಜಲಪಾತಗಳಲ್ಲೂ ಇಲ್ಲ. ನಯಾಗರ ಜಲಪಾತ ಒಂದೇ ಸಮನೆ ಬೀಳುತ್ತದಲ್ಲದೆ, ಅದರಲ್ಲಿ ವಿಶೇಷತೆ ಇಲ್ಲ. ಹೀಗಾಗಿ ಜೋಗ್ ಜಲಪಾತಕ್ಕೆ ಒಂದು ಭಿನ್ನತೆ, ವೈಶಿಷ್ಟ್ಯ ಇದೆ.

ನೀರು ವಿಶಾಲವಾದ ಕರಿ ಬಂಡೆಯ ಮೇಲೆ ನೊರೆ ನೊರೆಯಾಗಿ ಬೀಳುವುದು ನಯನ ಮನೋಹರ. ಮಳೆಗಾಲದಲ್ಲಂತೂ ನಾಲ್ಕೂ ಜಲಪಾತಗಳು ಒಂದಾಗಿ ಬೀಳುತ್ತವೆ. ರಭಸಕ್ಕೆ ನೆತ್ತಿಯ ಮೇಲಿನ ಬಂಗಲೆಯ ಕಿಟಕಿ ಬಾಗಿಲುಗಳು ಕಂಪಿಸುತ್ತವೆ. ಸುತ್ತ ಮಂಜು ಕವಿದು ಜಲಪಾತದ ಮುಂದೆ ಬಿಳಿ ಮಂಜಿನ ಪರದೆ ಕವಿಯುತ್ತದೆ. ಜನ ಜಲಪಾತ ನೋಡಲು ಗಂಟೆಗಟ್ಟಲೆ ಕಾಯಬೇಕಾಗುತ್ತದೆ.

ಈ ಜಲಪಾತದ ಕೆಳಗಿನ ಕಣಿವೆಗೆ ಹೋಗಿ ಜಲಪಾತವನ್ನು ನೋಡುವುದು ಮತ್ತೊಂದು ಅನುಭವ, ಅಲ್ಲಿ ನಾಲ್ಕೂ ಜಲಪಾತಗಳು ನಮ್ಮ ತಲೆಯ ಮೇಲೆ ಕವಚಿಕೊಂಡಂತೆ ಭಾಸವಾಗುತ್ತದೆ. ನಮಗೆ ಶವರ್ ಸ್ನಾನ ಮಾಡಿಸುತ್ತವೆ. ಜಲಪಾತಗಳ ಭೀಕರ ದರ್ಶನ ಆಗಬೇಕೆಂದರೆ ನಾವು ಕೆಳಗಿನ ಕಣಿವೆಗೆ ಹೋಗಬೇಕು. ಅಲ್ಲಿಯ ದೃಶ್ಯವನ್ನು ಕಂಡಾಗ ಎದೆ ಝಲ್ಲೆನ್ನುತ್ತದೆ.

ಅಂತೆಯೇ ಜಲಪಾತದ ನಿಜವಾದ ಸೌಂದರ್ಯ ಸವಿಯಬೇಕೆಂದರೆ ಎದುರಿನಲ್ಲಿ ನಿಂತು ಅದರ ನೆತ್ತಿಯ ಮೇಲಿನಿಂದ ನೋಡಬೇಕು. ನೇರವಾಗಿ ಧುಮುಕುವ ರಾಜ, ಪಕ್ಕದ ಬಂಡೆಯ ಮರೆಯಿಂದ ನುಗ್ಗಿ ಬರುವ ರೋರರ್, ಬಂಡೆಗಳಿಗೆ ಬಡಿದು ಸಿಡಿಯುವ ರಾಕೆಟ್, ಬಂಡೆಗಳ ಮೇಲೆ ಲಾಸ್ಯವಾಡುತ್ತ ಇಳಿಯುವ ರಾಣಿ ಅಬ್ಬಾ! ಎಂತಹ ಅದ್ಭುತ! ಇಲ್ಲಿ ಈ ಜಲಪಾತಗಳಿಗೆ ಅಚ್ಚ ಕನ್ನಡದ ಹೆಸರುಗಳನ್ನೂ ಇರಿಸಿದ್ದಾರೆ. ರಾಜ ತಡಸಲು, ಅಬ್ಬರದ ತಡಸಲು, ಬಾಣ ತಡಸಲು, ರಾಣಿ ತಡಸಲು, ಇಲ್ಲಿ ಇರಿಸಿರುವ ಹೆಸರುಗಳು.

ಜೋಗ ಜಲಪಾತದ ಸುತ್ತ ಜಲಪಾತವನ್ನು ವೀಕ್ಷಿಸಲು ಕೆಲವೊಂದು ವೀಕ್ಷಕ ತಾಣಗಳನ್ನು ಮಾಡಿದ್ದಾರೆ. ಕೆಳಗಿನ ಕಣಿವೆಯಲ್ಲಿ ಕೂಡ ಕೆಲ ತಾಣಗಳಿವೆ. ರಾಣಿ ಸೀಟ್, ಕರ್ಜನ್ ಸೀಟ್, ವಾಣಿವಿಲಾಸ ಪ್ಲ್ಯಾಟ್‌ಫಾರ್ಮ್, ವಿಂಬಲ್ಡನ್ ಪ್ಲ್ಯಾಟ್‌ಫಾರ್ಮ್ ಎಂದೆಲ್ಲ ಸೀಟುಗಳಿವೆ. ಜಲಪಾತದ ಆ ಬದಿಯಲ್ಲಿ ಪ್ರತಿಯೊಂದು ಜಲಪಾತ ನೋಡಲು ರಾಜಾ ಸೀಟ್, ರಾಣಿ ಸೀಟ್ ಎಂದೆಲ್ಲ

ವೀಕ್ಷಕ ತಾಣಗಳಿವೆ. ಇಲ್ಲಿಂದ ಜಲಪಾತ ವಿಶೇಷವಾಗಿ ಗೋಚರಿಸುತ್ತದೆ.

ಅನೇಕ ವಿಶ್ವವಿಖ್ಯಾತರು ಜೋಗ ಜಲಪಾತವನ್ನು ನೋಡಿ ಹೋಗಿದ್ದಾರೆ. ೧೯೧೫ ರಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಇಲ್ಲಿಗೆ ಬಂದರು. "ಎಂತಹಾ ದೊಡ್ಡ ನಷ್ಟ ನಮ್ಮ ದೇಶಕ್ಕೆ" ಅನ್ನುವ ಮಾತನ್ನು ಹೇಳಿಹೋದರು. ಅವರ ಮಾತಿನ ಅರ್ಥವೆಂದರೆ ನೀರಿನ ಶಕ್ತಿ ವ್ಯರ್ಥವಾಗುತ್ತದಲ್ಲ ಎಂಬುದು. ಮುಂದೆ ಶರಾವತಿ ನದಿಯಿಂದ ವಿದ್ಯುತ್ತನ್ನು ಉತ್ಪಾದಿಸುವ ಕೆಲಸ ಪ್ರಾರಂಭವಾಯಿತು. ಜೋಗದಲ್ಲಿಯೂ ಎರಡು ಕಡೆಗಳಲ್ಲಿ ವಿದ್ಯುತ್ ಉತ್ಪಾದಕ ಯಂತ್ರಗಳನ್ನು ಸ್ಥಾಪಿಸಿದರು. ಒಂದು ಮಹಾತ್ಮಾಗಾಂಧಿ ವಿದ್ಯುದಾಗಾರ ಮತ್ತೊಂದು ಶರಾವತಿ ವಿದ್ಯುದಾಗಾರ.

ಈಗ ಜೋಗ ಅಭಿವೃದ್ಧಿ ಪ್ರಾಧಿಕಾರ ಜೋಗ ಜಲಪಾತವನ್ನು ಉಳಿಸಿಕೊಂಡು ಬರಲಿಕ್ಕೆ ಕೆಲಸ ಮಾಡುತ್ತಿದೆ. ಜೋಗ ಜಲಪಾತವನ್ನು ನಾವು ಉಳಿಸಿಕೊಂಡು ಬರಬೇಕಿದೆ. ಮೂಗೂರು ಮಲ್ಲಪ್ಪ ಎಂಬ ಲಾವಣಿಕಾರ ಜೋಗದ ಬಗ್ಗೆ ಒಂದು ಪ್ರಖ್ಯಾತ ಲಾವಣಿಯನ್ನು ' ಬರೆದಿದ್ದಾನೆ. ಅವನು ಹೀಗೆ ಹೇಳುತ್ತಾನೆ ?

"ಮಾನವನಾಗಿ ಹುಟ್ಟಿದಮೇಲೆ ಏನೇನ್ ಕಂಡಿ
ಸಾಯೋತನಕ ಸಂಸಾರದೊಳಗೆ ಗಂಡಾ ಗುಂಡಿ
ಹೇರಿಕೊಂಡು ಹೋಗೋದಿಲ್ಲ ಸತ್ತಾಗ ಬಂಡಿ
ಇರೋದ್ರೊಳಗೆ ನೋಡು ಒಮ್ಮೆ ಜೋಗದ್ ಗುಂಡಿ"

ಈ ಕಾರಣಕ್ಕೆ ಜೋಗ ಜಲಪಾತವನ್ನು ನೋಡುವ ಅವಕಾಶವನ್ನು ಯಾರೂ ತಪ್ಪಿಸಿಕೊಳ್ಳಬಾರದು.

ಜೋಗ ಜಲಪಾತದ ಸುಂದರ ನಿಸರ್ಗ ತಾಣವನ್ನು ನೋಡಿ ತಣಿಯಲು ಜಗತ್ತಿನ ಎಲ್ಲ ಮೂಲೆಗಳಿಂದ ಜನರು ಆಗಮಿಸುತ್ತಿದ್ದಾರೆ. ಈ ತಾಣಕ್ಕೆ ಬರಲು ಉತ್ತಮ ರಸ್ತೆ, ತಂಗಲು ಉತ್ತಮ ದರ್ಜೆಯ ವಸತಿ ಹೋಟೆಲುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಅರಣ್ಯ ಇಲಾಖೆ ಮತ್ತು ಸ್ಥಳೀಯರು ಜೋಗದ ಪರಿಸರ ಮಲೀನವಾಗದಂತೆ ಕಟ್ಟೆಚ್ಚರವಹಿಸಿದ್ದಾರೆ. ಇದಕ್ಕೆ ಪ್ರವಾಸಿಗರೂ ಸಕರಾತ್ಮಕವಾಗಿ ಸ್ಪಂದಿಸಿ ನಿಸರ್ಗಕ್ಕೆ ಅಪಚಾರವಾಗದಂತೆ ಜೋಗ ಜಲಪಾತದ ಚೆಲುವನ್ನು ಹೆಚ್ಚಿಸಿದ್ದಾರೆ.

## ಶಬ್ದಗಳ ಅರ್ಥ

ಧುಮುಕು – ಕೆಳಗೆ ಬೀಳು; ಪ್ರಪಾತ – ಆಳ, ತಗ್ಗು; ಮನೋಹರ – ಸುಂದರ

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ನಯನ– ............................; ನೊರೆ– ..............................;

ಕಂಪಿಸು– ...........................; ವಿಷಾದ– ............................

ಪ್ರಶ್ನೆ: ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಕರ್ನಾಟಕ ಅಂದ ಕೂಡಲೆ ನಮ್ಮ ನೆನಪಿಗೆ ಬರುವುದು ಯಾವ ಜಲಪಾತ?

.............................................................................................

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಯಾವ ನದಿ ಇದೆ?

.............................................................................................

ಇ) ಯಾವುದು ನಯನ ಮನೋಹರವಾಗಿದೆ?

.............................................................................................

ಪ್ರಶ್ನೆ: ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಪ್ರಶ್ನೆ ಅ) .............................................................................................

ಉತ್ತರ– .............................................................................................

ಪ್ರಶ್ನೆ ಆ) .............................................................................................

ಉತ್ತರ– .............................................................................................

ಪ್ರಶ್ನೆ ೩) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಜಲಪಾತದ ನಾಲ್ಕು ಕವಲುಗಳು ಯಾವುವು?

.............................................................................................

.............................................................................................

ಆ) ರಾಕೆಟಿನ ಸುಂದರ ನೋಟ ಯಾವುದು?

.............................................................................................

.............................................................................................

ಇ)  ಜಲಪಾತದ ವೀಕ್ಷಕ ತಾಣಗಳನ್ನು ಹೆಸರಿಸಿರಿ.

..........................................................................................

..........................................................................................

ಪ್ರಶ್ನೆ ೪)  ಯೋಚಿಸಿ ಈ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿರಿ.

ಅ)  ಶರಾವತಿ ನದಿಯು ಅರಬೀ ಸಮುದ್ರವನ್ನು ಸೇರುತ್ತದೆ. ಅದರಂತೆ ಅರಬೀಸಮುದ್ರಸೇರುವ ನದಿಗಳು ................................

ಆ)  ಶರಾವತಿ ನದಿಯಿಂದ ಜಲವಿದ್ಯುತ್ತನ್ನು ಉತ್ಪಾದಿಸುತ್ತಾರೆ. ಹಾಗಾದರೆ ವಿದ್ಯುತ್ ಉತ್ಪಾದಿಸುವ ಇತರ ವಿಧಾನಗಳು ................................

ಇ)  ಶರಾವತಿ ನದಿಯು ಶಿವಮೊಗ್ಗ ಜಿಲ್ಲೆಯಲ್ಲಿದೆ. ಹಾಗಾದರೆ ನಿಮ್ಮ ಜಿಲ್ಲೆಯಲ್ಲಿ ಇರುವ ನದಿಗಳು ................................................

ಉಪಕ್ರಮ: ಶೈಕ್ಷಣಿಕ ಪ್ರವಾಸದ ಮುಖಾಂತರ ಜಲಪಾತ ಹಾಗೂ ಆಣೆಕಟ್ಟುಗಳನ್ನು ನಿರೀಕ್ಷಿಸಿರಿ:

## ಹರಿಯುವ ಹೊಳೆ ನಾಡಿಗೆ ಕಳೆ


ಥಟ್ಟನೆ ಹೇಳಿ:

ಕಾಲಿಲ್ಲದೆ ನಡೆಯುವುದು

ಬಾಯಿಲ್ಲದೆ ನುಡಿಯುವುದು

ಎಲ್ಲರಿಗೂ ಜೀವನಾಧಾರವಾಗಿರುವುದು

೨೭



ವ್ಯಾಕರಣ

ವ್ಯಂಜನಗಳು

೧) ವರ್ಗೀಯ ವ್ಯಂಜನಗಳು: (**೨೫**)

| ೧ | ೨ | ೩ | ೪ | ೫ |
|---|---|---|---|---|
| ಕ್ | ಖ್ | ಗ್ | ಘ್ | ಙ |
| ಚ್ | ಛ್ | ಜ್ | ಝ್ | ಞ್ |
| ಟ್ | ಠ್ | ಡ್ | ಢ್ | ಣ್ |
| ತ್ | ಥ್ | ದ್ | ಧ್ | ನ್ |
| ಪ್ | ಫ್ | ಬ್ | ಭ್ | ಮ್ |

ವರ್ಗೀಯ ವ್ಯಂಜನಗಳಲ್ಲಿ ಮೂರು ಪ್ರಕಾರಗಳಿವೆ.

೧) ಅಲ್ಪಪ್ರಾಣಗಳು (೧೦)

೨) ಮಹಾಪ್ರಾಣಗಳು (೧೦)

೩) ಅನುನಾಸಿಕಗಳು (೫)

ಅಲ್ಪಪ್ರಾಣಗಳು:– ಕಡಿಮೆ ಉಸಿರಿನ ಸಹಾಯದಿಂದ ಉಚ್ಚರಿಸಲ್ಪಡುವ ವ್ಯಂಜನಗಳು ಅಲ್ಪಪ್ರಾಣಗಳು.

ಉದಾ: : ಕ್, ಚ್, ಟ್, ತ್, ಪ್, ಗ್, ಜ್, ಡ್, ದ್, ಬ್

ಮಹಾಪ್ರಾಣಗಳು : ಹೆಚ್ಚು ಉಸಿರಿನ ಸಹಾಯದಿಂದ ಉಚ್ಚರಿಸಲ್ಪಡುವ ವ್ಯಂಜನಗಳು ಮಹಾಪ್ರಾಣಗಳು.

ಉದಾ: : ಖ್, ಛ್, ಠ್, ಥ್, ಫ್, ಘ್, ಝ್, ಢ್, ಧ್, ಭ್


ಅನುನಾಸಿಕಗಳು : ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವ ವ್ಯಂಜನಗಳು ಅನುನಾಸಿಕಗಳು.

ಉದಾ: : ಙ, ಞ್, ಣ್, ನ್, ಮ್

೨) ಅವರ್ಗೀಯ ವ್ಯಂಜನಗಳು: (೯) ಯಾವ ಅಕ್ಷರಗಳನ್ನು ವರ್ಗೀಕರಿಸಲು ಬರುವುದಿಲ್ಲವೋ ಅವು ಅವರ್ಗೀಯ ವ್ಯಂಜನಗಳು.

ಉದಾ: : ಯ್, ರ್, ಲ್, ವ್, ಶ್, ಷ್, ಸ್, ಹ್, ಳ್

# ೬ ಅತ್ತೆಯ ಮನೆಗೆ ಅಳಿಯ ಬಂದ



ಹಗಲೂರು ಎಂಬದೊಂದು ಹಳ್ಳಿ ಇತ್ತು. ಅಲ್ಲಿ ಜಕ್ಕಪ್ಪ ಮತ್ತು ತಿಮ್ಮಕ್ಕ ಎಂಬ ದಂಪತಿಗಳಿದ್ದರು. ಅವರಿಗೆ ಯಂಕಣ್ಣ ಎಂಬ ಮಗನಿದ್ದನು. ಅವನು ಬಹಳ ಸರಳ ಸ್ವಭಾವದವನಿದ್ದನು. ಸಮೀಪದ ಬೆಳಗೂರು ಎಂಬ ಹಳ್ಳಿಯ ಕೆಂಚಮ್ಮಳೊಂದಿಗೆ ಅವನ ಮದುವೆಯಾಗಿತ್ತು. ನವದಂಪತಿಗಳಿಬ್ಬರು ಬಹಳ ಅನ್ಯೋನ್ಯವಾಗಿದ್ದರು.

ಒಂದು ಸಲ ಕೆಂಚಮ್ಮಳ ತಾಯಿ ಹೊಸದಾಗಿ ನವರಾತ್ರಿ ವ್ರತವನ್ನು ಆಚರಿಸಿದರು. ಅವರಿಗೆ ಸೀರೆ, ಕುಪ್ಪಸ ಮತ್ತು ಫರಾಳಗಳನ್ನು ಕೊಡುವುದು ವಾಡಿಕೆ. ಈ ಬಾಗಿನವನ್ನು ಕೊಡಲು ಯಂಕಣ್ಣನು ಹೊರಟನು. ಪ್ರಥಮ ಬಾರಿಗೆ ಅತ್ತೆಯ ಮನೆಗೆ ಹೊರಟ ಯಂಕಣ್ಣನ ಉತ್ಸಾಹಕ್ಕೆ ಪಾರವೇ ಇರಲಿಲ್ಲ. ಧಡಿದೋತರ ಉಟ್ಟನು. ರೇಷ್ಮೆ ಅಂಗಿ ತೊಟ್ಟನು. ಜರತಾರಿ ರುಮಾಲು ಸುತ್ತಿದನು. ಮೀಸೆಯನ್ನು ತಿದ್ದಿ ತೀಡಿಹುರಿಮಾಡಿದನು. ಗುಲಾಬಿ ಬಣ್ಣದ ಪಂಜೆಯನ್ನು ಹೆಗಲ ಮೇಲೆ ಹಾಕಿದನು. ಗಂಡನ ಸಿಂಗಾರವನ್ನು ನೋಡಿ ಕೆಂಚಮ್ಮ ನಸುನಕ್ಕಳು.

ಬೆಳಗೂರಿಗೆ ಹೋಗುವ ಬಸ್ಸು ಅಂದು ತಡವಾಗಿ ಬಂದಿತು. ಅದು ಬೆಳಗೂರಿಗೆ ತಲುಪಿದಾಗ ಹೊತ್ತು ಮುಳುಗಿತ್ತು. ಯಂಕಣ್ಣನು ಠೀವಿಯಿಂದ ರಸ್ತೆಯಲ್ಲಿ ನಡೆದನು. ಆ ಊರಿನ ಸಾಹುಕಾರ ಭೀಮಣ್ಣ ನೆಲದೊಳಗಿನ ಹಗೆಯಲ್ಲಿಟ್ಟಿದ್ದ ಜೋಳವನ್ನು ಹೊರ ತೆಗೆಯಲು ಹಗೆಯ ಬಾಯಿಯನ್ನು ತೆರೆದುಬಿಟ್ಟಿದ್ದನು. ಅತ್ತೆಯ ಮನೆಗೆ ಅಳಿಯನಾಗಿ ಹೊರಟ ಯಂಕಣ್ಣ ಢಮಾರನೇ ಹಗೆಯೊಳಗೆ ಬಿದ್ದು ಬಿಟ್ಟನು. ಹಗೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜೋಳ ತುಂಬಿದ್ದರಿಂದ ಅವನಿಗೆ ಪೆಟ್ಟಾಗಲಿಲ್ಲ. ತಾನು ಬಿದ್ದಿರುವೆನೆಂಬುದು ಗೊತ್ತಾದರೆ ಅಪಮಾನವಾಗುತ್ತದೆ. ಎಂದು ಯಂಕಣ್ಣನು ಹೊಸ ಯುಕ್ತಿಯನ್ನು ಹುಡುಕಿದನು–

"ಯಾಕ ಬಂದಿ ಎಲ್ಲಿಗಿ ನಡದೀ।
ಹಗ್ಯಾದಾಗ್ಯಾಕ ಬಿದ್ದೀ॥
ಎಷ್ಟು ಆಳ ಐತಿ; ಎಷ್ಟು ಉದ್ದ ಐತಿ।
ಏನು ಇದರ ಸುದ್ದೀ॥" ಎಂದು
ಹಾಡತೊಡಗಿದನು.

ನಸುಗತ್ತಲೆಯಲ್ಲಿ ಹೊಲದಿಂದ ಮನೆಗೆ ಮರಳುತ್ತಿರುವ ಒಬ್ಬಿಬ್ಬರು ಹಗೆಯೊಳಗಿಂದ ಹಾಡು ಕೇಳಿಬರುತ್ತಿರುವುದನ್ನು ಗಮನಿಸಿ ಅಲ್ಲಿಗೆ ಬಂದರು. "ಏ ಯಾರಪ್ಪಾ ನೀನು? ಹಗೆಯೊಳಗೆ ಬಿದ್ದಿರುವೆಯಲ್ಲ! ಕಣ್ಣು ಕಾಣಿಸುವುದಿಲ್ಲವೇ?" ಎಂದು ಕೇಳಿದರು. "ಛೇ, ಹಾಗೇನಿಲ್ಲ!" ನಾನು ಇದೇ ಈಗ ಬಸ್ಸಿನಿಂದ ಬಂದೆ. ನಮ್ಮೂರಿನಲ್ಲಿ ಇಂತಹದೇ ಒಂದು ಹಗೆಯನ್ನು ತೋಡಿಸಬೇಕಾಗಿದೆ. ಅದಕ್ಕಾಗಿ ಇದರ ಅಳತೆ ಮಾಡುತ್ತಿದ್ದೇನೆ ಎಂದನು ಯಂಕಣ್ಣ. ನೆರೆದ ಜನರು ಅವನನ್ನು ಹೊರಗೆ ತೆಗೆದರು. ಸ್ವಲ್ಪ ಸುಧಾರಿಸಿಕೊಂಡು ಯಂಕಣ್ಣ ಹಾಗೂ, ಹೀಗೂ ಅತ್ತೆಯ ಮನೆಗೆ ಬಂದನು.

ಹೊಸದಾಗಿ ಅಳಿಯ ಮನೆಗೆ ಬಂದುದನ್ನು ನೋಡಿ ಅತ್ತೆಮ್ಮಳಿಗೆ ಬಹಳ ಆನಂದವಾಯಿತು. ಮುಖ ತೊಳೆದುಕೊಂಡು ಆತ ಗಗ್ಗರಗಟ್ಟೆಯ ಮೇಲೆ ಕುಳಿತುಕೊಂಡನು. ಒಳಗೆ ಪಡಸಾಲೆಗೆ ಬಂದು ಕುಳಿತುಕೊಳ್ಳಿರಿ ಎಂದು ಮಾವ ಹೇಳಿದರೂ ಆತ ಒಳಗೆ ಬರದೆ ಅಲ್ಲಿಯೇ ಕುಳಿತನು. ಮಾವ ಅಳಿಯ ಇಬ್ಬರೂ ಕ್ಷೇಮ ಸಮಾಚಾರಗಳ ಬಗ್ಗೆ ಮಾತನಾಡತೊಡಗಿದರು. ಅಷ್ಟರಲ್ಲಿ ಅತ್ತೆ ರುಚಿ ರುಚಿಯಾದ ಅಡುಗೆ ಮಾಡಿ ಊಟಕ್ಕೆ ಕರೆದಳು. ಇಲ್ಲ ಅತ್ತೆಮ್ಮ, ಇಲ್ಲಿ ಚೆನ್ನಾಗಿಯೇ ಇದೆ. ನಾನು ಇಲ್ಲಿಯೇ ಕೂಡ್ರುತ್ತೇನೆ. ನನಗೆ ಊಟಕ್ಕೆ ಬಡಿಸಿರಿ ಎಂದನು ಅಳಿಯ ಯಂಕಣ್ಣ. ಅಳಿಯ ಬಹಳ ನಾಚುಬುರುಕ ಸ್ವಭಾವದವನಿದ್ದಂತೆ ಕಾಣುತ್ತದೆ. ಇರಲಿ ಎಂದು ಊಟ ಬಡಿಸಿದಳು. ಗಗ್ಗರಗಟ್ಟೆಯ ಕೆಳಗೆ ಎಮ್ಮೆಕರುವನ್ನು ಕಟ್ಟಿದ್ದರು. ಮೇಲಿಂದ ಮೇಲೆ ಅದು ತಾಟಿನಲ್ಲಿ ಬಾಯಿ ಹಾಕಿ ಇದ್ದುದ್ದನೆಲ್ಲಾ ತಿನ್ನತೊಡಗಿತು. ಇದನ್ನರಿತ ಯಂಕಣ್ಣ ಬಹಳ ಸಿಟ್ಟಿಗೆ ಬಂದನು. ಅತ್ತೆ ಬಂದು ತಾಟಿನಲ್ಲಿ ಚಪಾತಿಯನ್ನು ಬಡಿಸಿದಳು. ಸಪ್ಪಳವಾಯಿತು. ಮತ್ತೆ ಎಮ್ಮೆಕರು ಬಾಯಿ ಹಾಕಿತೆಂದು ಯಂಕಣ್ಣ ಫಟಾರನೆ ಹೊಡೆದುಬಿಟ್ಟನು. "ಅಯ್ಯೋ, ಸತ್ತೆ!" ಎಂದು ಅತ್ತೆ ಜೋರಾಗಿ ಕಿರುಚಿದಳು.

ಯಂಕಣ್ಣನು ಕೊಟ್ಟ ಏಟಿಗೆ ಅತ್ತೆಯ ಮುಖ ಊದಿಕೊಂಡು ಮರಕೋತಿಯಂತೆ

ಆಯಿತು. ತನ್ನಿಂದ ಪ್ರಮಾದವಾಯಿತೆಂದು ಅತ್ತೆಗೆ ಸಮಾಧಾನ ಹೇಳಿ ಕ್ಷಮೆ ಕೇಳಿದನು. ಹೊಸದಾಗಿ ಬಂದ ಅಳಿಯನಿಗೆ ಸಮಾಧಾನವಾಗಲೆಂದು ಅವನನ್ನು ಒಳಕೋಣೆಯೊಳಗೆ ಮಲಗಿಸಿದರು. ತಾವು ಹೊರಗೆ ಪಡಸಾಲೆಯಲ್ಲಿ ಮಲಗಿದರು. ತನಗೆ ಇರುಳುಗಣ್ಣು ರೋಗವಿದೆ ಎಂಬುವುದು ಅತ್ತೆ-ಮಾವರಿಗೆ ಹೇಗೂ ಗೊತ್ತಾಗಲಿಲ್ಲವಲ್ಲ ಎಂದು ಯಂಕಣ್ಣ ಒಳಗೊಳಗೆ ಸಂತೋಷಪಟ್ಟನು.

ಸರಿರಾತ್ರಿಯ ಸಮಯವಿರಬಹುದು ಯಂಕಣ್ಣನಿಗೆ ಮೂತ್ರವಿಸರ್ಜನೆ ಮಾಡಬೇಕಾದ ಅನಿವಾರ್ಯತೆ ಬಂದಿತು. ತಾಳಿಕೊಳ್ಳುವಂತಿಲ್ಲ. ಹೊರಗೆ ಹೋಗಬೇಕೆಂದರೆ ಇರುಳುಗಣ್ಣು ರೋಗ. ಏನೊಂದೂ ಕಾಣಿಸುತ್ತಿಲ್ಲ. ಹೇಗೆ ಮಾಡುವುದು ಚಿಂತೆಯಾಯಿತು. ಕೊನೆಗೂ ಒಂದು ಉಪಾಯ ಹೊಳೆಯಿತು. ತನ್ನ ರುಮಾಲಿನ ಒಂದು ತುದಿಯನ್ನು ಬಾಗಿಲಿನ ಚಿಲಕಕ್ಕೆ ಕಟ್ಟಿ, ಇನ್ನೊಂದು ತುದಿಯನ್ನು ಕೈಯಲ್ಲಿ ಹಿಡಿದುಕೊಂಡು ಗಗ್ಗರಗಟ್ಟೆಯ ಮೇಲಿನಿಂದ ಇಳಿದು ಕೆಳಗೆ ಬಂದನು. ರುಮಾಲಿನ ಉದ್ದ ಮುಗಿಯಿತು. ಮುಂದೆ ಹೋಗುವಂತಿಲ್ಲ. ಏನು ಮಾಡುವುದು! ಅಲ್ಲಿಯೇ ಕುಳಿತು ಮೂತ್ರವಿಸರ್ಜನೆ ಮಾಡಿದನು. ಇದೇ ಸಂದರ್ಭದಲ್ಲಿ ಎಮ್ಮೆಕರು ರುಮಾಲನ್ನು ಕತ್ತರಿಸಿಬಿಟ್ಟಿತು. ತಿರುಗಿ ಬರಲು ರುಮಾಲನ್ನು ಜಗ್ಗಿದನು ಅದು ತಕ್ಷಣ ಕೈಯಲ್ಲಿಯೇ ಬಂದಿತು. ಗಾಬರಿಯಾದನು ಏನು ಮಾಡಬೇಕೆಂಬುದೇ ತೋಚಲಿಲ್ಲ. ಕತ್ತಲೆಯಲ್ಲಿ ಕೈಯಾಡಿಸುತ್ತ ಮೇಲೆ ಬಂದನು. ದಾರಿಯಲ್ಲಿ ಅತ್ತೆ-ಮಾವ ಮಲಗಿದ್ದರು. ಯಂಕಣ್ಣ ಕತ್ತಲೆಯಲ್ಲಿ ಎಡವಿ ಅವರ ಮೈಮೇಲೆ ಬಿದ್ದನು. "ಅಯ್ಯೋ! ಕಳ್ಳ, ಕಳ್ಳ" ಎಂದು ಅವರು ಜೋರಾಗಿ ಚೀರಿದರು. ಸಪ್ಪಳ ಕೇಳಿ ನೆರೆಹೊರೆಯವರು ಓಡಿ ಬಂದರು. ಟಾರ್ಚ್ ಬೆಳಕನ್ನು ಚೆಲ್ಲಿದಾಗ ಯಂಕಣ್ಣ ಗಡಗಡನೇ ನಡುಗುತ್ತ ನಿಂತಿದ್ದನು. ಇನ್ನೇನು ತನ್ನ ಭಜನೆ ಆಗಿಯೇ ಬಿಡುತ್ತದೆ ಎನ್ನುವಷ್ಟರಲ್ಲಿ ಹೊಸದೊಂದು ಉಪಾಯ ಆತನಿಗೆ ಹೊಳೆಯಿತು. "ನಾನು ಊಟದ ವೇಳೆಯಲ್ಲಿ ಅತ್ತೆಮ್ಮನವರಿಗೆ ಹೊಡೆದನು. ಅವರ ಮನಸ್ಸಿಗೆ ನೋವಾಗಿರಬಹುದು. ಅದಕ್ಕೆ ಯಾರೂ ಇಲ್ಲದ ಈ ಸಮಯದಲ್ಲಿ ಸಾಂತ್ವನ ಹೇಳಬೇಕೆಂದು ಬಂದೆನು ಕ್ಷಮಿಸಿರಿ" ಎಂದು ಕೈ ಜೋಡಿಸಿ ಬೇಡಿಕೊಂಡನು. ಇದ್ದರೆ ಇಂತಹ ಅಳಿಯ ಇರಬೇಕು. ಅತ್ತೆ ಮಾವನ ಬಗ್ಗೆ "ಎಷ್ಟೊಂದು ಗೌರವ! ಎಂಥಾ ವಿನಯ! ಭಲೇ, ಭಲೇ!" ಎಂದು ನೆರೆದವರೆಲ್ಲಾ ಕೊಂಡಾಡಿದರು. ಅತ್ತೆ-ಮಾವರಿಗೆ ಖುಷಿಯೇ ಖುಷಿ. ಎಲ್ಲರೂ ಹೊರಟು ಹೋದರು.

"ಹೋಗಿ ಅಳಿಯಂದಿರೇ, ನನಗೇನೂ ಕೋಪವಿಲ್ಲ. ಹೋಗಿ ಮಲಗಿಕೊಳ್ಳಿ" ಎಂದು ಅತ್ತೆ ಸಮಾಧಾನ ಹೇಳಿದಳು. "ಅತ್ತೆ ನೀವು ಕೋಪಿಸಿಕೊಳ್ಳುವದಿಲ್ಲ ಅಂದರೆ ನನಗೂ ಸಮಾಧಾನವಾಯಿತು. ಈಗ ನೀವು ನನ್ನನ್ನು ಕೋಣೆಯವರೆಗೆ ಕೈ ಹಿಡಿದುಕೊಂಡು ಕರೆದೊಯ್ಯಬೇಕು" ಎಂದನು. ಆಗಲಿ ಎಂದು ಅತ್ತೆ ಅವನನ್ನು ಕೋಣೆಗೆ ಒಯ್ದು ಬಿಟ್ಟಳು. ಯಂಕಣ್ಣ ನಿರಾಯಾಸವಾಗಿ ಮಲಗಿದನು. ಮರುದಿನ ಮುಂಜಾನೆ ತನ್ನ ಊರಿಗೆ ಬಂದನು.

## ಶಬ್ದಗಳ ಅರ್ಥ

ಮುಸ್ಸಂಜೆ – ಹೊತ್ತುಮುಳುಗುವ ಸಮಯ; ಸಾಂತ್ವನ – ಸಮಾಧಾನ; ಬಾಗಿನ – ಉಡುಗೊರೆ;

**ವಿಶೇಷ ವಿಚಾರ**: –ಗಗ್ಗರಗಟ್ಟಿ – ಮನೆಯ ಪಡಸಾಲೆಯ ಮುಂಭಾಗ.; ಹಗೆ – ನೆಲದಲ್ಲಿ ಧಾನ್ಯವನ್ನು ಸಂಗ್ರಹಿಸಿಡುವ ಸ್ಥಳ.

ಇರುಳುಗಣ್ಣು – ರಾತ್ರಿ ಕಣ್ಣು ಕಾಣದಿರುವಿಕೆ.

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ದಂಪತಿ ......................; ಯುಕ್ತಿ ....................... ಅನ್ಯೋನ್ಯ ....................

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಯಂಕಣ್ಣನ ಸ್ವಭಾವ ಹೇಗಿತ್ತು?

..........................................................................................

ಆ) ಅತ್ತೆಯ ಮನೆಗೆ ಯಂಕಣ್ಣನು ಏಕೆ ಹೊರಟನು?

..........................................................................................

ಇ) ಎಮ್ಮೆಯ ಕರುವನ್ನು ಎಲ್ಲಿ ಕಟ್ಟಿದ್ದರು?

..........................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ..........................................................................................

ಉತ್ತರ: ..........................................................................................

ಆ) ..........................................................................................

ಉತ್ತರ: ..........................................................................................

ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?

ಅ) “ಯಾಕ ಬಂದಿ ಎಲ್ಲಿಗಿ ನಡದೀ”

..........................................................................................

ಆ) "ಏ ಯಾರಪ್ಪಾ ನೀನು? ಹಗೆಯೊಳಗೆ ಬಿದ್ದಿರುವೆಯಲ್ಲ!"

..............................................................................................

ಇ) "ಅತ್ತೆ ಮಾವನ ಬಗ್ಗೆ ಎಷ್ಟೊಂದು ಗೌರವ! ಏನು ವಿನಯ"

..............................................................................................

ಈ) "ಹೋಗಿ ಅಳಿಯಂದಿರೇ ನನಗೇನು ಕೋಪವಿಲ್ಲ ಮಲಗಿಕೊಳ್ಳಿ"

..............................................................................................

**ಪ್ರಶ್ನೆ ೪) ಯೋಚಿಸಿ ಈ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿ.**

ಅ) ಹಗೆಯ ಒಳಗೆ ಜೋಳ ತುಂಬಿಡುತ್ತಾರೆ. ಹಾಗಾದರೆ ತಿಜೋರಿಯಲ್ಲಿ ಇಡುವ ವಸ್ತುಗಳು ...............................

ಆ) ನೆರೆಹೊರೆಯುವರು ಓಡಿ ಬಂದರು ಟಾರ್ಚ್ ಬೆಳಕು ಚೆಲ್ಲಿದರು. ಹಾಗಾದರೆ ಬೆಳಕು ಕೊಡುವ ಸಾಧನಗಳು ..................

**ಪ್ರಶ್ನೆ ೫) ಕೆಳಗಿನ ಶಬ್ದಗಳನ್ನು ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.**

ಅ) ಸ್ವಭಾವ ..............................................................................;

ಆ) ಉತ್ಸಾಹ ..............................................................................;

ಇ) ಗಾಬರಿ ..............................................................................;

ಈ) ಕಿರುಚು ..............................................................................;

ಉ) ಕೊಂಡಾಡು ..............................................................................;

**ಉಪಕ್ರಮ:** ಜೀವನಸತ್ವಗಳು ಹಾಗೂ ಅವುಗಳ ಅಭಾವದಿಂದ ಬರುವ ದೋಷಗಳ ಬಗ್ಗೆ ಶಿಕ್ಷಕರಿಂದ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

**ಅಪೌಷ್ಟಿಕ ಆಹಾರ ಅನಾರೋಗ್ಯಕ್ಕೆ ಆಗರ**

**ಥಟ್ಟನೆ ಹೇಳಿ:**

ಹಾರಿದರೆ ಹನುಮ
ಕೂಗಿದರೆ ರಾವಣ
ಕುಳಿತರೆ ಮುನಿರಾಮ

ಗ್ರಾಹ

## ವಿಶೇಷಣ

ವಿಶೇಷಣ ಅಂದರೇನು?

ವರ್ಣಿಸಿ ಹೇಳುವ ಶಬ್ದಗಳಿಗೆ 'ವಿಶೇಷಣ' ಅನ್ನುವರು.

ವಿಶೇಷಣಗಳಲ್ಲಿ ಎರಡು ಪ್ರಕಾರಗಳು.

೧) ನಾಮ ವಿಶೇಷಣ ೨) ಕ್ರಿಯಾ ವಿಶೇಷಣ

೧) ನಾಮ ವಿಶೇಷಣ:- ಕೆಳಗಿನ ಉದಾಹರಣೆಗಳನ್ನು ಗಮನಿಸಿರಿ.

೧) ತಾಯಿಯು ಸವಿಯಾದ ಹಣ್ಣನ್ನು ಕೊಟ್ಟಳು.

೨) ಸತ್ಯಹರಿಶ್ಚಂದ್ರನು ನಿಷ್ಠಾವಂತ ರಾಜನಾಗಿದ್ದನು.

೩) ಕೆಂಪು ಗುಲಾಬಿ ಹೂವು ನೋಡಲು ಸೊಗಸಾಗಿದೆ.

೪) ದೊಡ್ಡ ಪಟ್ಟಣಗಳಲ್ಲಿ ಜನಸಂಖ್ಯೆ ಹೆಚ್ಚಾಗಿರುತ್ತದೆ.

ಇಲ್ಲಿ ಗೆರೆ ಹೊಡೆದ ಸವಿ, ಸತ್ಯ, ಕೆಂಪು, ದೊಡ್ಡ ಪದಗಳು ನಾಮವಿಶೇಷಣಗಳು. ಅಂದರೆ ನಾಮಪದಗಳನ್ನು ವರ್ಣಿಸುವ ಶಬ್ದಗಳಿಗೆ 'ನಾಮ ವಿಶೇಷಣ' ಎನ್ನುವರು.

೨) ಕ್ರಿಯಾ ವಿಶೇಷಣ:- ಕೆಳಗಿನ ಉದಾಹರಣೆಗಳನ್ನು ಗಮನಿಸಿರಿ.

೧) ಕೋಗಿಲೆಯು <u>ಇಂಪಾಗಿ</u> ಹಾಡುತ್ತದೆ.

೨) ಮಳೆಗಾಲದಲ್ಲಿ ಹಳ್ಳಗಳು <u>ರಭಸದಿಂದ</u> ಹರಿಯುತ್ತವೆ.

೩) ಮಗು <u>ಒಂದೇಸವನೆ</u> ಅಳುತ್ತಿತ್ತು.

ಇಲ್ಲಿ ಗೆರೆ ಹೊಡೆದ ಶಬ್ದಗಳು ಕ್ರಿಯಾಪದಗಳನ್ನು ವರ್ಣಿಸುತ್ತವೆ. ಆದ್ದರಿಂದ ಈ ಶಬ್ದಗಳು ಕ್ರಿಯಾ ವಿಶೇಷಣಗಳು. ಕ್ರಿಯಾಪದಗಳನ್ನು ವರ್ಣಿಸುವ ಶಬ್ದಗಳಿಗೆ 'ಕ್ರಿಯಾವಿಶೇಷಣ' ಎನ್ನುವರು.

# ೭ ಮಾವಿನ ಗೊಲ್ಲೆ



ನಾವು! ದೇವನ ದೇಟಿನ ಕಾಯಿಗಳು
ಎಲ್ಲಾ! ಒಂದೇ ದೇಟಿನ ಮಾವುಗಳು
ಎಲ್ಲಾ ಪ್ರಾಣಿಗಳು
ಎಲ್ಲಾ ವಸ್ತುಗಳು
ಎಲ್ಲಾS ಎಲ್ಲಾS ಎಲ್ಲಾSS
ಎಲ್ಲಾS! ಒಂದೇ ದೇಟಿನ ಮಾವುಗಳು
ನಾವು! ದೇವನ ದೇಟಿನ ಕಾಯಿಗಳು

ಒಂದೋ ಬಲು ಹಿರಿದು
ಒಂದೋ ಅತಿ ಕಿರಿದು
ಚಿಕ್ಕದು ದೊಡ್ಡದು ಎಲ್ಲಾ
ಎಲ್ಲಾ ! ಒಂದೇ ದೇಟಿನ ಮಾವುಗಳು
ನಾವು! ದೇವನ ದೇಟಿನ ಕಾಯಿಗಳು

ಒಂದೋ ಸವಿ ಹಣ್ಣು
ಒಂದೋ ಹುಳಿ ಹೀಚು
ಹಣ್ಣು ಹೀಚು ಎಲ್ಲಾ
ಎಲ್ಲಾ ! ಒಂದೇ ದೇಟಿನ ಮಾವುಗಳು
ನಾವು! ದೇವನ ದೇಟಿನ ಕಾಯಿಗಳು

ಸಂಪ್ರೀತಿಯ ಸುರರು
ರೊಚ್ಚಿನ ರಕ್ಕಸರು
ಎಲ್ಲಾ ಎಲ್ಲಾ ಎಲ್ಲಾ
ಎಲ್ಲಾ! ಒಂದೇ ದೇಟಿನ ಮಾವುಗಳು
ನಾವು! ದೇವನ ದೇಟಿನ ಕಾಯಿಗಳು

– ಮಧುರಚೆನ್ನರು

## ಶಬ್ದಗಳ ಅರ್ಥ

ಹೀಚು – ಮಿಡಿ, ಎಳೆಗಾಯಿ; ರಕ್ಕಸರು – ರಾಕ್ಷಸರು;

ದೇಟುಗಳು – ಎಲೆಗಳನ್ನು ಕೂಡಿಸುವ ಭಾಗ

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಕಿರಿದು ..............................; ಸಂಪ್ರೀತಿ ..............................;

ಸುರರು ..............................; ರೊಚ್ಚು ..............................

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ದೇವನ ದೇಟಿನ ಕಾಯಿಗಳು ಯಾರು?

..........................................................................................

ಆ) ಕಾಯಿಗಳ ಗುಣಗಳನ್ನು ಹೇಳಿರಿ?

..........................................................................................

ಇ) ರಕ್ಕಸರೆಂದರೆ ಯಾರು?

..........................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ ..........................................................................................

ಉತ್ತರ ..........................................................................................

ಆ ..........................................................................................

ಉತ್ತರ ..........................................................................................

ಪ್ರಶ್ನೆ ೩) ಕೆಳಗಿನ ಕವಿತೆಯ ಸಾಲುಗಳನ್ನು ಪೂರ್ಣಮಾಡಿರಿ

ಒಂದೋ ಬಲು ....................................

..........................................................

..........................................................

.......................................................... ಬೇವಿನ ಕಾಯಿಗಳು

ಪ್ರಶ್ನೆ ೪) ಕೆಳಗಿನ ಶಬ್ದಗಳನ್ನು ಸ್ವಂತ ವಾಕ್ಯದಲ್ಲಿ ಹೇಳಿರಿ.

ಅ) ಹುಳಿ ಆ) ಕಿರಿಯ ಇ) ವಸ್ತ್ರ

ಪ್ರಶ್ನೆ ೫) ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಉದಾ: ಮೇಲೆ X ಕೆಳಗೆ

ಅ) ಹಿರಿದು X .......... ಆ) ಸಿಹಿ X .......... ಇ) ಸುರರು X ..........

ಪ್ರಶ್ನೆ ೬) ಕೆಳಗಿನ ಅಕ್ಷರಗಳ ಚೌಕಟ್ಟಿನಲ್ಲಿ ಕೆಲವು ಹಣ್ಣುಗಳು ಅಡಗಿವೆ. ಅವುಗಳನ್ನು ಹುಡುಕಿ ಅಲ್ಲಿಯೇ ಗೋಲಾಕಾರದಿಂದ ಗುರುತಿಸಿರಿ.

| | | | | | | | | | | |
|---|---|---|---|---|---|---|---|---|---|---|
| ರೆ | ಅ | ನಾ | ನ | ಸ | ಗ | ಚ | ರ | ಹಾ | ಪ | ಕೋ |
| ಳ | ಜ | ಕ | ಭಿ | ಮೋ | ಸಂ | ಬಿ | ವಾ | ಹಾ | ಸು | ರ್ಶ |
| ಣು | ಗ | ಲ್ಲಂ | ವು | ಕಿ | ಮ | ಲ | ರ | ಸ | ಸು | ಫ್ನ |
| ಟ | ಲಾ | ಗ | ಥ | ತ್ಕ | ಲ್ರ್ | ಸು | ಣ್ಣು | ಚೇ | ಳಿ | ಬಾ |
| ಜ | ಆ | ಡಿ | ಜ | ಳೆ | ಲಾ | ಹ | ಬ್ | ರಿ | ಚ | ಅ |
| ಇ | ಸೀ | ಬೂ | ಮ | ರಿ | ನ | ವಾ | ರಿ | ಸಾ | ಈ | ಳ |
| ಫ | ರಾ | ರ | ವ್ಕ | ವಿ | ರ್ಕೇ | ಬೇ | ರಂ | ಪೇ | ಲ | ಎ |
| ಕ | ಙ | ಡಿ | ಮಾ | ಗೀ | ಸ್ಟ್ರಾ | ಗೋ | ಳ | ಕ್ಷ | ಕ್ರ | ಕ್ಷ |
| ಖ | ಛ | ಛ | ಬೇ | ಗಾ | ಸೀ | ತಾ | ಫ | ಲ | ಸ | ಣ |
| ರ | ಳೆ | ಪಾ | ಫ | ಪೇ | ಖು | ರ್ಕ | ಸೇ | ಬು | ಯು | ಜ್ಞ |
| ಬಾ | ರೇ | ವಾ | ಕ | ಬಿ | ಜ | ಕ್ಷ | ಕ್ಕ | ಷಾ | ಚೂ | ರ |

ಉಪಕ್ರಮ:

ಸಮಾನತೆಯ ಸಂದೇಶ ಸಾರುವ ಕಿರುನಾಟಕವನ್ನು ನಿಮ್ಮ ಶಾಲೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅಭಿನಯಿಸಿರಿ.

ಐಕ್ಯಮತ ಲೋಕಹಿತ

ಥಟ್ಟನೆ ಹೇಳಿ:

ಬಂಗಾರ ಬಿಸಾಕ್ತಾರೆ

ಬೆಳ್ಳಿ ತಿಂತಾರೆ

ಬಾಳೆಹಣ್ಣು

# ೮ ಸರದಾರ ವಲ್ಲಭಭಾಯಿ ಪಟೇಲ



ಸ್ವಾತಂತ್ರ್ಯ ಪೂರ್ವದಲ್ಲಿ ಹರಿದು ಹಂಚಿ ಹೋಗಿದ್ದ ಭಾರತವನ್ನು ಒಂದುಗೂಡಿಸಿ, ಸಂಸ್ಥಾನಗಳನ್ನು ವಿಲೀನಗೊಳಿಸಿ ಎಲ್ಲರನ್ನೂ ಒಂದೇ ಸೂರಿನಡಿಯಲ್ಲಿ ತರಲು ಶ್ರಮಿಸಿದವರು ಸರದಾರ ವಲ್ಲಭಭಾಯಿ ಪಟೇಲರು. ಸ್ವತಂತ್ರ ಭಾರತದ ನವನಿರ್ಮಾಣದಲ್ಲಿ ಅವರ ಪಾತ್ರ ಹಿರಿಯದು. ಅವರನ್ನು ಐಕ್ಯತೆಯ ಮಹಾಶಿಲ್ಪಿ ಎಂದು ಕರೆಯುವರು. ಅವರ ಧೈರ್ಯ, ಸಾಹಸ ಮನೋವೃತ್ತಿಗಳನ್ನು ಕಂಡು ಅವರನ್ನು 'ಭಾರತದ ಉಕ್ಕಿನ ಮನುಷ್ಯ' ಎಂದೂ ಕರೆಯುವರು. ಇಂತಹ ಮಹಾಪುರುಷರ ಜೀವನ ಮತ್ತು ಸಾಧನೆಯ ಕುರಿತು ತಿಳಿದುಕೊಳ್ಳುವಾ.

ವಲ್ಲಭಭಾಯಿ ಪಟೇಲರು ಗುಜರಾತ ರಾಜ್ಯದ ಖೇಡಾ ಜಿಲ್ಲೆಯ ನದಿಯಾಡ ಎಂಬ ಗ್ರಾಮದಲ್ಲಿ ಕ್ರಿ.ಶ. ೧೮೭೫ ಅಕ್ಟೋಬರ ೩೧ ರಂದು ರೈತ ಕುಟುಂಬದಲ್ಲಿ ಜನಿಸಿದರು. ಇವರ ತಂದೆ ಝೂವೇರಭಾಯಿ, ತಾಯಿ ಲಾಡಬಾ. ಇವರಿಗೆ ಒಟ್ಟು ಆರು ಜನ ಮಕ್ಕಳು. ವಲ್ಲಭಭಾಯಿಯವರಿಗೆ ಮೂರು ಜನ ಅಣ್ಣಂದಿರು. ಒಬ್ಬ ತಮ್ಮ ಒಬ್ಬಳು ತಂಗಿ ಇದ್ದಳು.

ವಲ್ಲಭಭಾಯಿಯವರ ತಂದೆ–ತಾಯಿಗಳು ದೈವಭಕ್ತರಾಗಿದ್ದರು. ಇವರ ಮನೆತನವು ಧಾರ್ಮಿಕ ಭಾವನೆಯ ವಾತಾವರಣದ ಬೀಡಾಗಿತ್ತು. ತಂದೆಯವರು ಕ್ರಿ.ಶ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. ಇದರಿಂದ ಮಕ್ಕಳಲ್ಲಿ ಧಾರ್ಮಿಕತೆ, ನೇತೃತ್ವತೆ ಮತ್ತು ನಿರ್ಭೀತಿಗಳು ಮನೆಮಾಡಿಕೊಂಡವು. ಬಾಲ್ಯದಲ್ಲಿ ತಂದೆಯವರ ಜೊತೆಗೆ ಹೊಲಕ್ಕೆ ಹೋಗುತ್ತಿದ್ದರು. ಇದರಿಂದ ಒಕ್ಕಲುತನದ ಅನುಭವ ಇತ್ತು. ಕರವಸ, ನದಿಯಾಡ ಮತ್ತು ಬರೋಡಾಗಳಲ್ಲಿ ಇವರ ಶಿಕ್ಷಣ ನಡೆಯಿತು. ಶಾಲೆಯಲ್ಲಿ ತುಂಟ ಹುಡುಗನೆಂದು ಇವರನ್ನು ಗುರುತಿಸುತ್ತಿದ್ದರು.

ಕ್ರಿ.ಶ. ೧೮೯೭ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆ ಬಳಿಕ ಮೂರು ವರ್ಷಗಳಲ್ಲಿ ಪ್ಲೀಡರ್ ಪರೀಕ್ಷೆಯಲ್ಲಿ ಪಾಸಾಗಿ ವಕೀಲವೃತ್ತಿಯನ್ನು ಆರಂಭಿಸಿದರು. ಈ ಮಧ್ಯದಲ್ಲಿ ಆಗಿನ ರೂಢಿಯಂತೆ ವಲ್ಲಭಬಾಯಿಯವರು ೧೭ ವರ್ಷದವರಿರುವಾಗಲೇ ಝುವೇರಿಬಾಯಿ ಇವರೊಂದಿಗೆ ವಿವಾಹಮಾಡಿಕೊಂಡರು. ಇವರಿಗೆ 'ದಯಾಭಾಯಿ' ಎಂಬ ಮಗ ಹಾಗೂ 'ಮಣಬಹನ' ಎಂಬ ಮಗಳು ಇದ್ದರು.

ವಲ್ಲಭಾಯಿಯವರ ಅಣ್ಣ ವಿಠಲಭಾಯಿ ವಕೀಲರಾದುದರಿಂದ ಅವರನ್ನು ಅನುಸರಿಸಿ ಇವರು ಜಿಲ್ಲಾ ವಕೀಲ ಪರೀಕ್ಷೆಯಲ್ಲಿ ಪಾಸಾದರು. ನಂತರ ಕ್ರಿ.ಶ. ೧೯೧೦ ರಲ್ಲಿ ಕಾನೂನ ಅಧ್ಯಯನಕ್ಕೆ ಇಂಗ್ಲೆಂಡಿಗೆ ಹೋದರು. ೧೯೧೩ರಲ್ಲಿ ಅವರು ಬ್ಯಾರಿಸ್ಟರ ಪರೀಕ್ಷೆಯನ್ನು ಪಾಸಾದರು. ಆ ಬಳಿಕ ಭಾರತಕ್ಕೆ ಮರಳಿ ಗೋವಾ ಪಟ್ಟಣದಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ಅವರಿಗೆ ಕ್ರಿಮಿನಲ್ ಕೇಸುಗಳನ್ನು ಗೆಲ್ಲುವುದರಲ್ಲಿ ಬಹಳಷ್ಟು ಆಸಕ್ತಿ ಇತ್ತು. ನ್ಯಾಯಾಲಯದಲ್ಲಿ ನಿರ್ಭಯವಾಗಿ ವಾದಿಸುವ ಇವರ ಕಾರ್ಯ ವೈಖರಿಗೆ ನ್ಯಾಯಾಧೀಶರು ತಲೆದೂಗುತ್ತಿದ್ದರು.

ಒಮ್ಮೆ ನ್ಯಾಯಾಲಯದಲ್ಲಿ ವಾದಮಾಡಿಸುವ ಸಂದರ್ಭದಲ್ಲಿ ಇವರ ಪತ್ನಿ ತೀರಿಕೊಂಡಿರುವ ಸುದ್ದಿ ಬಂದಿತು. ಆಗ ಸ್ವಲ್ಪವೂ ವಿಚಲಿತರಾಗದೆ ವಾದ ಮುಂದುವರೆಸಿ ಒಬ್ಬ ನಿರಪರಾಧಿಗೆ ಆಗುವ ಶಿಕ್ಷೆಯನ್ನು ತಪ್ಪಿಸಿದರು. ಆಗ ಗೆಳೆಯರು ಪ್ರಶ್ನಿಸಿದಾಗ ತೀರಿಕೊಂಡವಳು ಮತ್ತೆ ಬರುವುದಿಲ್ಲ. ಆದರೆ ನಾನು ಇಲ್ಲಿಂದ ಹೋಗಿದ್ದರೆ ಒಬ್ಬ ನಿರಪರಾಧಿಗೆ ಮರಣದಂಡನೆಯಾಗುತ್ತಿತ್ತು ಎಂದು ಹೇಳಿ ಮನೆಗೆ ಹೋದರು. ಇಲ್ಲಿ ಇವರ ಕರ್ತವ್ಯನಿಷ್ಠೆ ಗೋಚರಿಸುತ್ತದೆ.

ಒಮ್ಮೆ ವಲ್ಲಭಭಾಯಿಯವರಿಗೆ ತಮ್ಮ ಕ್ಲಬ್‌ನಲ್ಲಿ ಮಹಾತ್ಮಾ ಗಾಂಧೀಜಿಯವರ ಭಾಷಣ ಕೇಳುವ ಪ್ರಸಂಗ ಒದಗಿತು. ಗಾಂಧೀಜೀಯವರ ಮಾತುಗಳಿಂದ ಪ್ರಭಾವಿತರಾದರು. ಭಾರತದ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು, ಗಾಂಧೀಜಿಯವರ ಪರಮ ಶಿಷ್ಯರಾದರು.

ಬಾರ್ಡೋಲಿ ಕರ ನಿರಾಕರಣೆಯ ಸತ್ಯಾಗ್ರಹದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ರೈತರಿಗೆ ನ್ಯಾಯ ದೊರಕಿಸಿಕೊಟ್ಟರು. ಬರಗಾಲ, ಪ್ರವಾಹಗಳ ಕಾಲದಲ್ಲಿ ರೈತಕಾರ್ಮಿಕರಿಗೆ ನೆರವಾದರು. ಜನರ ಮನಸ್ಸನ್ನು ಗೆದ್ದರು. ಜನತೆಯ ಹೃದಯದಲ್ಲಿ ಅವರು ಶಾಶ್ವತವಾದ ಸ್ಥಾನವನ್ನು ಪಡೆದರು.

ಆಗಲೇ ವಲ್ಲಭಭಾಯಿಯವರು "ಸರದಾರ" ಎಂದು ಹೆಸರಾದರು.

ಕ್ರಿ.ಶ. ೧೯೧೭ ರಲ್ಲಿ ಗುಜರಾತ ಸಭೆಯ ಕಾರ್ಯದರ್ಶಿಯಾದರು. ಗಾಂಧೀಜಿಯವರು ಕೈಗೊಂಡ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡರು. ೧೯೪೨ರಲ್ಲಿಯ 'ಭಾರತ ಬಿಟ್ಟು ತೊಲಗಿರಿ' ಚಳುವಳಿಯಲ್ಲಿ ಭಾಗವಹಿಸಿದರು. ಪ್ರಚೋದನಕಾರಿ ಭಾಷಣಗಳಿಂದ ಯರವಡಾ ಜೈಲು ಸೇರಿದರು. ಅಲ್ಲಿ ಗಾಂಧೀಜಿಯವರ ಜೊತೆಗೆ ೧೬ ತಿಂಗಳಗಳವರೆಗೆ ಕಾಲ ಕಳೆದರು. ಇದರಿಂದ ಅವರಿಬ್ಬರ ಒಡನಾಟ ಹೆಚ್ಚಿತು.

ಕ್ರಿ.ಶ. ೧೯೪೭ ಅಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ವಲ್ಲಭಭಾಯಿಯವರು ಸ್ವತಂತ್ರ ಭಾರತದ ಪ್ರಥಮ ಗೃಹಮಂತ್ರಿಯಾದರು. ಅಖಂಡ ಭಾರತದ ನಿರ್ಮಾಣದಲ್ಲಿ ವಲ್ಲಭಭಾಯಿ ಪಟೇಲರು ಬಹುಮುಖ್ಯ ಪಾತ್ರವಹಿಸಿದರು. ಎಲ್ಲ ಸಂಸ್ಥಾನಗಳನ್ನು ಒಗ್ಗೂಡಿಸಲು ಶ್ರಮಿಸಿದರು. ಸಂಸ್ಥಾನ ವಿಲೀನಿಕರಣಕ್ಕೆ ಹೈದ್ರಾಬಾದ್ ನಿಜಾಮನು, ಜುನಾಗಡದ ನವಾಬ ಮತ್ತು ಕಾಶ್ಮೀರದ ರಾಜ ಇವರು ಒಪ್ಪಲಿಲ್ಲ. ನಿಜಾಮನನ್ನು ಬಗ್ಗುಬಡಿಯಲು ಸೈನ್ಯ ಪ್ರವೇಶಿಸುವಂತೆ ಮಾಡಿದರು. ಆಗ ನಿಜಾಮನು ಸಂಸ್ಥಾನಗಳ ವಿಲೀನಿಕರಣಕ್ಕೆ ಒಪ್ಪಿದನು. ಪಟೇಲರ ಸಾಹಸವನ್ನು ಕಂಡು ನವಾಬ ಮತ್ತು ಕಾಶ್ಮೀರ ರಾಜ ಹೆದರಿ ವಿಲೀನಿಕರಣಕ್ಕೆ ಒಪ್ಪಿಗೆ ನೀಡಿದರು. ಈ ರೀತಿಯಾಗಿ ದೇಶದ ಐಕ್ಯತೆ ಮತ್ತು ಅಖಂಡತೆಗೆ ಸರದಾರರ ಕೊಡುಗೆ ಅಪಾರವಾಗಿದೆ.

ಸರದಾರರು ದೇಶದ ಐಕ್ಯತೆಗಾಗಿ ಗಾಂಧೀಜಿಯವರ ಮಾತಿನಂತೆ ನಡೆದರು. ಗಾಂಧೀಜಿಯವರ ಹತ್ಯೆಯ ಸುದ್ದಿ ಕೇಳಿ ಮಗುವಿನಂತೆ ಅತ್ತರು. ಭಾರತದ ಐಕ್ಯತೆ ಹಾಗೂ ಸಮಗ್ರತೆಗಾಗಿ ಅಹೋರಾತ್ರಿ ಶ್ರಮಿಸಿದರು. ಬಿಡುವಿಲ್ಲದ ಕಾರ್ಯಗಳು ಹೆಚ್ಚಾಗಿ ಸರದಾರರ ದೇಹಾರೋಗ್ಯ ಕ್ಷೀಣಿಸಿತು. ತಮ್ಮ ೭೦ನೇ ವಯಸ್ಸಿನಲ್ಲಿ ಅಂದರೆ ೧೫ ಡಿಸೆಂಬರ್ ೧೯೫೦ ರಲ್ಲಿ ಮುಂಬಯಿಯಲ್ಲಿ ವಿಧಿವಶರಾದರು.

ಭಾರತವು ಕ್ರಿ.ಶ ೧೯೯೧ ಜೂನ್ ೧೭ರಂದು ಮರಣೋತ್ತರವಾಗಿ 'ಭಾರತರತ್ನ' ಪುರಸ್ಕಾರವನ್ನು ನೀಡಿ ಗೌರವಿಸಿತು. ಸರದಾರರು ಉತ್ತಮ ಕಾರ್ಯದಕ್ಷತೆಯುಳ್ಳವರು, ಶಿಸ್ತುಪ್ರಿಯರು ಆಗಿದ್ದರು. ದೇಶದ ಐಕ್ಯತೆ ಹಾಗೂ ಅಖಂಡತೆಯ ಮಹಾಶಿಲ್ಪಿಯೆಂದು ಅವರ ಹೆಸರು ಚಿರಸ್ಮರಣೀಯವಾಗಿದೆ.

– ಎಸ್.ಆರ್. ರಾಮಸ್ವಾಮಿ

## ಶಬ್ದಗಳ ಅರ್ಥ

ಸಂಗ್ರಾಮ – ಯುದ್ಧ;

ನಿರ್ಭೀತಿ – ಭಯವಿಲ್ಲದ;

ವಿಚಲಿತ – ಚಂಚಲಚಿತ್ತ;

ಬ್ಯಾರಿಸ್ಟರ – ಕಾನೂನು ಪದವಿ;

ವಿಧಿವಶ – ಮರಣಹೊಂದು

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ತೇರ್ಗಡೆ .............; ಚಮತ್ಕಾರ .............; ಸೂರು .............;

ವಿಲೀನ .............; ಅಖಂಡ ............. ಚಿರಸ್ಮರಣೀಯ .............;

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ವಲ್ಲಭಭಾಯಿ ಪಟೇಲರ ಮನೆತನದ ವಾತಾವರಣ ಹೇಗಿತ್ತು?

.....................................................................................

ಆ) ವಕೀಲ ವೃತ್ತಿಯಲ್ಲಿ ಪಟೇಲರು ವಿಚಲಿತರಾಗದ ಪ್ರಸಂಗವನ್ನು ವಿವರಿಸಿರಿ.

.....................................................................................

ಇ) ಸರದಾರ ಪಟೇಲರು ಗೃಹಮಂತ್ರಿಯಾದಾಗ ಕೈಗೊಂಡ ಮಹತ್ವದ ಕಾರ್ಯ ಯಾವುದು?

.....................................................................................

**ಪ್ರಶ್ನೆ ೨) ಒಂದು ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

ಅ. .....................................................................................

ಉತ್ತರ.....................................................................................

ಆ. .....................................................................................

ಉತ್ತರ.....................................................................................

ಪ್ರಶ್ನೆ ೩)   ಹೊಂದಿಸಿ ಬರೆಯಿರಿ.

| 'ಅ' ಗುಂಪು | 'ಬ' ಗುಂಪು |
|---|---|
| ಅ) ಕ್ರಿ.ಶ. ೧೮೭೫ | ೧) ಭಾರತಕ್ಕೆ ಸ್ವಾತಂತ್ರ್ಯ ದೊರಕಿತು |
| ಆ) ಕ್ರಿ.ಶ. ೧೮೫೭ | ೨) ಮರಣೋತ್ತರ "ಭಾರತ ರತ್ನ" ಪ್ರಶಸ್ತಿ |
| ಇ) ಕ್ರಿ.ಶ. ೧೯೫೦ | ೩) ಪಟೇಲರು ವಿಧಿವಶರಾದರು |
| ಈ) ಕ್ರಿ.ಶ. ೧೯೧೭ | ೪) ಗುಜರಾತ್ ಸಭೆಯ ಕಾರ್ಯದರ್ಶಿ |
| ಉ) ಕ್ರಿ.ಶ. ೧೯೯೧ | ೫) ವಲ್ಲಭಭಾಯಿಯವರ ಜನನ |
| ಊ) ಕ್ರಿ.ಶ. ೧೯೪೭ | ೬) ಪ್ರಥಮ ಸ್ವಾತಂತ್ರ್ಯ ಸಂಗ್ರಾಮ |

ಪ್ರಶ್ನೆ ೪)   ಯೋಚಿಸಿ ಈ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿರಿ.

ಅ) ಪಟೇಲರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು, ಹಾಗಾದರೆ ಇವರ ಸಮಕಾಲೀನರಾಗಿದ್ದ ಇನ್ನಿತರ ಹೋರಾಟಗಾರರು ...........................................................

ಆ) ಪಟೇಲರು ಸಂಸ್ಥೆಗಳನ್ನು ಒಗ್ಗೂಡಿಸಲು ಶ್ರಮಿಸಿದರು. ಹಾಗಾದರೆ ವಿರೋಧಿಸಿದವರು ...........................................................

ಇ) ಪಟೇಲರು ಉಕ್ಕಿನ ಮನುಷ್ಯ ಎಂದು ಪ್ರಸಿದ್ಧರಾದರು. ಹಾಗಾದರೆ ಮಹಾತ್ಮ ಎಂದು ಪ್ರಸಿದ್ಧರಾದವರು ...............................................

ಪ್ರಶ್ನೆ ೫) ಕೆಳಗಿನ ವಾಕ್ಯಗಳಲ್ಲಿಯ ವಿಶೇಷಣಗಳನ್ನು ಗುರುತಿಸಿರಿ.

೧) ಸರದಾರ ವಲ್ಲಭಭಾಯಿ ಪಟೇಲರು ಗುಜರಾತ ರಾಜ್ಯದಲ್ಲಿ ಜನಿಸಿದರು.

.............................................

೨) ಪಟೇಲರು ಬಾರ್ಡೋಲಿ ಕರನಿರಾಕರಣೆಯ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

.............................................

೩) ಮಹಾತ್ಮ ಗಾಂಧೀಜಿಯವರು ಶಿಸ್ತುಪ್ರಿಯರಾಗಿದ್ದರು.

.............................................

## ಉಪಕ್ರಮ:

ಲೋಕಮಾನ್ಯ ಬಾಲಗಂಗಾಧರ ಟಿಳಕರ ಜೀವನ ಮತ್ತು ಸಾಧನೆಗಳನ್ನು ಕುರಿತು ಬರೆಯಿರಿ.

..........................................................................................

..........................................................................................

..........................................................................................

## ಶಕ್ತಿಗಿಂತ ಯುಕ್ತಿ ಮೇಲು

## ಥಟ್ಟನೆ ಹೇಳಿ:

ಬಿಳಿ ಅಂಗಿ ತೊಟ್ಟಿರುವೆ
ಕೇಸರಿ ಚಡ್ಡಿ ಉಟ್ಟಿರುವೆ
ರಾತ್ರಿಹೊತ್ತು ಮಾತ್ರ ಅರಳುವೆ
ಎಲ್ಲರ ಮನ ಸೆಳೆಯುವೆ

[illegible]



## ವಾಕ್ಯ

ಸ್ವಯಂ ಪೂರ್ಣವಾದ ಅರ್ಥ ಕೊಡುವಂತೆ ಜೋಡಿಸಿದ ಪದಗಳ ಸಮೂಹಕ್ಕೆ ವಾಕ್ಯ ಎನ್ನುವರು.

ಉದಾ: ಶಾಂಭವಿಯು ವೀಣೆಯನ್ನು ನುಡಿಸುವಳು.

ವಾಕ್ಯ ಪ್ರಕಾರಗಳು: ೧) ಸರಳ ವಾಕ್ಯ ೨) ಸಂಯುಕ್ತ ವಾಕ್ಯ ೩) ಸಮ್ಮಿಶ್ರ ವಾಕ್ಯ

೧) **ಸರಳವಾಕ್ಯ:** ಒಂದು ಪೂರ್ಣಕ್ರಿಯಾಪದವನ್ನುಳ್ಳ ಸ್ವತಂತ್ರವಾಕ್ಯಕ್ಕೆ ಸರಳ ವಾಕ್ಯವೆಂದು ಹೆಸರು.

ಉದಾ: ಗಿಳಿ ಹಣ್ಣನ್ನು ತಿನ್ನುತ್ತದೆ.
ಮಕ್ಕಳು ಆಟ ಆಡಿದರು.

೨) **ಸಂಯುಕ್ತ ವಾಕ್ಯ:** ಎರಡು ಅಥವಾ ಅನೇಕ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣವಾದ ವಿಚಾರ ತಿಳಿಯಪಡಿಸುವ ವಾಕ್ಯವು 'ಸಂಯುಕ್ತ ವಾಕ್ಯ' ವೆನಿಸುವುದು. ಮತ್ತು, ಆದರೆ, ಆದುದರಿಂದ, ಅಥವಾ, ಇಲ್ಲವೆ, ಬಳಿಕ, ಕಾರಣ ಇತ್ಯಾದಿ – ಸಂಯೋಜಿತ ಶಬ್ದಗಳು ಮಧ್ಯವರ್ತಿಯಾಗಿ ವರ್ತಿಸುತ್ತವೆ.

ಉದಾ: ದಶರಥನು ರಾಮನಿಗೆ ಪಟ್ಟ ಕಟ್ಟಲು ಯೋಚಿಸಿದನು; ಆದರೆ ಕೈಕೇಯಿ ಅದಕ್ಕೆ ಅಡ್ಡ ಬಂದಳು.

ನಾನು ಮನೆಯಿಂದ ಹೊರಟಾಗ ಮಳೆ ಸುರಿಯುತ್ತಿತ್ತು; ಆದ್ದರಿಂದ ಕೊಡೆ ಹಿಡಿದುಕೊಂಡೇ ಬಂದೆ.

೩) **ಸಮ್ಮಿಶ್ರ ವಾಕ್ಯ:** ಒಂದು ಪ್ರಧಾನ ವಾಕ್ಯವೊಂದಕ್ಕೆ ಒಂದು ಅಥವಾ ಅದಕ್ಕಿಂತ ಹೆಚ್ಚು ಉಪವಾಕ್ಯಗಳು ಆಧೀನವಾಗಿ ಸೇರಿದ್ದರೆ ಸಮ್ಮಿಶ್ರ ವಾಕ್ಯವೆನಿಸುವುದು.

ಉದಾ: ೧) ಜಯಂತನು ಬಿ.ಎ. ಪಾಸಾದನೆಂಬುದನ್ನು ಅವನ ಬಾಯಿಂದಲೇ ಕೇಳಿದೆನು.

೨) ದಯಾನಂದರು ವಿದ್ಯಾಭ್ಯಾಸವನ್ನು ಮುಗಿಸಿ, ಗುರುವಿನ ಆಶೀರ್ವಾದ ಪಡೆದು, ವೈದಿಕ ಜ್ಞಾನಪ್ರಸಾರಕ್ಕಾಗಿ ದೇಶಸಂಚಾರ ಹೊರಟರು.

ಕೆಳಗಿನ ವಾಕ್ಯ ಪ್ರಕಾರಗಳನ್ನು ಗುರುತಿಸಿ ಹೆಸರಿಸಿರಿ.

೧) ಕೃಷ್ಣನು ಕೃಪೆ ತೋರಿದ; ಆದ್ದರಿಂದ ಪಾಂಡವರು ಯುದ್ಧದಲ್ಲಿ ಗೆದ್ದರು ☐

೨) ನಿನಗೆ ಇಷ್ಟವಾದ ಹಾಗೆ ಮಾಡು. ☐

೩) ಹುಡುಗನು ಶಾಲೆಯನ್ನು ಬಿಟ್ಟನೆಂಬುದು ನಿಮಗೆ ಗೊತ್ತಿಲ್ಲವೆ? ☐

೪) ತಮ್ಮ ಊರಿನ ಸಮೀಪದಲ್ಲೇ ಭೂಕಂಪವಾಯಿತೆಂಬುದನ್ನು ಕೇಳಿ ಜನ ಗಾಬರಿಯಾದರು. ☐

೫) ಜಾಣ ವಿದ್ಯಾರ್ಥಿಯು ತನ್ನ ಅಭ್ಯಾಸವನ್ನು ಚೆನ್ನಾಗಿ ಮಾಡುತ್ತಾನೆ. ☐

# ೬ ಅಡಗಿಸಿಟ್ಟ ಚಿನ್ನ

B7GTUS



ಅಂದು ಭಾನುವಾರ ಶಾಲೆಗೆ ಬಿಡುವು. ಶಂಕರ ಅಭ್ಯಾಸ ಮಾಡುತ್ತ ಕುಳಿತಿದ್ದನು. “ಶಂಕರಾ ಬಾರೋ, ಉಪಹಾರ ಮುಗಿಸಿ ಮತ್ತೆ ಅಭ್ಯಾಸ ಮಾಡುವಿಯಂತೆ” ಎಂದು ತಾಯಿ ಕರೆದಳು. ಶಂಕರ ಪುಸ್ತಕವನ್ನು ಬದಿಗಿಟ್ಟು ಅಡುಗೆಯ ಮನೆಯೊಳಗೆ ಬಂದನು. ತಾಯಿ ಉಪಹಾರ ಕೊಟ್ಟಳು. ಅದನ್ನು ಸೇವಿಸಿ ಶಂಕರ ಕೈ ತೊಳೆಯಲು ಹಿತ್ತಲ ಕಡೆಗೆ ಹೋದನು. ಹಿತ್ತಲದ ಕೈತೋಟದಲ್ಲಿ ತಂದೆ ಕೆಲಸ ಮಾಡುತ್ತಿದ್ದರು.

ತಂದೆ : ಶಂಕರ ಎಲ್ಲಿಗೆ ಹೋಗಿದ್ದೆ ?

ಶಂಕರ : ಅಪ್ಪಾ ಅಭ್ಯಾಸ ಮಾಡುತ್ತ ಕುಳಿತಿದ್ದೆ. ನಾಳೆ ಭೂಗೋಲ ವಿಷಯದ ಕಿರುಪರೀಕ್ಷೆ ಇದೆ, ಬಂಗಾರ ಎಲ್ಲಿ ಸಿಗುತ್ತದೆ ಎಂಬುವುದನ್ನು ಓದುತ್ತಿದ್ದೆ.

ತಂದೆ : ಏನು! ಪುಸ್ತಕದಲ್ಲಿ ಬಂಗಾರ ಸಿಗುತ್ತದೆಯ?

ಶಂಕರ : ಹಾಗಲ್ಲ ಅಪ್ಪಾ. ನಮ್ಮ ದೇಶದಲ್ಲಿ ಯಾವ ಸ್ಥಳಗಳಲ್ಲಿ ಬಂಗಾರದ ಗಣಿಗಳಿವೆ ಎಂಬುದನ್ನು ನಕಾಶೆಯಲ್ಲಿ ನೋಡುತ್ತಿದ್ದೆ.

ತಂದೆ : ಮಗ ನಮ್ಮ ಕೈತೋಟದಲ್ಲಿಯೇ ಅಪೂರ್ವವಾದ ಬಂಗಾರದ ಗಣಿ ಹುದುಗಿದೆಯಲ್ಲ.

ಶಂಕರ : (ಆಶ್ಚರ್ಯದಿಂದ) ಏನು, ನಮ್ಮ ಕೈತೋಟದಲ್ಲಿ ಬಂಗಾರದ ಗಣಿ ಇದೆಯೇ!

ತಂದೆ : ಹಾಗಲ್ಲ ಅಪ್ಪಾ. ನಮ್ಮ ದೇಶದಲ್ಲಿ ಯಾವ ಸ್ಥಳಗಳಲ್ಲಿ ಬಂಗಾರದ ಗಣಿಗಳಿವೆ ಎಂಬುವುದನ್ನು ನಕಾಶಿಯಲ್ಲಿ ನೋಡುತ್ತಿದ್ದೆ.

ತಂದೆ : ಹೌದು, ನಮ್ಮ ಕೈತೋಟದಲ್ಲಿ ನಾನು ಅದ್ಭುತವಾದ ಚಿನ್ನ ನಿಕ್ಷೇಪವನ್ನು ಹುದುಗಿಸಿ ಇಟ್ಟಿದ್ದೇನೆ. ಬಾ, ನಿನಗೆ ತೋರಿಸುತ್ತೇನೆ.

ಶಂಕರ : (ಆಶ್ಚರ್ಯದಿಂದ) ಏನು, ನಮ್ಮ ಕೈತೋಟದಲ್ಲಿ ಬಂಗಾರದ ಗಣಿ ಇದೆಯೇ!

(ತಂದೆಯು ಕೈಯಲ್ಲಿ ಗುದ್ದಲಿಯನ್ನು ಹಿಡಿದುಕೊಂಡು ಆಲೂಗಡ್ಡೆಯ ಸಾಲಿಗೆ ಬಂದನು. ಸಾವಕಾಶವಾಗಿ ಗುದ್ದಲಿಯಿಂದ ಅಗೆದು ಆಲೂಗಡ್ಡೆಗಳನ್ನು ಹೊರಗೆ ತೆಗೆಯತೊಡಗಿದನು.)

ಶಂಕರ : ಏನಪ್ಪಾ, ಬಂಗಾರದ ಗಣಿ ತೋರಿಸುತ್ತೇನೆಂದು ಹೇಳಿ ಆಲೂಗಡ್ಡೆಯನ್ನು ಅಗಿಯುತ್ತಿರುವಿಯಲ್ಲಾ?

ತಂದೆ : ಸ್ವಲ್ಪ ತಾಳು, ಈ ಕಡೆ ಬಾ.

(ಪಕ್ಕದ ಪಾತಿಗಳಿಂದ ಕೆಂಪು ಗೆಣಸು, ಮೂಲಂಗಿ, ಬೀಟ್‌ರೂಟ್, ಗಜ್ಜರಿ ಇವುಗಳನ್ನು ಹೊರತೆಗೆದನು)

ನೋಡು ಶಂಕರಾ, ನೀನು ಚಿನ್ನದ ಲೋಹ ಇಲ್ಲಿಯೇ ಸಿಗುತ್ತದೆ ಎಂದು ತಿಳಿದುಕೊಂಡೆಯಲ್ಲಾ!

ಶಂಕರ : ಹೌದಪ್ಪಾ.

ತಂದೆ : ಆ ಚಿನ್ನ ಕೇವಲ ಶೋಭೆಗಾಗಿ ಮತ್ತು ಹಣ ಗಳಿಸಲು ಮಾತ್ರ ಉಪಯೋಗವಾಗುತ್ತದೆ. ಆದರೆ ಈ ಚಿನ್ನಅದಕ್ಕಿಂತಲೂ ಬೆಲೆಬಾಳುವಂತಹದ್ದು. ಇದು ಶರೀರವನ್ನು ಸದೃಢಗೊಳಿಸುತ್ತದೆ. ರೋಗಪ್ರತಿಬಂಧಕ ಶಕ್ತಿಯನ್ನು ಕೊಡುತ್ತದೆ ಮತ್ತು ದೀರ್ಘಾಯುಷ್ಯವನ್ನು ನೀಡುತ್ತದೆ.

ಶಂಕರ : ಅಪ್ಪಾ ನನಗೊಂದೂ ಅರ್ಥವಾಗುತ್ತಿಲ್ಲ. ಬಿಡಿಸಿ ಹೇಳಪ್ಪಾ.

ತಂದೆ : ಬಂಗಾರ ಶರೀರಕ್ಕೆ ಶೋಭೆ ಕೊಡುತ್ತದೆವಿನಃ ಶರೀರದ ಸಂರಕ್ಷಣೆ ಮಾಡಲು ಸಾಧ್ಯವಿಲ್ಲ. ಈ ಶರೀರವೇ ಇಲ್ಲದಿದ್ದಾಗ ಆ ಬಂಗಾರ ಏತಕ್ಕೆ?

ಶಂಕರ : ಹೌದಪ್ಪಾ, ಶರೀರವೇ ಇಲ್ಲದಿದ್ದರೆ ಬಂಗಾರದ ಆಭರಣಗಳನ್ನು ಧರಿಸುವುದಾದರೂ ಹೇಗೆ?

ತಂದೆ : "ಶರೀರ ಮಾಧ್ಯಮಂ ಖಲು ಧರ್ಮ ಸಾಧನಂ" ಎಂಬ ಒಂದು ನಾಣ್ಣುಡಿ ಇದೆ. ಶರೀರ ಸಂಪತ್ತು ಸಧೃಡವಾಗಿದ್ದಾಗ ಮಾತ್ರ ನಾವು ಏನೆಲ್ಲ ಮಾಡಲು ಸಾಧ್ಯ.

ಶಂಕರ : ಹಾಗಾದರೆ ತರಕಾರಿಗಳಿಂದ ನಮಗೆ ಯಾವ ಲಾಭಗಳಿವೆ?

ತಂದೆ : ತರಕಾರಿಗಳಲ್ಲಿ ಶರೀರಕ್ಕೆ ಅಗತ್ಯವಿರುವ ಜೀವಸತ್ವಗಳು ಇರುತ್ತವೆ.

ಶಂಕರ : ಅಪ್ಪ ಯಾವ ಯಾವ ತರಕಾರಿಗಳಲ್ಲಿ ಯಾವ ಯಾವ ಅನ್ನಾಂಶಗಳು ಇರುತ್ತವೆ?

ತಂದೆ : ಆಲೂಗಡ್ಡೆ, ಗೆಣಸು, ಮುಂತಾದವುಗಳಲ್ಲಿ ಎಲ್ಲ ಜೀವನಸತ್ವಗಳು ಇರುತ್ತವೆ. ಗಜ್ಜರಿಯಲ್ಲಿ 'ಎ' ಮತ್ತು 'ಸಿ' ಜೀವನಸತ್ವಗಳು ಮತ್ತು ಅಧಿಕ ಖನಿಜಾಂಶಗಳೂ ಇರುತ್ತವೆ.

ಶಂಕರ : ಯಾವ ಪದಾರ್ಥಗಳಲ್ಲಿ ಪಿಷ್ಟವಿರುತ್ತದೆ?

ತಂದೆ : ಹಾಲು ಮತ್ತು ಏಕದಳ ಧಾನ್ಯಗಳಲ್ಲಿಯೂ ಪಿಷ್ಟವಿರುತ್ತದೆ. ಬೇಳೆಕಾಳುಗಳಲ್ಲಿ ಪ್ರೊಟೀನ ಇರುತ್ತವೆ. ತರಕಾರಿಗಳಲ್ಲಿ ಸೆಲ್ಯುಲೋಸ್ ನಾರು ಪದಾರ್ಥವಿರುತ್ತದೆ. ಇದು ಕರುಳಿನಲ್ಲಿ ಬೇಡವಾದ ಪದಾರ್ಥಗಳನ್ನು ಹೊರಹಾಕಲು ಸಹಾಯ ಮಾಡುತ್ತದೆ. ಅದರಂತೆ ಶೇಂಗಾ,

ಸೋಯಾಬೀನ ಮತ್ತು ಬೆಣ್ಣೆಯಲ್ಲಿ ಸ್ನಿಗ್ಧ ಪದಾರ್ಥವಿರುತ್ತದೆ. ಲಿಂಬೇಹಣ್ಣಿನಲ್ಲಿ ಕ್ಷಾರ ಪದಾರ್ಥವಿರುತ್ತದೆ. ಸೊಪ್ಪು ತರಕಾರಿಗಳಲ್ಲಿ ಅಧಿಕ ಪ್ರಮಾಣದಲ್ಲಿ ಸುಣ್ಣ ಮತ್ತು ಕಬ್ಬಿಣಾಂಶಗಳಿರುವವು. ಹೆಚ್ಚು ತರಕಾರಿಗಳಲ್ಲಿ ಔಷಧೀಯ ಗುಣಗಳು ಇವೆ.

ಶಂಕರ : ಅಬ್ಬಾ! ಇಷ್ಟೆಲ್ಲ ಪ್ರಯೋಜನಗಳಿವೆಯೇ?

ತಂದೆ : ಹೌದು! ಈ ಎಲ್ಲಾ ಕಾರಣಗಳಿಂದ ತರಕಾರಿಗಳನ್ನು "ರಕ್ಷಣಾ ಆಹಾರ" ಅಥವಾ "ಗೃಹವೈದ್ಯ" ಎಂದು ಕರೆಯುತ್ತಾರೆ. ನಿಜಕ್ಕೂ ತರಕಾರಿಗಳು ನಿಸರ್ಗದ ಕೊಡುಗೆಗಳು ಎಂದು ಹೇಳಬೇಕು. ಸಮತೋಲ ಆಹಾರದಲ್ಲಿ ತರಕಾರಿಗಳ ಪಾತ್ರ ಬಹಳ ಮುಖ್ಯವಾದದ್ದು.

ಶಂಕರ : ಅಪ್ಪಾ, ಸಮತೋಲ ಆಹಾರ ಎಂದರೇನು?

ತಂದೆ : ಎಲ್ಲ ಸತ್ವಗಳಿಂದ ಕೂಡಿದ ಆಹಾರಕ್ಕೆ ಸಮತೋಲ ಆಹಾರ ಎನ್ನುತ್ತಾರೆ. ಸಮತೋಲ ಆಹಾರವು ಶರೀರವನ್ನು ಸದೃಢ ಹಾಗೂ ನಿರೋಗಿಯನ್ನಾಗಿ ಮಾಡುತ್ತದೆ. ಶಂಕರಾ ಈಗ ಹೇಳು ನೋಡೋಣ

"ದೀರ್ಘಾಯುಷ್ಯವನ್ನು ಕೊಡುವ ಕೈತೋಟದ ಈ ಚಿನ್ನದ ಮಹತ್ವ ದೊಡ್ಡದೋ ಅಥವಾ ಚಿನ್ನದ ಗಣಿಯಲ್ಲಿ ಸಿಗುವ ಆ ಬಂಗಾರದ ಮಹತ್ವ ಹೆಚ್ಚಿನದೋ?"

ಶಂಕರ : ಅಪ್ಪಾ, ಕೈತೋಟದ ಈ ಚಿನ್ನವೇ ಹೆಚ್ಚಿನದು.

ತಂದೆ : ಚಿನ್ನಕ್ಕಾಗಿ ಅದೆಷ್ಟು ಜಗಳ, ಹೊಡೆದಾಟ ಯುದ್ಧ ಮತ್ತು ರಕ್ತಪಾತಗಳು ಆಗಿವೆ ಎಂಬುದನ್ನು ನೀನು ಇತಿಹಾಸದಲ್ಲಿ ಓದಿರುವಿ. ಅದು ರಕ್ತಹರಿಸಲು ಕಾರಣವಾಗುವ ಚಿನ್ನವಾದರೆ, ಇದು ಶರೀರದಲ್ಲಿ ರಕ್ತ ನಿರ್ಮಾಣ ಮಾಡುವ ಚಿನ್ನ. ಸುಂದರವಾದ ಬದುಕಿಗೆ ನಾವು ಈ ಚಿನ್ನವನ್ನೇ ಗಳಿಸಬೇಕಾಗಿದೆ. ಲಕ್ಷ ಲಕ್ಷ ಹೊನ್ನು ಇದ್ದರೇನು ಫಲ, ಆರೋಗ್ಯ ಭಾಗ್ಯವಿಲ್ಲದವನಿಗೆ! ಈಗ ಗೊತ್ತಾಯಿತೇ "ನಾನು ಅಡಗಿಸಿಟ್ಟ ಚಿನ್ನ ಯಾವುದೆಂದು"

ಶಂಕರ : ಹೌದಪ್ಪಾ ನಿಜವಾಗಿಯೂ ಇದುವೆ ಚಿನ್ನ!

## ಶಬ್ದಗಳ ಅರ್ಥ

ನಿಕ್ಷೇಪ – ಹುದುಗಿಟ್ಟ ನಿಧಿ; ಸೊಪ್ಪು – ತೊಪ್ಪಲು; ಅಪೂರ್ವ – ಅಪರೂಪ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

ಅ) ತಾಯಿಯು ಶಂಕರನನ್ನು ಏತಕ್ಕೆ ಕರೆದಳು?

................................ ................................ ..............................

ಆ) 'ಎ' ಮತ್ತು 'ಸಿ' ಜೀವನಸತ್ವವುಳ್ಳ ಪದಾರ್ಥಗಳಾವುವು?

................................ ................................ ..............................

ಇ) ಸ್ನಿಗ್ಧ ಪದಾರ್ಥಗಳಾವುವು?

................................ ................................ ..............................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ................................ ................................ .............................

ಉತ್ತರ ................................ ................................ .............................

ಆ) ................................ ................................ .............................

ಉತ್ತರ ................................ ................................ .............................

ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?

ಅ) ಏನು, ನಮ್ಮ ಕೈತೋಟದಲ್ಲಿ ಬಂಗಾರದ ಗಣಿ ಇದೆಯೇ?

.................................................................................................

.................................................................................................

ಆ) ಅಪ್ಪಾ, ಸಮತೋಲ ಆಹಾರ ಎಂದರೇನು?

.................................................................................................

.................................................................................................

ಇ) ಹೌದಪ್ಪ. ನಿಜವಾಗಿಯೂ ಇದುವೆ ಚಿನ್ನ!

.................................................................................................

.................................................................................................

ಪ್ರಶ್ನೆ ೪) ಬಿಟ್ಟ ಸ್ಥಳಗಳನ್ನು ತುಂಬಿರಿ.

ಅ) ಏನು, ನಮ್ಮ ಕೈತೋಟದಲ್ಲಿ ಬಂಗಾರದ ಗಣಿ ಇದೆಯೇ. ಹಾಗಾದರೆ ತಮಗೆ ಗೊತ್ತಿರುವ ಇನ್ನಿತರ ಗಣಿಗಳು .........................................

ಆ) ಬಂಗಾರ ಶರೀರಕ್ಕೆ ಶೋಭೆ ಕೊಡುತ್ತದೆ ಹಾಗಾದರೆ ಶೋಭೆ ಕೊಡುವ ಬಂಗಾರದ ಆಭರಣಗಳು .........................................

ಇ) ಚಿನ್ನ ರಕ್ತ ಹರಿಸಲು ಕಾರಣವಾದರೆ; ಶರೀರದಲ್ಲಿ ರಕ್ತ ನಿರ್ಮಾಣ ಮಾಡುವ ಚಿನ್ನ .........................................

ಪ್ರಶ್ನೆ ೫) ಕೆಳಗಿನ ಶಬ್ದಗಳಿಗೆ ಅರ್ಥ ಹೇಳಿ ವಾಕ್ಯದಲ್ಲಿ ಉಪಯೋಗಿಸಿರಿ.

ಅ) ರಮಣೀಯ ................................................................................

ವಾಕ್ಯ ......................................................................................

ಆ) ಅದ್ಭುತ...............................................................................

ವಾಕ್ಯ ......................................................................................

ಇ) ಕೈತೋಟ ..............................................................................

ವಾಕ್ಯ ......................................................................................

ಉಪಕ್ರಮ: ಭೂಮಿಯ ಒಳಭಾಗದಲ್ಲಿ ಹಾಗೂ ಭೂಮಿಯ ಮೇಲ್ಭಾಗದಲ್ಲಿ ಬೆಳೆಯುವ ಆಹಾರ ಪದಾರ್ಥಗಳ ಪಟ್ಟಿ ತಯಾರಿಸಿರಿ.

**ಚಿನ್ನಕ್ಕಿಂತ ಅನ್ನವೇ ಶ್ರೇಷ್ಠ**

ಥಟ್ಟನೆ ಹೇಳಿ:

ಚಿಕ್ಕ ಚಿಕ್ಕ ಪೆಟ್ಟಿಗೆ
ಚಿನ್ನದ ಪೆಟ್ಟಿಗೆ
ಮುಚ್ಚಳ ತೆಗೆದರೆ
ಮುನ್ನೂರು ಪೆಟ್ಟಿಗೆ

**ಗುಂಪಿಲಾ**



## ಸಂಧಿ

ಎರಡು ಅಕ್ಷರಗಳು ಪರಸ್ಪರ ಕಾಲವಿಳಂಬವಿಲ್ಲದೆ ಕೂಡಿಕೊಳ್ಳುವುದಕ್ಕೆ 'ಸಂಧಿ' ಎನ್ನುವರು.

ಉದಾ: ಇನ್ನು + ಒಮ್ಮೆ = ಇನ್ನೊಮ್ಮೆ

ಮರಗಳು + ಇವೆ = ಮರಗಳಿವೆ

ಯಾರು + ಇಗೆ = ಯಾರಿಗೆ

ಹಳೆ + ಕನ್ನಡ = ಹಳೆಗನ್ನಡ

ಸಂಧಿಗಳು
- ಕನ್ನಡ ಸಂಧಿಗಳು
  - ಸ್ವರ ಸಂಧಿಗಳು
    - ಲೋಪಸಂಧಿ
    - ಆಗಮ ಸಂಧಿ
      - ಯಕಾರಾಗಮ
      - ವಕಾರಾಗಮ
  - ವ್ಯಂಜನ ಸಂಧಿ
    - ಆದೇಶ (ಗದಬಾದೇಶ ಸಂಧಿ)
- ಸಂಸ್ಕೃತ ಸಂಧಿಗಳು

### ಸಂಧಿಗಳಲ್ಲಿ ಎರಡು ಪ್ರಕಾರಗಳು:

೧) ಕನ್ನಡ ಸಂಧಿಗಳು

೨) ಸಂಸ್ಕೃತ ಸಂಧಿಗಳು

೧) ಕನ್ನಡ ಸಂಧಿಗಳಲ್ಲಿ ಎರಡು ಪ್ರಕಾರಗಳು.

೧) ಸ್ವರ ಸಂಧಿ :- ಸ್ವರದ ಮುಂದೆ ಸ್ವರವು ಬಂದು ಸಂಧಿಯಾಗುವುದಕ್ಕೆ 'ಸ್ವರ ಸಂಧಿ' ಎನ್ನುವರು

೨) ವ್ಯಂಜನ ಸಂಧಿ:- ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದು ಸಂಧಿಯಾಗುವುದಕ್ಕೆ 'ವ್ಯಂಜನ ಸಂಧಿ' ಎನ್ನುವರು.

**ಸ್ವರಸಂಧಿಯಲ್ಲಿ ಎರಡು ಪ್ರಕಾರ :** ೧) ಲೋಪ ಸಂಧಿ ೨) ಆಗಮ ಸಂಧಿ

ಅ) ಯಕಾರಾಗಮ ಆ) ವಕಾರಾಗಮ

**ವ್ಯಂಜನ ಸಂಧಿಯ ಒಂದು ಪ್ರಕಾರ:**

೧) ಆದೇಶ ಸಂಧಿ

## ಸ್ವರ ಸಂಧಿಗಳು

**ಲೋಪ ಸಂಧಿ:**

ಎರಡು ಸ್ವರಗಳು ಸೇರಿ ಸಂಧಿಯಾಗುವಾಗ ಮೊದಲನೆಯ ಪದದ ಕೊನೆಯ ಸ್ವರವು ಲೋಪವಾದರೆ ಅದು ಸ್ವರಲೋಪ ಸಂಧಿ ಆಗುವುದು.

**ಉದಾ:** ಅಲ್ಲಿ + ಒಂದು = ಅಲ್ಲೊಂದು

ಅಲ್ಲಿ + ಅಲ್ಲಿ = ಅಲ್ಲಲ್ಲಿ

ಆಟ + ಓಟ = ಆಟೋಟ

ಊರು + ಊರು = ಊರೂರು

ಇನ್ನು + ಒಮ್ಮೆ = ಇನ್ನೊಮ್ಮೆ

**ಆಗಮ ಸಂಧಿ:** ಎರಡು ಪದಗಳು ಸೇರಿ ಸಂಧಿ ಆಗುವಾಗ ಅವೆರಡರ ನಡುವೆ ಹೊಸದೊಂದು ಅಕ್ಷರವು ಅಂದರೆ ಯಕಾರವಾಗಲಿ, ವಕಾರವಾಗಲಿ ಆಗಮಿಸಿದರೆ ಅದು 'ಆಗಮಸಂಧಿ' ಎನಿಸುವುದು.

ಉದಾ: ಗಿಡ + ಅನ್ನು= ಗಿಡವನ್ನು

ಮನೆ + ಅಲ್ಲಿ = ಮನೆಯಲ್ಲಿ

ಕರು + ಅನ್ನು = ಕರುವನ್ನು

ಮೇ + ಉತ್ತ = ಮೇಯುತ್ತ

## <u>ವ್ಯಂಜನ ಸಂಧಿ</u>

**ಆದೇಶ ಸಂಧಿ:** ಎರಡು ಶಬ್ದಗಳು ಸೇರಿ ಸಂಧಿ ಆಗುವಾಗ ಒಂದು ಅಕ್ಷರದ ಬದಲಿಗೆ ಮತ್ತೊಂದು ಅಕ್ಷರ ಆದೇಶವಾದಿ ಬಂದರೆ 'ಆದೇಶ ಸಂಧಿ' ಎನಿಸುವುದು. ಸಾಮಾನ್ಯವಾಗಿ ಎರಡನೇ ಪದದ ಮೊದಲಿಗೆ ಕ, ತ, ಪ ಕಾರಗಳಿಗೆ ಗ, ದ, ಬ ಕಾರಗಳು ಆದೇಶವಾಗಿ ಬರುತ್ತವೆ.

**ಉದಾ:** ಹಳೆ + ಕನ್ನಡ = ಹಳೆಗನ್ನಡ

ಹುಲಿ + ತೊಗಲು = ಹುಲಿದೊಗಲು

ಕಣ್ + ಪನಿ = ಕಂಬನಿ

# ೧೦ ಈ ಮಣ್ಣು ನಮ್ಮದು

ಈ ಮಣ್ಣು ನಮ್ಮದು ಈ ಗಾಳಿ ನಮ್ಮದು
ಕಲಕಲನೆ ಹರಿಯುತಿಹ ನೀರು ನಮ್ಮದು
ಕಣಕಣದಲು ಭಾರತೀಯ ರಕ್ತ ನಮ್ಮದು


ನಮ್ಮ ಕಾಯ್ವ ಹಿಮಾಲಯವೆ ತಂದೆ ಸಮಾನ
ಗಂಗೆ, ತುಂಗೆ, ಕಾವೇರಿ ತಾಯಿ ಸಮಾನ
ಈ ದೇಶದ ಜನರೆಲ್ಲರು ಸೋದರ ಸಮಾನ
ಈ ನಾಡಿನ ಹೃದಯವದು ದೈವ ಸನ್ನಿದಾನ

ಅಜಂತಾ, ಎಲ್ಲೋರಾ, ಹಳೇಬೀಡು ಬೇಲೂರು
ಶಿಲೆಗಳಿವು ಕಲೆಯ ಆಗರ
ಹಿಂದು, ಬುದ್ಧ, ಜೈನ, ಕ್ರಿಸ್ತ-ಮುಸಲ್ಮಾನ
ಧರ್ಮಗಳ ಮಹಾನ ಸಾಗರ

ನಡೆದು ಹೋದ ಚರಿತೆಯೋ
ನಾಳೆ ಎನುವ ಕವಿತೆಯೋ
ಈ ನಾಡ ಮಣ್ಣಿನಲ್ಲಿದೆ ಜೀವನಸಾರ

ತಂಗಾಳಿಗೆ ತಲೆ ತೂಗೋ ಪೈರಿನ ಹಾಡು
ಆ ಹಾಡಿಗೆ ತಾಳ ಕೊಡುವ ಯಂತ್ರದ ಜಾಡು
ವಿಜ್ಞಾನವು ಅಜ್ಞಾನವ ಗೆಲ್ಲುವ ಪಾಡು
ಹೊಸ ಭಾರತ ನಿರ್ಮಾಣವು ಸಾಗಿದೆ ನೋಡು

– ಆರ್. ಎನ್. ಜಯಗೋಪಾಲ



## ಶಬ್ದಗಳ ಅರ್ಥ

ಜಾಡು – ರೀತಿ; ಆಗರ – ಸಂಗ್ರಹ; ಸಾರ – ತಿರುಳು, ಸತ್ವ

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಶಿಲೆ ......................................; ಸಾಗರ ................................;

ತಂಗಾಳಿ ................................; ಪೈರು ................................

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

ಅ) ತಂದೆಗೆ ಯಾವುದು ಸಮಾನವಾಗಿದೆ?

..........................................................................................

ಆ) ಶಿಲ್ಪಕಲೆಯ ಆಗರಗಳು ಯಾವುವು?

..........................................................................................

ಇ) ವಿಜ್ಞಾನವು ಯಾವುದನ್ನು ಗೆಲ್ಲುತ್ತದೆ?

..........................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

ಪ್ರಶ್ನೆ ೩) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಮಾಡಿ ಸರಳಾನುವಾದ ಬರೆಯಿರಿ.

ಅಜಂತಾ ಎಲ್ಲೋರಾ ....................................

...................................................................

...................................................................

................................................................... ಮಹಾಸಾಗರ

.............................................................................................

.............................................................................................

.............................................................................................

.............................................................................................

ಪ್ರಶ್ನೆ ೪) ಕೆಳಗಿನ ಶಬ್ದಗಳ ಅರ್ಥಹೇಳಿ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.

ಅ) ಸೋದರ ಆ) ಚರಿತ್ರೆ ಇ) ದೇಶ

ಪ್ರಶ್ನೆ ೫) ಅ) ಕೆಳಗಿನ ಶಬ್ದಗಳ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಅ) ಸ್ವದೇಶ X ............................ ಆ) ಧರ್ಮ X ........................

ಇ) ಜ್ಞಾನ X ............................

ಆ) ಕೆಳಗಿನ ಶಬ್ದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಅ. ಸಾಗರ ................... ................... ...................

ಆ. ತಾಯಿ ................... ................... ...................

ಇ. ಕವಿತೆ ................... ................... ...................

ಈ. ಆಕಾಶ ................... ................... ...................

ಇ) ಉದಾಹರಣೆಯಲ್ಲಿ ತೋರಿಸಿದಂತೆ ಅಂತ್ಯಾಕ್ಷರವನ್ನು ಬಳಸಿ ಹೊಸ ಶಬ್ದಗಳನ್ನು ರಚಿಸಿರಿ.

ಉದಾ: ಭಾರತ – ತವರು – ರುಚಿ – ಚಿರತೆ – ತೆರೆ – ರೆಂಬೆ

ಅ) ಪದಕ ............. ............. ............... .............. .............

ಆ) ಕವನ ............. ............. ............... ............. ...............

ಇ) ಗುಲಾಬಿ ............. ............. ............. ............. .............

**ಉಪಕ್ರಮ:**

ನಿಮ್ಮ ಪರಿಸರದಲ್ಲಿರುವ ಬೇರೆ ಬೇರೆ ಪ್ರಕಾರದ ಮಣ್ಣುಗಳನ್ನು ಸಂಗ್ರಹಿಸಿ ಅದರ ಗುಣಧರ್ಮಗಳ ಬಗ್ಗೆ ತಿಳಿದುಕೊಳ್ಳಿರಿ.

**ನಮ್ಮ ನಾಡು ಸುಂದರ ಸಕಲ ಧರ್ಮ ಮಂದಿರ**

**ಥಟ್ಟನೆ ಹೇಳಿ:**

ತಾತಾಗಿಂಡಿ ತಾಮ್ರದ ಗಿಂಡಿ


ಮುಚ್ಚಳ ತೆಗೆದ್ರೆ ಮುನ್ನೂರು ಗಿಂಡಿ

## ಪ್ರವಾಸ



# ೧೧ ರೇಷ್ಮೆ ಸಾಕಾಣಿಕೆ

B7ZKY3



ಅಂದು ದೀಪಾವಳಿ ಹಬ್ಬ. ಮನೆಯವರಿಗೆಲ್ಲ ಹಬ್ಬದ ಸಡಗರ. ನರಕಚತುರ್ಥಿಯ ಆರತಿ ಬೆಳಗುವ ದಿನ. ಮನೆಯವರೆಲ್ಲ ಮಂಗಳ ಸ್ನಾನ ಮಾಡಿದರು. ಹೊಸ ಹೊಸ ಬಟ್ಟೆಗಳನ್ನು ಧರಿಸಿದರು. ಅಷ್ಟರಲ್ಲಿ ವೈಶಾಲಿಯ ಸೋದರಮಾವ ರಮೇಶನೂ ಬಂದನು. ವೈಶಾಲಿ ತನ್ನ ಸಹೋದರನಾದ ಸಚಿನನಿಗೆ ಮತ್ತು ತಂದೆಯವರಿಗೆ ಆರತಿ ಬೆಳಗಿದಳು. ಅವರು ಉಡುಗೊರೆ ನೀಡಿದರು. ತಾಯಿ ಶಾಂತಮ್ಮ ತನ್ನ ಸಹೋದರನಿಗೆ ಆರತಿ ಬೆಳಗಿದಳು. ಅವನು ತನ್ನ ಸಹೋದರಿಗೆ ರೇಷ್ಮೆ ಸೀರೆಯನ್ನು ಉಡುಗೊರೆ ನೀಡಿದನು. ಅದು ನಯವಾಗಿದ್ದು ಬಹಳ ಮನಮೋಹಕವಾಗಿತ್ತು. ವೈಶಾಲಿಯ ಕಣ್ಣುಗಳು ಮಾತ್ರ ತಾಯಿಯ ಸೀರೆಯನ್ನೇ ನೋಡುತ್ತಿದ್ದವು.

ವೈಶಾಲಿ : ಅಮ್ಮಾ ಈ ಸೀರೆ ಎಷ್ಟು ಚೆನ್ನಾಗಿದೆಯಲ್ಲ!

ತಾಯಿ : ಹೌದು ಇದು ರೇಷ್ಮೆ ಸೀರೆ.

ವೈಶಾಲಿ : ಹಾಗಾದರೆ ನಾನು ತೊಟ್ಟಿರುವ ಬಟ್ಟೆ?

ತಾಯಿ : ಇದು ಹತ್ತಿ ಬಟ್ಟೆ.

ಸಚಿನ : ಇವೆರಡರಲ್ಲಿ ಏನು ಅಂತರವಿದೆ?

ತಂದೆ : ರೇಷ್ಮೆ ಸೀರೆಯನ್ನು ಸೋದರಮಾವ ತಂದಿದ್ದಾನೆ. ಅದು ತವರುಮನೆಯ ಸೀರೆ. ಅದಕ್ಕೆ ಇದು ಚೆನ್ನಾಗಿದೆ.

ವೈಶಾಲಿ : ಹೌದೇನಮ್ಮಾ?

ತಾಯಿ : ಛೀ! ಹೋಗ್ರೀ! ಈಗಲೂ ಹುಡುಗಾಟಿಕೇನಾ?

ರಮೇಶ : ಸಚಿನ, ಹತ್ತಿಯ ನೂಲಿನಿಂದ ವೈಶಾಲಿಯ ಈ ಬಟ್ಟೆಯನ್ನು ತಯಾರಿಸಿರುತ್ತಾರೆ. ಆದರೆ ರೇಷ್ಮೆ ಹುಳದಿಂದ ಈ ಸೀರೆ ತಯಾರಿಸಿರುತ್ತಾರೆ.

ಸಚಿನ : ಏನು, ಹುಳದಿಂದ ಸೀರೆ ತಯಾರಿಸುತ್ತಾರೆಯೇ!

ರಮೇಶ : ಹೌದು. ರೇಷ್ಮೆ ಹುಳಗಳ ಜೊಲ್ಲಿನಿಂದ ಒಂದು ಪ್ರಕಾರದ ಎಳೆ ತಯಾರಾಗುತ್ತದೆ. ಆ ಎಳೆಗಳನ್ನು ಒಟ್ಟಿಗೆ ಸೇರಿಸಿ ರೇಷ್ಮೆ ಬಟ್ಟೆ ತಯಾರಿಸುತ್ತಾರೆ.

ವೈಶಾಲಿ : ಅಬ್ಬಾ, ಇದು ಸೋಜಿಗವಾಗಿದೆಯಲ್ಲ!

ರಮೇಶ : ಹೌದು. ನಮ್ಮ ಊರಿನಲ್ಲಿ ರೇಷ್ಮೆ ಸಾಗಾಣಿಕೆಯ ಕೇಂದ್ರಗಳಿವೆ. ಹಬ್ಬ ಮುಗಿದ ಮೇಲೆ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ. ರೇಷ್ಮೆ ಹೇಗೆ ತಯಾರಾಗುತ್ತದೆ ಎಂಬುದನ್ನು ನೀವು ಪ್ರತ್ಯಕ್ಷವಾಗಿ ನೋಡುವಿರಂತೆ.

ಸಚಿನ : ಆಗಲಿ ಮಾವ.

ಕೆಲವು ದಿವಸಗಳ ನಂತರ ಸಚಿನ ಮತ್ತು ವೈಶಾಲಿ ಮಾವನ ಜೊತೆಗೂಡಿ ಹಳ್ಳಿಗೆ ಬಂದರು. ಮಾವನ ಹಳ್ಳಿಯಲ್ಲಿ ಹಲವಾರು ತೋಟಗಳಲ್ಲಿ ರೇಷ್ಮೆ ಸಾಗಾಣಿಕೆಯ ಕೇಂದ್ರಗಳಿದ್ದವು. ಅವರೆಲ್ಲರೂ ರೇಷ್ಮೆ ಸಾಗಾಣಿಕೆ ಕೇಂದ್ರಕ್ಕೆ ಹೋದರು. ಅಲ್ಲಿ ನಾಗಣ್ಣ ಎಂಬ ರೈತ ಅವರೆಲ್ಲರಿಗೂ ರೇಷ್ಮೆ ಸಾಗಾಣಿಕೆಯ ವಿಧಾನವನ್ನು ತಿಳಿಸಿಕೊಟ್ಟನು.

ನಾಗಣ್ಣ : ಇದು ಹಿಪ್ಪು ನೇರಳೆ ಬೆಳೆ. ಇದರ ಎಲೆಗಳೇ ರೇಷ್ಮೆ ಹುಳುವಿನ ಆಹಾರ. ಸೂಕ್ತ ಸಮಯದಲ್ಲಿ ರೈತರು ರೇಷ್ಮೆ ಇಲಾಖೆಯಿಂದ ಮೊಟ್ಟೆಗಳನ್ನು ತರುತ್ತಾರೆ. ಅವುಗಳನ್ನು ಟ್ರೇಗಳಲ್ಲಿ ಜೋಪಾನವಾಗಿ ಇಡುತ್ತಾರೆ. ಇಲಾಖೆಯವರು ನಿರ್ಮಾಣ ಮಾಡಿದ ದಿನಾಂಕದಿಂದ ಹತ್ತು ದಿನಗಳೊಳಗೆ ಮೊಟ್ಟೆಗಳಿಂದ ಮರಿಗಳು ಹೊರಬರುತ್ತವೆ. ಈ ಹುಳಗಳಿಗೆ 'ಚಾಕಿ ಹುಳ' ಅಥವಾ 'ಲಾರ್ವ' ಎನ್ನುತ್ತಾರೆ.

ವೈಶಾಲಿ : ಇಷ್ಟು ಚಿಕ್ಕ ಮರಿಗಳಿಗೆ ಆಹಾರವನ್ನು ಹೇಗೆ ತಿನ್ನಿಸುವಿರಿ?

ನಾಗಣ್ಣ : ಹಿಪ್ಪು ನೇರಳೆಯ ತುದಿ ಭಾಗದ ಎಲೆಗಳನ್ನು ತಂದು ಅತೀ ಸಣ್ಣ ಚೂರುಗಳಾಗಿ ಕತ್ತರಿಸಿ ಹುಳಗಳ ಮೇಲೆ ಹಾಕುತ್ತೇವೆ. ಅದನ್ನು ತಿಂದು ಹುಳಗಳು ದಿನೇ ದಿನೇ ಬೆಳೆಯುತ್ತ ಬಲಿಯುತ್ತವೆ.

ಸಚಿನ : ಹೌದೇನು?

ನಾಗಣ್ಣ : ಹೌದು. ಮೊಟ್ಟೆಯಿಂದ ಹೊರಬಂದ ಮರಿ ಸುಮಾರು ಇಪ್ಪತ್ತು ದಿನಗಳವರೆಗೆ ಬೆಳೆದನಂತರ, ಅದು ಗಾತ್ರದಲ್ಲಿ ದಪ್ಪವಾಗಿ ಪೂರ್ಣ ರಸಭರಿತವಾಗುತ್ತದೆ.

ವೈಶಾಲಿ : ಅಂದರೆ?

ನಾಗಣ್ಣ : ಅದರ ಮೈತುಂಬ ರಸ ತುಂಬಿದಂತೆ ಕಾಣುತ್ತದೆ. ಇದಕ್ಕೆ 'ಕೀಡೆ' ಎಂತಲೂ ಕರೆಯುವರು. ಈಗ ಹುಳವನ್ನು ಚಂದ್ರಿಕೆಯಲ್ಲಿ ಹಾಕುತ್ತಾರೆ.

ಸಚಿನ : ಚಂದ್ರಿಕೆ ಅಂದರೇನು ಅಂಕಲ್?

ನಾಗಣ್ಣ : ಇದೋ ನೋಡಿ, ಇದು ಬಿದಿರಿನ ಚಂದ್ರಿಕೆ, ಹಣ್ಣಾದ ಹುಳಗಳನ್ನು ಇದರಲ್ಲಿ ಹಾಕುತ್ತಾರೆ. ಅದು ತನ್ನ ಬಾಯಿಯಿಂದ ಒಂದು ಪ್ರಕಾರದ ಜೊಲ್ಲಿನ ಎಳೆಗಳನ್ನು ಬಿಡುತ್ತ ೨೪ ಗಂಟೆಗಳಲ್ಲಿ ತನ್ನ ಮೈಸುತ್ತ ಪೂರ್ತಿಯಾಗಿ ಸುತ್ತಿಕೊಂಡು ಗೂಡನ್ನು ನಿರ್ಮಾಣ ಮಾಡಿಕೊಳ್ಳುತ್ತದೆ. ಈ ಎಳೆ ಸುಮಾರು ೬೦೦ ರಿಂದ ೮೦೦ ಮೀಟರುಗಳವರೆಗೆ ಇರುತ್ತವೆ. ಗೂಡು ತಯಾರಾದ ೫ ದಿನಗಳ ಒಳಗೆ ಅದನ್ನು ಪೇಟೆಗೆ ಒಯ್ದು ಮಾರಾಟ ಮಾಡಬೇಕು. ಇತ್ತೀಚೆಗೆ ಪ್ಲಾಸ್ಟಿಕ್ ಚಂದ್ರಿಕೆಗಳು ಬಳಕೆಯಲ್ಲಿ ಬಂದಿವೆ.

ವೈಶಾಲಿ : ಮಾರಾಟ ಮಾಡಲು ತಡವಾದರೆ ಏನಾಗುತ್ತದೆ?

ನಾಗಣ್ಣ : ಗೂಡಿನೊಳಗಡೆ ಇದ್ದ ಕೀಡೆಯು ಪತಂಗವಾಗಿ ಗೂಡನ್ನು ಕತ್ತರಿಸಿ ಹೊರಗೆ ಬರುತ್ತದೆ.

ಸಚಿನ : ಏನು ಕೀಡೆಯು ಪತಂಗವಾಗುತ್ತದೆಯೇ!

ನಾಗಣ್ಣ : ಹೌದು. ಒಂದು ವೇಳೆ ಗೂಡು ಕತ್ತರಿಸಿದರೆ ಅದನ್ನು ಕೊಂಡುಕೊಳ್ಳುವುದಿಲ್ಲ.

ವೈಶಾಲಿ : ಏಕೆ?

ನಾಗಣ್ಣ : ಅಖಂಡವಾಗಿ ಇರಬೇಕಾದ ಎಳೆಯು ತುಂಡು ತುಂಡಾಗುತ್ತದೆ. ಖರೀದಿ ಮಾಡಿದ ವ್ಯಾಪಾರಸ್ಥರು ತಕ್ಷಣ ಬಿಸಿ ನೀರಿನಲ್ಲಿ ಹಾಕುತ್ತಾರೆ.

ಆಗ ಗೂಡಿನೊಳಗಿದ್ದ ಹುಳ ಸಾಯುತ್ತದೆ. ಆಮೇಲೆ ಯಂತ್ರಗಳ ಸಹಾಯದಿಂದ ಗೂಡಿನಲ್ಲಿರುವ ಅಖಂಡವಾದ ಎಳೆಯನ್ನು ಹೊರಗೆ ತೆಗೆಯುತ್ತಾರೆ.

ಸಚಿನ : ರೇಷ್ಮೆ ಜೀವನಕ್ರಮದಲ್ಲಿರುವ ಹಂತಗಳೆಷ್ಟು?

ನಾಗಣ್ಣ : ಮೊಟ್ಟೆ, ಚಾಕಿಹುಳ, ಕೀಡೆ ಮತ್ತು ಪತಂಗ ಎಂದು ನಾಲ್ಕು ಹಂತಗಳು ಇವೆ.

ರಮೇಶ : ರೇಷ್ಮೆ ಮಾರಾಟದ ಕೇಂದ್ರಗಳು ಎಲ್ಲಿವೆ?

ನಾಗಣ್ಣ : ಕರ್ನಾಟಕದ ರಾಮನಗರ ಮತ್ತು ಮಹಾರಾಷ್ಟ್ರದ ಗಡಹಿಂಗ್ಲಜ ಮುಂತಾದ ಕಡೆಗಳಲ್ಲಿ ರೇಷ್ಮೆ ಮಾರಾಟದ ಕೇಂದ್ರಗಳಿವೆ.

ವೈಶಾಲಿ : ಅಬ್ಬಾ, ಅದ್ಭುತವಾಗಿದೆ ರೇಷ್ಮೆ ತಯಾರಿಕೆಯ ವಿಧಾನ!

ರಮೇಶ : ಈಗ ತಿಳಿಯಿತೆ ನಿಮಗೆ ರೇಷ್ಮೆ ತಯಾರಾಗುವ ವಿಧಾನ

ಸಚಿನ : ಹೌದು ಮಾವ, ನಮಗೆ ಪೂರ್ಣ ತಿಳಿಯಿತು.

## ಶಬ್ದಗಳ ಅರ್ಥ

ಉಡುಗೊರೆ – ಕಾಣಿಕೆ, ಬಳುವಳಿ; ಮನಮೋಹಕ – ಆಕರ್ಷಕ;

ನಯವಾಗಿತ್ತು – ನುಣುಪಾಗಿತ್ತು; ಸೂಕ್ತ – ಯೋಗ್ಯ;

ಹಂತ – ಘಟ್ಟ; ಪತಂಗ – ಚಿಟ್ಟೆ

ಶಬ್ದಕೋಶದ ಸಹಾಯದಿಂದ ಕೆಳಗಿನ ಪದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಸಡಗರ .......................................; ಸೋಜಿಗ .......................................;

ವಿಧಾನ .......................................

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ರೇಷ್ಮೆ ಹುಳುಗಳ ಆಹಾರ ಯಾವುದು?

..........................................................................................

ಆ) ರೇಷ್ಮೆ ಹುಳಗಳ ಬೆಳವಣಿಗೆಯ ಅವಸ್ಥೆಗಳಾವುವು?

......................................................................................................

ಇ) ರೇಷ್ಮೆ ಎಳೆ ಹೇಗೆ ತಯಾರಾಗುತ್ತದೆ?

......................................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ......................................................................................................

ಉತ್ತರ ......................................................................................................

ಆ) ......................................................................................................

ಉತ್ತರ ......................................................................................................

ಪ್ರಶ್ನೆ ೩) ಯೋಚಿಸಿ ಈ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿರಿ.

ಅ) ರೇಷ್ಮೆಯು ರೇಷ್ಮೆಹುಳದಿಂದ ತಯಾರಾಗುತ್ತದೆ. ಹಾಗಾದರೆ ಉಣ್ಣೆ ......................................

ಆ) ರೇಷ್ಮೆ ಬಟ್ಟೆಗಳು, ಹತ್ತಿಯ ಬಟ್ಟೆಗಳು ಇರುತ್ತವೆ. ಹಾಗಾದರೆ ನಿಮಗೆ ಗೊತ್ತಿರುವ ಇತರ ಬಟ್ಟೆಗಳು ......................................

ಪ್ರಶ್ನೆ ೪) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು.

ಅ) "ಹತ್ತಿಯ ನೂಲಿನಿಂದ ವೈಶಾಲಿಯ ಬಟ್ಟೆಯನ್ನು ತಯಾರಿಸಿದ್ದಾರೆ"

ಉತ್ತರ ......................................................................................................

ಆ) "ಏನು, ಹುಳಗಳಿಂದ ರೇಷ್ಮೆ ತಯಾರಿಸುತ್ತಾರೆಯೇ"!

ಉತ್ತರ ......................................................................................................

ಇ) “ಈ ಹುಳಗಳಿಗೆ ಚಾಕಿಹುಳು, ಅಥವಾ ಲಾರ್ವ ಎನ್ನುತ್ತಾರೆ.”

ಉತ್ತರ ........................................................................................

ಈ) “ಅಬ್ಬಾ! ಅದ್ಭುತವಾಗಿದೆ ರೇಷ್ಮೆ ತಯಾರಿಕೆಯ ವಿಧಾನ”

ಉತ್ತರ ........................................................................................

ಪ್ರಶ್ನೆ ೫. ರೇಷ್ಮೆಹುಳದ ಬೆಳವಣಿಗೆಯ ಹಂತಗಳನ್ನು ಅನುಕ್ರಮವಾಗಿ ಬರೆಯಿರಿ.

ಪತಂಗ, ಮರಿ, ಕೀಡೆ, ತತ್ತಿ

ಉತ್ತರ ........................................................................................

ಪ್ರಶ್ನೆ ೬) ಉದಾಹರಣೆಯಲ್ಲಿ ತೋರಿಸಿದಂತೆ ವಿರುದ್ಧಾರ್ಥಕ ಪದಗಳನ್ನು ಬರೆದು ಅವುಗಳನ್ನು ವಾಕ್ಯದಲ್ಲಿ ಉಪಯೋಗಿಸಿರಿ.

ಉದಾ: ಹೊರಗೆ X ಒಳಗೆ

ಹಣ್ಣಾದ ಹುಳಗಳನ್ನು ಚಂದ್ರಿಕೆಯ ಒಳಗೆ ಬಿಡುತ್ತಾರೆ.

ಅ) ಹೊಸ X ............................

........................................................................................

ಆ) ಪ್ರತ್ಯಕ್ಷ X ............................

........................................................................................

ಇ) ಜೋಡಿಸು X ............................

........................................................................................


ಈ) ಅಖಂಡ X ............................

........................................................................................

ಎ) ಮೃದು X ............................

........................................................................................

ಪ್ರಶ್ನೆ ೭)    ಕೆಳಗಿನ ಚಿತ್ರವನ್ನು ನೋಡಿರಿ. ಅದನ್ನು ಕುರಿತು ೧೦ ಸಾಲು ಬರೆಯಿರಿ.



..............................
..............................
..............................
..............................
..............................
..............................
..............................
..............................
..............................
..............................

ಪ್ರಶ್ನೆ ೮) ಕೆಳಗಿನ ಶಬ್ದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ

೧) ನನಗೊಂದು..................................................

೨) ಮಗುವಿಗೆ.....................................................

೩) ಮನೆಯಲ್ಲಿ.....................................................

೪) ಮಳೆಗಾಲ.......................................................

೫) ಕಣ್ದೆರೆ...........................................................

೬) ಬೆಂಬತ್ತು........................................................

ಉಪಕ್ರಮ: ಕೋಳಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ವಿವರವಾದ ಮಾಹಿತಿ ಸಂಗ್ರಹಿಸಿರಿ.

ರೇಷ್ಮೆ ಸೀರೆ ಚೆಂದ, ಕಾಶ್ಮೀರ ಸಿರಿ ಅಂದ

ಥಟ್ಟನೆ ಹೇಳಿ:

ಬೆಲ್ಲಕ್ಕೆಲ್ಲ ಹೆಚ್ಚಿನ ಬೆಲ್ಲ

ಬೇಲಿಯೊಳಗಿನ ಬೆಲ್ಲ

ಉತ್ತರ

# ೧೨ ದೇವಾನಾಂಪ್ರಿಯ



ಸುಮಾರು ಎರಡು ಸಾವಿರದ ಮುನ್ನೂರು ವರ್ಷಗಳಿಗೂ ಹಿಂದೆ ಭಾರತದ ಬಹುಭಾಗವನ್ನು ಆಳಿದ ದೊರೆ ಅಶೋಕ. ಇವನೊಬ್ಬ ಆದರ್ಶ ಚಕ್ರವರ್ತಿ ಎನಿಸಿಕೊಂಡಿದ್ದನು.

ಅಶೋಕನು ಚಂದ್ರಗುಪ್ತ ಮೌರ್ಯನ ಮೊಮ್ಮಗನು. ಇವನ ತಾಯಿ ಸುಭದ್ರಾಂಗಿ. ತಂದೆ ಬಿಂದುಸಾರ. ಶೌರ್ಯ, ಧೈರ್ಯ, ಸಾಹಸ ಮತ್ತು ದಕ್ಷತೆಗಳಲ್ಲಿ ಅಶೋಕನನ್ನು ಮೀರಿಸುವ ರಾಜಕುಮಾರರು ಯಾರೂ ಇರಲಿಲ್ಲ. ಅಶೋಕನು ಒಳ್ಳೇ ಬೇಟೆಗಾರನೂ ಆಗಿದ್ದನು. ತಂದೆ ಸಾಮ್ರಾಟ್ ಬಿಂದುಸಾರನು ಅಶೋಕನ ಶೌರ್ಯ ಮತ್ತು ಸಾಹಸಗಳನ್ನು ಮೆಚ್ಚಿ ಆವಂತಿ ರಾಜ್ಯಕ್ಕೆ ಮಂಡಲಾಧಿಪತಿಯಾಗಿ ನೇಮಿಸಿದನು.

ಉಜ್ಜಯಿನಿ ನಗರವು ಆವಂತಿ ರಾಜ್ಯದ ರಾಜಧಾನಿ. ಅಶೋಕ ಉತ್ತಮ ಆಡಳಿತ ನೀಡಿ ಹೆಸರಾದನು. ಇವನಿಗೆ ಆ ಪ್ರಾಂತಕ್ಕೆ ಸೇರಿದ ವಿದಿಶಾನಗರದ ವರ್ತಕನೊಬ್ಬನ ಮಗಳಾದ ಶಾಕ್ಯಕುಮಾರಿಯೊಂದಿಗೆ ಮದುವೆ ಮಾಡಲಾಯಿತು. ಕಾಲಕ್ರಮದಲ್ಲಿ ಅಶೋಕನಿಗೆ ಮಹೇಂದ್ರ ಮತ್ತು ಸಂಘಮಿತ್ರೆ ಎಂಬ ಇಬ್ಬರು ಮಕ್ಕಳಾದರು. ತಂದೆಯ ಮರಣದ ನಂತರ ಅಶೋಕನು ಕ್ರಿ.ಶ.ಪೂ. ೨೬೮ರಲ್ಲಿ ಮಗಧ ಸಾಮ್ರಾಜ್ಯದ ಸಾಮ್ರಾಟನಾದನು. ಪಾಟಲೀಪುತ್ರವು ಮಗಧ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಅಶೋಕನು ಸಮರ್ಥ ರೀತಿಯಿಂದ ರಾಜ್ಯದಾಡಳಿತ ನಡೆಸತೊಡಗಿದನು. ಮಂತ್ರಿಮಂಡಲ ಮತ್ತು ಅಧಿಕಾರ ವರ್ಗದವರು ಅವನಿಗೆ

ಆಧೀನರಾಗಿದ್ದರು. ಅವರು ಬಹಳ ವಿಧೇಯತೆಯಿಂದ ಕೆಲಸ ಮಾಡುತ್ತಿದ್ದರು. ಇಡೀ ಸಾಮ್ರಾಜ್ಯದಲ್ಲಿ ಶಾಂತಿ ನೆಲೆಸಿತ್ತು.

ಸಾಮಾನ್ಯವಾಗಿ ರಾಜರಿಗೆ ಸಾಮ್ರಾಜ್ಯವನ್ನು ವಿಸ್ತರಿಸುವ ಅಕಾಂಕ್ಷೆ ಇದ್ದೇ ಇರುತ್ತದೆ. ಅಶೋಕನು ಗೋದಾವರಿ ಮತ್ತು ಮಹಾನದಿಗಳ ಮಧ್ಯೆ ಇದ್ದ ಸಿರಿವಂತ ದೇಶ ಕಳಿಂಗದ ಮೇಲೆ ಯುದ್ಧ ಸಾರಿದನು. ಮಗಧದ ಸೇನೆ ಕಳಿಂಗದತ್ತ ಧಾವಿಸಿತು. ಕಳಿಂಗ ದೇಶದವರು ಸ್ವಾತಂತ್ರ್ಯ ಪ್ರಿಯರು, ಧೈರ್ಯದಿಂದ ಹೋರಾಡಿದರು. ಆದರೆ ಅಶೋಕನ ಪ್ರಚಂಡ ಸೈನ್ಯದ ಮುಂದೆ ಕಳಿಂಗದ ಸೇನೆ ತತ್ತರಿಸಿತು. ಕಳಿಂಗ ರಾಜನು ಸೋತನು. ವಿಜಯಶಾಲಿಯಾದ ಅಶೋಕನು ಗರ್ವದಿಂದ ತಲೆ ಎತ್ತಿದನು. ಒಮ್ಮೆ ರಣರಂಗದತ್ತ ಕಣ್ಣಾಡಿಸಿದನು. ದಿಗ್ಭ್ರಾಂತನಾದನು.ತನ್ನ ರಾಜ್ಯದಾಹದಿಂದ ಎಷ್ಟೊಂದು ಜನರ ಸಾವು–ನೋವುಗಳಿಗೆ ಕಾರಣನಾದೆನಲ್ಲ ಎಂದು ಮಮ್ಮಲ ಮರುಗಿದನು. ಇನ್ನು ಮುಂದೆ ಯುದ್ಧ ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿ ಶಸ್ತ್ರಗಳನ್ನು ಕೆಳಗಿಟ್ಟನು. ಕಳಿಂಗ ಯುದ್ಧದಲ್ಲಿ ನಡೆದ ಘೋರ ಹತ್ಯೆಯಿಂದ ಅಶೋಕನ ಮನ ನೊಂದಿತು. ಆ ಸಮಯದಲ್ಲಿ ಬೌದ್ಧ ಧರ್ಮದ ತತ್ವಗಳು ಅವನ ಮನಸ್ಸಿಗೆ ನೆಮ್ಮದಿಯನ್ನು ನೀಡಿದವು.

ಸಾಮ್ರಾಟ ಅಶೋಕನಿಗೆ ಬುದ್ಧನ ಉಪದೇಶಗಳಾದ ಅಹಿಂಸೆ, ದಯೆ, ಮಾನವ ಪ್ರೇಮಗಳು ಮುದನೀಡಿದವು. ಉಪಗುಪ್ತನೆಂಬ ಬೌದ್ಧ ಗುರುವಿನಿಂದ ಬೌದ್ಧ ಧರ್ಮದ ದೀಕ್ಷೆ ಪಡೆದನು. ಮಾಂಸಾಹಾರವನ್ನು ತ್ಯಜಿಸಿದನು. ಪ್ರಾಣಿಗಳ ವಧೆ ನಿಲ್ಲಿಸಿದನು. ಸ್ವತಃ ತಾನೇ ಬೇಟೆಗೆ ಹೋಗುವುದನ್ನು ಬಿಟ್ಟುಬಿಟ್ಟನು. ತನ್ನ ಪ್ರಜೆಗಳೆಲ್ಲರನ್ನು ಸತ್ಯ, ಪ್ರೇಮ, ನ್ಯಾಯಗಳಿಂದ, ಪ್ರಾಮಾಣಿಕತೆಯಿಂದ ನಡೆಯಲು ಹೇಳಿದನು.

ಪ್ರಜೆಗಳೇ, "ತಂದೆತಾಯಿಯನ್ನು ಗೌರವಿಸಿರಿ. ಗುರುಗಳನ್ನು, ಬಂಧುಬಳಗದವರನ್ನು ಆದರಿಸಿರಿ. ಪ್ರಾಣಿಹಿಂಸೆ ಮಾಡಬೇಡಿ. ಅಹಿಂಸೆ ಪಾಲಿಸಿ. ಅನ್ಯಮತಸಹಿಷ್ಣುಗಳಾಗಿರಿ" ಎಂದು ಕರೆನೀಡಿದನು.

ಸಾಮ್ರಾಟ್ ಅಶೋಕನು ಧರ್ಮಪ್ರಸಾರ ಕೈಗೊಂಡನು. ಧರ್ಮೋಪದೇಶ, ಸಮಾಜನೀತಿ, ನೈತಿಕ ಆಚರಣೆ ಮೊದಲಾದವುಗಳನ್ನು ಕುರಿತು ನಾಡು ಮತ್ತು ಹೊರನಾಡುಗಳಲ್ಲಿ ಕಲ್ಲುಬಂಡೆಗಳ ಮೇಲೆ, ಕಂಬಗಳ ಮೇಲೆ ಧರ್ಮ ಶಾಸನಗಳನ್ನು ಬರೆಯಿಸಿದನು. ಇಂತಹ ಹಲವು ಶಾಸನಗಳನ್ನು ನಾವು ಇಂದಿಗೂ ಕಾಣಬಹುದಾಗಿದೆ. ಭಾರತದಲ್ಲಿ ಉತ್ತರಪ್ರದೇಶ, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಮುಂತಾದ ರಾಜ್ಯಗಳಲ್ಲಿ ಅಶೋಕನ ಶಾಸನಗಳು ಇಂದಿಗೂ ಲಭ್ಯ ಇವೆ.

ಒಂದು ಶಾಸನ ಹೀಗೆ ಹೇಳುತ್ತದೆ: "ಎಲ್ಲರೂ ಇತರ ಮತದವರನ್ನು ಗೌರವಿಸಬೇಕು. ಆಗಲೇ ತಮ್ಮ ಮತವೂ ಬೆಳೆಯುತ್ತದೆ. ಇತರ ಮತಕ್ಕೂ ಉಪಕಾರವಾಗುತ್ತದೆ. ಎಲ್ಲ ಮತಗಳ ಸತ್ವ ಹೆಚ್ಚಬೇಕು."

ಬೌದ್ಧ ಧರ್ಮ ವಿಪತ್ತಿಗೆ ಸಿಲುಕಿದಾಗ ಅಶೋಕ ಬೌದ್ಧ ಧರ್ಮವನ್ನು ರಕ್ಷಿಸಿದನು. ಬೌದ್ಧ ಸನ್ಯಾಸಿಗಳ ಧರ್ಮ ಸಮ್ಮೇಳನವನ್ನು ಪಾಟಲೀಪುತ್ರದಲ್ಲಿ ನಡೆಸಿದನು. ಈ ಸಮ್ಮೇಳನದಿಂದ ಬೌದ್ಧ ಧರ್ಮಕ್ಕೆ ಹೊಸ ಶಕ್ತಿ ಬಂದಿತು. ಧರ್ಮ ವಿಜಯವೇ ವಿಜಯ ಎಂದು ಅಶೋಕನು ಸಾರಿದನು.

ಬೌದ್ಧ ಧರ್ಮದ ಪ್ರಸಾರಕ್ಕಾಗಿ ಸಿರಿಯ, ಈಜಿಪ್ಟ್, ಬರ್ಮಾ, ಮ್ಯಾನಮಾರ

ಕಾಶ್ಮೀರ ಮೊದಲಾದ ಕಡೆಗೆ ಬೌದ್ಧ ಮತ ಪ್ರಚಾರಕರನ್ನು ಕಳುಹಿಸಿದನು.

ತನ್ನ ಮಕ್ಕಳಾದ ಮಹೇಂದ್ರ ಮತ್ತು ಸಂಘಮಿತ್ರೆಯರನ್ನು ಶ್ರೀಲಂಕಾ ದೇಶಕ್ಕೆ ಕಳುಹಿಸಿಕೊಟ್ಟನು.

ಅಶೋಕನಿಗೆ ದೇವಾನಾಂಪ್ರಿಯ, ಪ್ರಿಯದರ್ಶಿ ಎಂದು ಬಿರುದುಗಳಿದ್ದವು. ಅಶೋಕನು ಭಾರತದ ಹಲವು ಕ್ಷೇತ್ರಗಳಿಗೆ ಭೇಟಿಕೊಟ್ಟನು. ತಾನು ಹೋದಲ್ಲೆಲ್ಲ ಯಾತ್ರೆಯ ಸವಿನೆನಪಿಗೆಂದು ಸ್ತೂಪಗಳನ್ನು ಸ್ತಂಭಗಳನ್ನು ಕಟ್ಟಿಸಿದನು. ಇಂತಹ ಸ್ಮಾರಕಸ್ತಂಭಗಳಲ್ಲಿ ವಾರಣಾಸಿ ಸಮೀಪದ ಸಾರಾನಾಥದ ಸ್ತಂಭವೂ ಒಂದು.

ನಮ್ಮ ದೇಶದ ಲಾಂಛನದಲ್ಲಿ ಈ ಸ್ತಂಭದ ಸಿಂಹಗಳ ಚಿಹ್ನೆಯನ್ನೂ ಮತ್ತು ರಾಷ್ಟ್ರಧ್ವಜದಲ್ಲಿ ಅಶೋಕಚಕ್ರದ ಗುರುತನ್ನೂ ಉಪಯೋಗಿಸಿಕೊಂಡಿದೆ. ಸಾಮ್ರಾಟ್ ಅಶೋಕನಷ್ಟು ವಿಶಾಲವಾದ ಸಾಮ್ರಾಜ್ಯವನ್ನು ಆಳಿದವರು ಭಾರತದಲ್ಲಿ ಅಪರೂಪ. ತನ್ನ ತಾತ ಚಂದ್ರಗುಪ್ತ ಮೌರ್ಯನ ಆದರ್ಶ ಆಡಳಿತವನ್ನೇ ಅಶೋಕನು ಮುಂದುವರೆಸಿಕೊಂಡು ಬಂದನು. ತನ್ನ ರಾಜ್ಯದಲ್ಲಿ ಶಿಕ್ಷಣದ ಪ್ರಸಾರಕ್ಕಾಗಿ ಅಶೋಕನು ಶ್ರಮಿಸಿದನು.

ಅಶೋಕನ ಕಾಲದಲ್ಲಿ ಸಮುದ್ರದ ಮೂಲಕ ವ್ಯಾಪಾರ ನಡೆಸಲು ಪ್ರೋತ್ಸಾಹವಿತ್ತು, ಕೃಷಿ ಉದ್ಯಮಿಗಳಿಗೆ ಅಶೋಕ ಉತ್ತೇಜನ ನೀಡುತ್ತಿದ್ದನು.

ತನ್ನ ಸಾಮ್ರಾಜ್ಯದ ಸಮಸ್ತ ಪ್ರಜೆಗಳ ಕಲ್ಯಾಣಕ್ಕಾಗಿ ಜೀವನದುದ್ದಕ್ಕೂ ಅಶೋಕನು ದೇಹವನ್ನು ಗಂಧದ ಕೊರಡಿನಂತೆ ಸವೆಸಿದನು. ಸಾಮ್ರಾಟ ಅಶೋಕ ವಿರಾಗಿಯಾಗಿದ್ದನು. ವೃದ್ಧಾಪ್ಯದಲ್ಲಿ ಜಿಗುಪ್ಸೆ ಉಂಟಾಗಿ ಮನಸ್ಸಿನ ಸಮಾಧಾನಕ್ಕಾಗಿ ತನ್ನ ಗುರುವಿನೊಡನೆ ಭಿಕ್ಷುವಿನ ವೇಷದಿಂದ ಯಾತ್ರೆ ಕೈಕೊಂಡನು. ತಕ್ಷಶಿಲೆಯಲ್ಲಿ ತನ್ನ ೭೨ನೆಯ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದನು. ಸಾಮ್ರಾಟ ಅಶೋಕನು ಗತಿಸಿ ಎರಡು ಸಾವಿರ ವರ್ಷಗಳ ಮೇಲಾದರೂ ಅವನ ಧರ್ಮ ಸಾಮ್ರಾಜ್ಯ ಇಂದಿಗೂ ನಮಗೆ ಆದರ್ಶವಾಗಿದೆ. ಭಾರತದೇಶ ಅವನಿಗೆ ಚಿರಋಣಿಯಾಗಿದೆ. ಅಶೋಕನ ಆದರ್ಶಗಳನ್ನು ಪಾಲಿಸಿಕೊಂಡು ಬರುತ್ತಿದೆ.

– ಆರ್.ಜಿ.ಡಿ.

## ಶಬ್ದಗಳ ಅರ್ಥ

ಶೌರ್ಯ – ಶೂರತನ; ವರ್ತಕ – ವ್ಯಾಪಾರಿ; ಸಮರ್ಥ – ಯೋಗ್ಯ;

ಧಾವಿಸು – ಮುನ್ನುಗ್ಗು; ಪ್ರಚಂಡ – ಭಯಂಕರ; ತತ್ತರಿಸು – ನಡುಗು;

ಚಿರಋಣಿ – ಸದಾಋಣಿ; ದಿಗ್ಭ್ರಾಂತನಾಗು – ದಿಕ್ಕುತೋಚದಂತಾಗು;

ಮುದನೀಡು – ಆನಂದನೀಡು; ವಿಹಾರ – ಬೌದ್ಧಮಂದಿರ

ಶಬ್ದಕೋಶದ ಸಹಾಯದಿಂದ ಕೆಳಗಿನ ಪದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ದೊರೆ ......................................; ದಕ್ಷತೆ ......................................;

ವಿಧೇಯುತೆ ..................................; ಜಿಗುಪ್ಸೆ ......................................

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಅಶೋಕನು ಯುದ್ಧಮಾಡುವುದಿಲ್ಲ ಎಂದು ಏಕೆ ಪ್ರತಿಜ್ಞೆ ಮಾಡಿದನು?

...................................................................................................

...................................................................................................

ಆ) ಅಶೋಕನ ಮನಸ್ಸಿಗೆ ಮುದನೀಡಿದ ಅಂಶಗಳು ಯಾವವು?

...................................................................................................

...................................................................................................

ಇ) ಅಶೋಕನು ತನ್ನ ಪ್ರಜೆಗಳಿಗೆ ಏನೆಂದು ಕರೆ ನೀಡಿದನು?

...................................................................................................

...................................................................................................

ಈ) ಬೌದ್ಧಧರ್ಮವು ವಿಪತ್ತಿಗೆ ಸಿಲುಕಿದಾಗ ಅಶೋಕನು ಏನು ಮಾಡಿದನು?

...................................................................................................

...................................................................................................

ಉ) ಅಶೋಕನು ತನ್ನ ಕೊನೆಯ ದಿನಗಳನ್ನು ಹೇಗೆ ಕಳೆದನು?

...................................................................................................

...................................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ನಾಲ್ಕು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ ..............................................................................................

ಉತ್ತರ ..............................................................................................

ಆ ..............................................................................................

ಉತ್ತರ ..............................................................................................

ಇ ..............................................................................................

ಉತ್ತರ ..............................................................................................

ಈ ..............................................................................................

ಉತ್ತರ ..............................................................................................

ಪ್ರಶ್ನೆ ೩) ಕೆಳಗೆ ಕೊಟ್ಟ ಪರ್ಯಾಯಗಳಿಂದ ಯೋಗ್ಯ ಉತ್ತರವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.

ಅ) ಅಶೋಕನು ಚಂದ್ರಗುಪ್ತಮೌರ್ಯನ ..........................................

೧) ಮಗ ೨) ಮೊಮ್ಮಗ ೩) ತಂದೆ ೪) ಸಹೋದರ

ಆ) .......................................... ಮಗಧರಾಜ್ಯದ ರಾಜಧಾನಿಯಾಗಿತ್ತು.

೧) ತಕ್ಷಶಿಲೆ ೨) ಆವಂತಿ ೩) ಪಾಟಲೀಪುತ್ರ ೪) ಕಳಿಂಗ

ಇ) ಅಶೋಕನು .......................................... ಧರ್ಮವನ್ನು ಸ್ವೀಕರಿಸಿದನು.

೧) ಕ್ರೈಸ್ತ ೨) ಹಿಂದು ೩) ಸಿಖ್ ೪) ಬೌದ್ಧ

ಈ) ಬೌದ್ಧಧರ್ಮದ ಪ್ರಸಾರಕ್ಕಾಗಿ ಮಹೇಂದ್ರ ಮತ್ತು ಸಂಘಮಿತ್ರೆಯರನ್ನು .......................................... ದೇಶಕ್ಕೆ ಕಳುಹಿಸಿದನು.

೧) ಶ್ರೀಲಂಕಾ ೨) ಈಜಿಪ್ತ ೩) ಬರ್ಮಾ ೪) ಸಿರಿಯಾ

ಉ) ನಮ್ಮ ರಾಷ್ಟ್ರಧ್ವಜದಲ್ಲಿರುವ ಗುರುತು ..........................................

೧) ಖಡ್ಗ ೨) ಚಕ್ರ ೩) ಪಂಜು ೪) ಸಿಂಹ

**ಪ್ರಶ್ನೆ ೪) ಸರಿಯಾದ ಪದವನ್ನು ಹುಡುಕಿ ಬರೆಯಿರಿ.**

ಅ) ೧) ಚ್ರಕವರ್ತಿ ೨) ಚಕರವರ್ತಿ ೩) ಚಕ್ರವರ್ತಿ ೪) ಚಕವ್ರರ್ತಿ

..........................................................................................

ಆ) ೧) ಶಾಕಕುಮಾರಿ ೨) ಶಾಕ್ಯಕುಮಾರಿ ೩) ಶಾಕ್ರಕುಮಾರಿ ೪) ಶ್ಯಾಕಕುಮಾರಿ

..........................................................................................

ಇ) ೧) ಆಂಕಷೆ ೨) ಆರೆಅಂಕ್ಷೆ ೩) ಆಕಾಂಕ್ಷೆ ೪) ಆಂಕಾಷೆ

..........................................................................................

ಈ) ೧) ಸೀರಿಯಾ ೨) ಸಿರೀಯಾ ೩) ಶಿರಿಯಾ ೪) ಸಿರಿಯಾ

..........................................................................................

ಉ) ೧) ವೃದ್ಧಾಪ್ಯ ೨) ವ್ರದ್ಧಾಪ್ಯ ೩) ವೃದಾಪ್ಯ ೪) ವದೃಪ್ಯ

..........................................................................................

**ಪ್ರಶ್ನೆ ೫) ಚಿತ್ರಗಳ ಸಹಾಯದಿಂದ ಗಾದೆಮಾತುಗಳನ್ನು ಪೂರ್ಣಗೊಳಿಸಿರಿ.**

೧) 

ತೆನೆತೆನೆ ಕೂಡಿದರೆ ರಾಶಿ

೨) 

ಸಿಹಿ ಡೊಂಕೆ

೩)



ಹಾಲು ಕಪ್ಪೇ?



೪) ಆಳಾಗಿ ದುಡಿ

**ಉಪಕ್ರಮ:**

ಇತಿಹಾಸದಲ್ಲಿ ಆಗಿಹೋದ ಪ್ರಸಿದ್ಧ ರಾಜ ರಾಣಿಯರ ಚಿತ್ರಗಳನ್ನು ಸಂಗ್ರಹಿಸಿರಿ.

**ಥಟ್ಟನೆ ಹೇಳಿ:**


ಸಾಧನೆಯೇ ವ್ಯಕ್ತಿತ್ವದ ಕೈಗನ್ನಡಿ

ಅಕ್ಷರಗಳಿದ್ದರೂ ಪುಸ್ತಕವಲ್ಲ
ಸಿಂಹವಿದ್ದರೂ ಅರಣ್ಯವಲ್ಲ
ದುಂಡಾಗಿದ್ದರೂ ಚಕ್ರವಲ್ಲ
ನಾನಾರು?
ಕಲ್ಲುಸಕ್ಕರೆ ಕೊಳ್ಳಿರೋ! ನೀವೆಲ್ಲರು

ನಾಣ್ಯ



# ೧೩ ಕಲ್ಲು ಸಕ್ಕರೆ



ಕಲ್ಲುಸಕ್ಕರೆ ಕೊಳ್ಳಿರೋ!
ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು!
ಪುಲ್ಲಲೋಚನ ಶ್ರೀ ಕೃಷ್ಣನಾಮವೆಂಬ ॥೧॥

ಎತ್ತು ಹೇರುಗಳಿಂದ ಹೊತ್ತು ಮಾರುವುದಲ್ಲ;
ಒತ್ತೊತ್ತಿ ಗೋಣಿಯೋಳ್ ತುಂಬುವುದಲ್ಲ;
ಎತ್ತ ಹೋದರು ಬಾಡಿಗೆ ಸುಂಕವಿದಕಿಲ್ಲ;
ಉತ್ತಮ ಸರಕಿದು ಅತಿಲಾಭ ಬರುವಂಥ ॥೨॥

ನಷ್ಟ ಬೀಳುವುದಲ್ಲ; ನಾತ ಹುಟ್ಟುವುದಲ್ಲ;
ಎಷ್ಟು ಒಯ್ದರು ಬೆಲೆ ರೊಕ್ಕವಿದಕ್ಕಿಲ್ಲ;
ಕಟ್ಟಿರುವೆಯು ತಿಂದು ಕಡಿಮೆಯಾಗುವುದಲ್ಲ;
ಪಟ್ಟಣದೊಳಗೆ ಪ್ರಸಿದ್ಧವಾಗಿರುವಂಥ ॥೩॥

ಸಂತೆಗೆ ಹೋಗಿ ಶ್ರಮಪಡಿಸುವುದಲ್ಲ;
ಸಂತೆಯೊಳಗೆ ಇಟ್ಟು ಮಾರುವುದಲ್ಲ;
ಸಂತತ ಭಕ್ತರ ನಾಲಗೆ ಸವಿಗೊಂಬ
ಕಾಂತ ಪುರಂದರವಿಠಲ ನಾಮವೆಂಬ ॥೪॥

– ಪುರಂದರದಾಸರು

## ಶಬ್ದಗಳ ಅರ್ಥ

ಸವಿ – ರುಚಿ, ಹೇರು – ಭಾರ, ಸುಂಕ – ತೆರಿಗೆ, ಕಾಂತ – ಸ್ವಾಮಿ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ತಿಂದರೂ ಕಡಿಮೆಯಾಗದ ಪದಾರ್ಥ ಯಾವುದು?

..........................................................................................

..........................................................................................

ಆ) ಕಲ್ಲುಸಕ್ಕರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ?

..........................................................................................

..........................................................................................

ಇ) ಕಲ್ಲುಸಕ್ಕರೆ ಕವಿತೆಯನ್ನು ಯಾರು ಬರೆದಿದ್ದಾರೆ?

..........................................................................................

..........................................................................................

ಪ್ರಶ್ನೆ ೨) ಕವಿತೆಯ ಬಿಟ್ಟಸಾಲುಗಳನ್ನು ಪೂರ್ಣಗೊಳಿಸಿರಿ.

ಸಂತೆಗೆ ಹೋಗಿ ..............................................

.................................................................

.................................................................

................................................................. ನಾಮವೆಂಬ

ಪ್ರಶ್ನೆ ೩)   ಕವಿತೆಯ ಸರಳಾನುವಾದ ಬರೆಯಿರಿ.

.................................................................

.................................................................

.................................................................

.................................................................

.................................................................

.................................................................

ಪ್ರಶ್ನೆ ೪)   ಐದು ಸಿಹಿ ಪದಾರ್ಥಗಳ ಹೆಸರು ಬರೆಯಿರಿ.

.................................................................

.................................................................

ಉಪಕ್ರಮ: ಕೆಳಗಿನ ಚಿತ್ರವನ್ನು ನೋಡಿರಿ, ಐದು ಸಾಲು ಬರೆಯಿರಿ.



........................................

........................................

........................................

........................................

........................................


ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು

ಥಟ್ಟನೆ ಹೇಳಿ:

ನೀರುಂಟು ಕೆರೆಯಲ್ಲ
ಬೆಳ್ಳಗಿದೆ ಹಾಲಲ್ಲ
ಕಪ್ಪುಗಿದೆ ಕಾಗೆಯಲ್ಲ
ರೆಕ್ಕೆಯುಂಟು ಪಕ್ಷಿಯಲ್ಲ

ಅಜ್ಜಿ

# ೧೪ ಹಂಪೆ



ಹಂಪೆ ಎಂಬ ಶಬ್ದ ಕಿವಿಗೆ ಬಿದ್ದಾಕ್ಷಣ ಕನ್ನಡಿಗನ ಮೈ ನವಿರೇಳುತ್ತದೆ. ಹಂಪೆಯ ಇತಿಹಾಸ ಮನವನ್ನು ಕದಡುತ್ತದೆ. ಇದು ಒಂದು ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ವಿಜಯನಗರದ ಅರಸರು ತಮ್ಮ ಧೈರ್ಯ ಮತ್ತು ಸಾಹಸಗಳಿಂದ ರಾಜ್ಯವನ್ನು ವಿಸ್ತರಿಸಿ, ಎಲ್ಲ ಪ್ರಜೆಗಳ ಸುಖ ಸಮೃದ್ಧಿ ಶಾಂತಿಯ ಆಡಳಿತವನ್ನು ನೀಡಿದರು. ಹಂಪೆಯ ರಾಜಬೀದಿಗಳಲ್ಲಿ ಮುತ್ತು, ರತ್ನಗಳು ರಾಶಿ ಹಾಕಿ ಮಾರಲ್ಪಡುತ್ತಿದ್ದವು. ಅಂದಿನ ಆ ವೈಭವದ ಕಾಲ ಗತಿಸಿ ಹೋದರೂ ಸಹಿತ ಹಂಪೆ ಮಾತ್ರ ಗತ ಇತಿಹಾಸದ ಕುರುಹುಗಳನ್ನು ತನ್ನೊಡಲ್ಲಿಟ್ಟುಕೊಂಡು ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳವಾಗಿ ಇಂದಿಗೂ ಗರ್ವದಿಂದ ತಲೆ ಎತ್ತಿ ನಿಂತಿದೆ.

ಹಂಪೆಯು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿದೆ. ಹಂಪೆಯಲ್ಲಿ ಭವ್ಯವಾಗಿ ಎತ್ತರವಾಗಿ ಕಂಗೊಳಿಸುವುದೇ ವಿರೂಪಾಕ್ಷ ದೇವಾಲಯದ ಗೋಪುರ. ಈ ಗೋಪುರವು ಸುಮಾರು ೧೬೫ ಅಡಿ ಎತ್ತರವಿದ್ದು, ೧೧ ಅಂತಸ್ತುಗಳಿಂದ ಕೂಡಿದೆ. ಇದಕ್ಕೆ ಬಿಷ್ಟಪ್ಪಯ್ಯನ ಗೋಪುರವೆಂದೂ ಕರೆಯುವುದು ರೂಢಿಯಲ್ಲಿದೆ. ಈ ಗೋಪುರದ ಮುಂಭಾಗದಲ್ಲಿ ಸುಮಾರು ಅರ್ಧ ಮೈಲಿನಷ್ಟು ದೀರ್ಘವಾದ ವಿಶಾಲವಾದ ರಾಜಬೀದಿಯಿದೆ.

ವಿರೂಪಾಕ್ಷ ದೇವಾಲಯದ ಬಳಿ ಹೇಮಕೂಟ ಗುಡ್ಡವಿದೆ. ಇಲ್ಲಿ ಕೆಲವು ಅಂದವಾದ ಪ್ರಾಚೀನ ಬಸದಿಗಳಿವೆ.

ಸಮೀಪದಲ್ಲಿಯೇ ಒಂದೇ ಕಲ್ಲಿನಲ್ಲಿ ಕೊರೆದ ಹದಿನಾರು ಅಡಿ ಎತ್ತರದ ಗಣೇಶನ ವಿಗ್ರಹವಿದೆ. ಇದನ್ನು ಕಡಲೇಕಾಳು ಗಣಪ ಎಂದು ಹೇಳುವರು. ಈ ಗುಡಿಯ ಹಿಂಭಾಗದಲ್ಲಿ ಎಂಟು ಅಡಿ ಎತ್ತರದ ಸಾಸಿವೆಕಾಳು ಗಣಪನ ಆಲಯವಿದೆ. ಇಲ್ಲಿ ನಾವು ಸೂಕ್ಷ್ಮ ಕೆತ್ತನೆಯ ಶಿಲ್ಪಕಲೆಯನ್ನು ಕಾಣಬಹುದು.

ವಿರೂಪಾಕ್ಷ ದೇವಾಲಯದ ಮುಂದಿನ ರಾಜಬೀದಿಯ ಆಚೆ ಸ್ವಲ್ಪ ದೂರದಲ್ಲಿ ಮಾತಂಗ ಪರ್ವತವಿದೆ. ಮೇಲೇರಿ ಹೋದರೆ ಸುತ್ತಲೂ ವಿಸ್ತಾರವಾಗಿ ಹಬ್ಬಿದ ಹಂಪೆಯ ಸಮಗ್ರ ದೃಶ್ಯವು ಕಾಣಿಸುತ್ತದೆ. ಪಶ್ಚಿಮ ದಿಕ್ಕಿನಲ್ಲಿ ಪಂಪಾವತಿ ದೇವಾಲಯದ ಮಹಾದ್ವಾರ, ರಥಬೀದಿ, ಹೇಮಕೂಟ ಪರ್ವತ. ಉತ್ತರಕ್ಕೆ ತುಂಗಭದ್ರಾ ನದಿ, ಪೂರ್ವದಿಕ್ಕಿಗೆ ಅಚ್ಯುತರಾಮನ ಗುಡಿ ಇವೆ. ದಕ್ಷಿಣ ಭಾಗಕ್ಕೆ ತಿರುಗಿದರೆ ಗಜಶಾಲೆ, ಅರಮನೆ, ಇವು ನೋಡಲು ಅತೀ ರಮ್ಯವಾಗಿವೆ. ಇಲ್ಲಿಂದ ಸೂರ್ಯೋದಯ ಮತ್ತು ಸೂರ್ಯಾಸ್ತ ನೋಡಲು ಬಲು ಸೊಗಸು. ಈ ದೃಶ್ಯ ನೋಡಲು ಜನರ ಗುಂಪುಗಳು ಕಂಡುಬರುತ್ತವೆ.

ಬೆಟ್ಟವನ್ನು ಇಳಿದು ರಾಜಬೀದಿಯಿಂದ ಎಡಗಡೆ ತಿರುಗಿ ಕಾಲುದಾರಿಯಿಂದ ಸಾಗಿದರೆ ಚಕ್ರತೀರ್ಥವು ಕಂಡುಬರುತ್ತದೆ. ಪೂರ್ವ ದಿಕ್ಕಿಗೆ ಹರಿಯುವ ತುಂಗಭದ್ರೆಯ ಪ್ರವಾಹವು ಉತ್ತರಕ್ಕೆ ಹೊರಳಿ ಗುಡ್ಡಗಳ ನಡುವೆ ತಿರುತಿರುಗಿ ಆಳವಾದ ಮಡುವು ಆಗಿದೆ. ಈ ಮಡುವೇ ಚಕ್ರತೀರ್ಥ ಇಲ್ಲಿ ನೂರಾರು ಅಲೆಗಳು ಚಕ್ರಾಕಾರವಾಗಿ ತಿರುಗುತ್ತಿರುವ ದೃಶ್ಯವು ಮನೋಹರವಾದುದು.

ಅಲ್ಲಿಂದ ದಕ್ಷಿಣಕ್ಕೆ ಮುಕ್ಕಾಲು ಮೈಲು ಅಂತರದಲ್ಲಿ ಅಚ್ಯುತರಾಯನ ಗುಡಿಯಿದೆ. ಗುಡಿಯ ಕಂಬಗಳ ಮೇಲೆ ಕೃಷ್ಣನ ಲೀಲೆಗಳನ್ನು ಕೆತ್ತಿರುವರು. ಈ ಗುಡಿಯ ಹತ್ತಿರ ದಾರಿಯುದ್ದಕ್ಕೂ ಸಾಲು ಮಂಟಪಗಳಿವೆ. ಅವುಗಳಲ್ಲಿಯ ಪುರಂದರದಾಸರ ಮಂಟಪ ಬಹಳ ಅಂದವಾಗಿದೆ. ಇಲ್ಲಿ ಪುರಂದರದಾಸರು ಸ್ನಾನ ಜಪತಪ ಮಾಡುತ್ತಿದ್ದರಂತೆ. ತದನಂತರ ತುಲಾಭಾರ ಮಂಟಪ ನೋಡಬಹುದು. ಇದು ಎತ್ತರವಾಗಿದೆ. ಅಂದಿನ ಕಾಲದಲ್ಲಿ ರಾಜನು ತಕ್ಕಡಿಯಲ್ಲಿ ತನ್ನ ತೂಕದ ಚಿನ್ನವನ್ನು ತೂಗಿಸಿ ಅದನ್ನು ದಾನ ಮಾಡುತ್ತಿದ್ದನಂತೆ.

ವಾಸ್ತು ಶ್ರೇಷ್ಠತೆಗೆ ಹಂಪೆಯಲ್ಲಿ ಮೂರು ದೇವಾಲಯಗಳು ಇವೆ. ಮೊದಲನೆಯದು ವಿಜಯವಿಠಲನ ಮಂದಿರವಿದೆ. ಇದನ್ನು ಕೃಷ್ಣದೇವರಾಯನು ಕಟ್ಟಿಸಿದನು. ಈ ದೇವಾಲಯದ ಎದುರಿಗೆ ಜಗದ್ವಿಖ್ಯಾತ ಕಲ್ಲಿನ ರಥವಿದೆ. ಇದನ್ನು ಒರಟು ಬೆಣಚು ಕಲ್ಲಿನಿಂದ ನಿರ್ಮಿಸಲಾಗಿದೆ. ಈ ಕಲ್ಲಿನ ರಥದಲ್ಲಿ ಸೈನಿಕರ, ಬೇಟೆಗಾರರ, ಪೋರ್ತುಗೀಜರ, ಅರಬರ, ಪರ್ಶಿಯನ್ನರ ಮುಂತಾದವರ ಹಲವಾರು ಚಿತ್ರಗಳನ್ನು ಬಿಡಿಸಲಾಗಿದೆ. ವಿಠ್ಠಲ ದೇವಾಲಯದ ರಂಗಮಂಟಪದ ದಕ್ಷಿಣಭಾಗದಲ್ಲಿ ಒಂದು ಸುಂದರವಾದ ಕಲ್ಯಾಣ ಮಂಟಪವಿದೆ. ಇದಕ್ಕೆ 'ನೂರು ಕಾಲು ಮಂಟಪ'ವೆಂದು ಕರೆಯುತ್ತಾರೆ.

ಹೇಮಕೂಟದಿಂದ ಮುಂದುವರೆದರೆ ಶ್ರೀಕೃಷ್ಣನ ದೇವಾಲಯ ಇದೆ. ಇದರ ಎದುರಿನಲ್ಲಿ ಉಗ್ರನರಸಿಂಹನ ಗುಡಿ ಇದೆ. ಒಂದೇ ಕಲ್ಲಿನಲ್ಲಿ ತಯಾರಿಸಿದ 22 ಅಡಿ ಎತ್ತರದ ಭವ್ಯ ನರಸಿಂಹ ವಿಗ್ರಹ ಇದೆ. ಇದರ ಪಕ್ಕದಲ್ಲಿ ಹದಿನಾರು ಅಡಿ ಎತ್ತರದ ಬೃಹತ್ ಲಿಂಗವಿರುವ ಶಿವಾಲಯವಿದೆ. ಇದಕ್ಕೆ 'ಬಡವಿಲಿಂಗ' ಎನ್ನುವರು.

ಪ್ರಸನ್ನ ವಿರೂಪಾಕ್ಷ ದೇವಾಲಯದ ಎಡಭಾಗಕ್ಕೆ ಅಂದರೆ ದಣ್ಣನಾಯಕನ ಕೋಟೆಯಿದೆ. ಹಂಪೆಯ ಇತಿಹಾಸದಲ್ಲಿ ಎರಡನೆಯ ಶ್ರೇಷ್ಠ ದೇವಾಲಯವೆಂದರೆ ಹಜಾರರಾಮನ ದೇವಾಲಯ. ಇಲ್ಲಿ ರಾಜನ ಮನೆತನದವರು ಪೂಜೆ ಸಲ್ಲಿಸುತ್ತಿರುವ ನಂಬಿಕೆಯಿದೆ. ಅನೇಕ ಹಿಂದು ದೇವತೆಗಳ ವಿಗ್ರಹಗಳು ವೈಷ್ಣವ ದೇವರ ಶಿಲ್ಪಿಗಳ ಹನುಮಂತನ ಶಿಲ್ಪ ಜಾಂಬವತಿ ವೇಣುಗೋಪಾಲ ಕೈಯಲ್ಲಿ ಹಾರ ಹಿಡಿದಿರುವ ಶಿಲ್ಪ ಮುಂತಾದ ಅನೇಕ ಕೆತ್ತನೆಯ ಶಿಲ್ಪಗಳು ಮೂಡಿಬಂದಿವೆ. ಹಜಾರರಾಮನ ಗುಡಿಯಿಂದ ಸ್ವಲ್ಪ ದೂರದಲ್ಲಿ ಅಂತಃಪುರದ ಆವರಣವಿದೆ. ಇದು ರಾಜಪರಿವಾರದ ರಾಣಿಯರಿಗೆ, ಮಹಿಳೆಯರಿಗೆ ಪ್ರತ್ಯೇಕವಾಗಿ ನಿರ್ಮಿತವಾದ ನಿವಾಸಗಳಿಂದ ಕೂಡಿದೆ.

ಮಹಾನವಮಿಯ ದಿಬ್ಬವು ಎತ್ತರದ ಮೇಲಿದೆ. ದಸರೆಯ ದಿಬ್ಬ, ಸಿಂಹಾಸನ ಪೀಠವೆಂದೂ ಇದನ್ನು ಕರೆಯುತ್ತಾರೆ. ವಿಜಯನಗರದ ಅರಸರ ಕಾಲದಲ್ಲಿ ಹತ್ತು ದಿನಗಳವರೆಗೆ ಅನೇಕ ಸಮಾರಂಭಗಳು ವಿಜೃಂಭಣೆಯಿಂದ ಇಲ್ಲಿ ನಡೆಯುತ್ತಿದ್ದವು. ಕೃಷ್ಣದೇವರಾಯರು ಕಳಿಂಗ ರಾಜನ ಮೇಲೆ ದಂಡಯಾತ್ರೆ ಮಾಡಿ ವಿಜಯ ಸಂಪಾದಿಸಿದರು. ಆಗ ಇದೇ ಸ್ಥಳದಲ್ಲಿ ವಿಜಯೋತ್ಸಾಹ ಆಚರಿಸಿದರು ಎಂದು ಹೇಳುತ್ತಾರೆ.

ಇಂದಿಗೂ ಸಹ ಹಂಪಿಯು ಭಾರತೀಯರಲ್ಲಿ ಸ್ವಾಭಿಮಾನ, ಸ್ವಧರ್ಮದಲ್ಲಿ ಪ್ರೀತಿ, ಸಂಸ್ಕೃತಿಯಲ್ಲಿ ವಿಶ್ವಾಸ ಮತ್ತು ಸ್ವಾತಂತ್ರ್ಯದಲ್ಲಿ ನಿಷ್ಠೆ ಮುಂತಾದವುಗಳನ್ನು ತುಂಬುತ್ತದೆ. ಈ ಜ್ಯೋತಿ ಅವರ ಅಂತಃಕರಣದಲ್ಲಿ ಸದಾ ಪ್ರಕಾಶಮಾನವಾಗಿರಲಿ. ನಿತ್ಯ ಚೈತನ್ಯಪ್ರದವಾಗಿ ಸ್ಫೂರ್ತಿಯ ತೇಜಸ್ಸನ್ನು ಬೀರುತ್ತ ಬೆಳಗುತ್ತಲೇ ಇರಲಿ.

## ಶಬ್ದಗಳ ಅರ್ಥ

ಗತಿಸಿಹೋಗು – ಆಗಿಹೋಗು, ಜಗದ್ವಿಖ್ಯಾತ – ಜಗತ್‌ಪ್ರಸಿದ್ಧ,

ಬೃಹತ್ – ದೊಡ್ಡದಾದ

ಶಬ್ದ ಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಕುರುಹು ................................; ಸಮಗ್ರ ................................;

ಗಜ ......................................; ರಮ್ಯ ..................................;

ಮನೋಹರ ...........................; ಚೈತನ್ಯ ................................

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಬಿಷ್ಟಪ್ಪಯ್ಯನ ಗೋಪುರವೆಂದು ಯಾವುದಕ್ಕೆ ಕರೆಯುವರು?

........................................................................................

ಆ) ಗಣೇಶ ಹಾಗೂ ಜೈನ ಮಂದಿರಗಳು ಯಾವ ಗುಡ್ಡದಲ್ಲಿವೆ?

........................................................................................

ಇ) ಹಂಪೆಯು ಎಲ್ಲಿದೆ?

........................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಮೂರು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ........................................................................................

ಉತ್ತರ ........................................................................................

ಆ) ........................................................................................

ಉತ್ತರ ........................................................................................

ಇ) ........................................................................................

ಉತ್ತರ ........................................................................................

ಪ್ರಶ್ನೆ ೩) ಕೆಳಗಿನ ಪ್ರಶ್ನೆಗಳಿಗೆ ೩-೪ ಸಾಲುಗಳಲ್ಲಿ ಉತ್ತರ ಬರೆಯಿರಿ.

ಅ) ವಿರೂಪಾಕ್ಷ ದೇವಾಲಯದ ಕುರಿತು ಬರೆಯಿರಿ.

ಉತ್ತರ ........................................................................................

........................................................................................

ಆ) ತುಂಗಭದ್ರ ನದೀತೀರದ ಮೇಲೆ ಯಾವ ಯಾವ ಗುಡಿಗಳಿವೆ?

ಉತ್ತರ ........................................................................................

........................................................................................

ಇ)   ಬಡವಿಲಿಂಗದ ಬಗ್ಗೆ ಬರೆಯಿರಿ.

ಉತ್ತರ ..........................................................................................

..........................................................................................

**ಪ್ರಶ್ನೆ ಳ)   ಯೋಚಿಸಿ ಈ ಕೆಳಗಿನ ವಿಧಾನಗಳನ್ನು ಪೂರ್ಣಗೊಳಿಸಿರಿ.**

ಅ)   ಹಂಪೆಯಲ್ಲಿಯ ಸೂರ್ಯೋದಯ ಮತ್ತು ಸೂರ್ಯಾಸ್ತ – ನೋಡಲು ಬಲು ಸೊಗಸು – ಇದರಂತೆ ಇಂತಹ ಕರ್ನಾಟಕದ ಇನ್ನಿತರ ಸ್ಥಳಗಳು ............................................................

ಆ)   ವಾಸ್ತುಶಿಲ್ಪದ ಶ್ರೇಷ್ಟತೆಗೆ ಹಂಪಿಯಲ್ಲಿ ವಿಜಯವಿಠಲನ ಮಂದಿರವಿದೆ. ಇದರಂತೆ ಕರ್ನಾಟಕದ ಇನ್ನಿತರ ಪ್ರಸಿದ್ಧ ವಾಸ್ತುಶಿಲ್ಪದ ದೇವಾಲಯಗಳು ............................................................

ಇ)   ಜೈನಧರ್ಮದ ಮಂದಿರಗಳಿಗೆ 'ಬಸದಿ' ಎಂದು ಕರೆಯುತ್ತಾರೆ. ಅದರಂತೆ ಇನ್ನಿತರ ಧರ್ಮದ ಮಂದಿರಗಳಿಗೆ ............................................

**ಉಪಕ್ರಮ:**

ಐತಿಹಾಸಿಕ ಸ್ಥಳಗಳಾದ ಐಹೊಳೆ, ಪಟ್ಟದಕಲ್ಲು, ಬೇಲೂರು, ಹಳೇಬೀಡುಗಳಿಗೆ ಭೇಟಿ ನೀಡಿ ಚಿತ್ರಗಳನ್ನು ಸಂಗ್ರಹಿಸಿರಿ.

**ದೇಶ ಸುತ್ತು ಇಲ್ಲವೆ ಕೋಶ ಓದು**

**ಥಟ್ಟನೆ ಹೇಳಿ:**

ಹಸಿರು ಗಿಡದ ಮೇಲೆ
ಮೊಸರು ಚಲ್ಲಿದೆ

ಮಲ್ಲಿಗೆ


ವ್ಯಾಕರಣ

ವಿಭಕ್ತಿ ಪ್ರತ್ಯಯಗಳು

ನಾಮ ಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆ ಬೇರೆ ಅರ್ಥವನ್ನು ಉಂಟುಮಾಡುವ ಪ್ರತ್ಯಯಗಳಿಗೆ "ವಿಭಕ್ತಿ ಪ್ರತ್ಯಯ" ಎಂದು ಹೆಸರು.

ವಿಭಕ್ತಿ ಪ್ರತ್ಯಯಗಳಲ್ಲಿ ಒಟ್ಟು 8 ಪ್ರಕಾರಗಳಿದ್ದು ಅವುಗಳ ಪ್ರತ್ಯಯ ಹಾಗೂ ಉದಾಹರಣಗಳು ಈ ಕೆಳಗಿನಂತಿವೆ.

| | | | |
|---|---|---|---|
| ೧ | ಪ್ರಥಮಾ | ಉ | ರಾಜನು |
| ೨ | ದ್ವಿತಿಯಾ | ಅನ್ನು | ರಾಜನನ್ನು |
| ೩ | ತೃತಿಯಾ | ಇಂದ | ರಾಜನಿಂದ |
| ೪ | ಚತುರ್ಥಿ | ಗೆ, ಇಗೆ, ಕ್ಕೆ | ರಾಜನಿಗೆ |
| ೫ | ಪಂಚಮಿ | ದೆಸೆಯಿಂದ | ರಾಜನ ದೆಸೆಯಿಂದ |
| ೬ | ಷಷ್ಠಿ | ಅ | ರಾಜನ |
| ೭ | ಸಪ್ತಮಿ | ಅಲ್ಲಿ | ರಾಜನಲ್ಲಿ |
| ೮ | ಸಂಬೋಧನೆ | ಏ, ಇರಾ | ರಾಜನೇ |



# ೧೫ ಶಿವರಾಮ ಕಾರಂತರು



ಕನ್ನಡ ಸಾಹಿತ್ಯ ಲೋಕದ ವಿಸ್ಮಯ ಎಂದು ವರ್ಣಿಸಿರುವ ಕೋಟ ಶಿವರಾಮಕಾರಂತರದು ಒಂದು ಅಸದೃಶ ಪ್ರತಿಭೆ. ಅವರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅಂದರೆ ಈಗಿನ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೋಟ ಗ್ರಾಮದಲ್ಲಿ ೧೯೦೨ರ ಅಕ್ಟೋಬರ್ ೧೦ ರಂದು ಜನಿಸಿದರು. ತಂದೆ ಶೇಷ ಕಾರಂತರು, ತಾಯಿ ಲಕ್ಷ್ಮೀ. ಬಾಲ್ಯದಲ್ಲಿ ಕಾರಂತರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದು ಇವರ ತಾಯಿ, ಅಜ್ಜಿ ಮತ್ತು ಹುಟ್ಟಿದ ಕೋಟ ಗ್ರಾಮದ ಸುಂದರ ಪರಿಸರ.

ಕಾರಂತರ ಬಾಲ್ಯದ ವಿದ್ಯಾಭ್ಯಾಸ ಕೋಟದಲ್ಲಿ ನಡೆಯಿತು. ಆಗಿನ ಕಾಲದಲ್ಲಿ ರೂಢಿಯಲ್ಲಿದ್ದ ಐಗಳ ಬಳಿ ಶಿಕ್ಷಣ ಪಡೆಯುವ ಪದ್ಧತಿಯನ್ನು ಅನುಸರಿಸದೇ, ಕಾರಂತರು ಸರಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಪ್ರೌಢಶಿಕ್ಷಣಕ್ಕೆ ಕುಂದಾಪುರದ ಶಾಲೆಗೆ ಸೇರಿದರು. ಕಾರಂತರಿಗೆ ಮೊದಲಿನಿಂದಲೂ ಪಾಠಗಳನ್ನು ಓದುವುದು, ಕಂಠಪಾಠ ಮಾಡುವುದೆಂದರೆ ಅಷ್ಟಕಷ್ಟೆ. ಆಗಿನ ಕಾಲದಲ್ಲಿ ಒಂದಾಣೆ ಬೆಲೆಗೆ ದೊರೆಯುತ್ತಿದ್ದ 'ಬುಕ್ ಫಾರ್ ದಿ ಬ್ರೇನ್' ಮಾಲಿಕೆಯನ್ನು, ಹಲವಾರು ಆಂಗ್ಲ ಕಥೆಗಳನ್ನು ಅವರು ಓದುತ್ತಿದ್ದರು. ಕಾರಂತರ ಮನೆಯಲ್ಲಿ ನಿತ್ಯವೂ ಭಾಗವತ ವಾಚನ ನಡೆಯುತ್ತಿತ್ತು. ಅವರ ಕಥೆಗಳನ್ನು ಕೇಳುವಲ್ಲಿ ಕಾರಂತರು ಅಪಾರ ಕುತೂಹಲ ತೋರುತ್ತಿದ್ದರು. ಯಕ್ಷಗಾನ, ಬಯಲಾಟಗಳು ಅವರಿಗೆ ಬಾಲ್ಯದಲ್ಲಿ ಪ್ರಿಯವಾಗಿದ್ದವು. ಕುಂದಾಪುರದಲ್ಲಿ ಪ್ರೌಢಶಿಕ್ಷಣ ಮುಗಿಸಿದ ನಂತರ ಕಾರಂತರು ಕಾಲೇಜು ಶಿಕ್ಷಣಕ್ಕಾಗಿ ಮಂಗಳೂರಿನ ಸರಕಾರಿ ಶಾಲೆಯನ್ನು

ಸೇರಿದರು. ಕಾಲೇಜಿನ ವಾಚನಾಲಯುದಲ್ಲಿ ಕಾರಂತರು ಹಲವು ಆಂಗ್ಲ ಪುಸ್ತಕಗಳನ್ನೂ, ದೇಶ ಧರ್ಮ ಕುರಿತಾದ ಪುಸ್ತಕಗಳನ್ನು ಓದಿದರು. ರವೀಂದ್ರನಾಥ್ ಟಾಗೂರರ ಬಹಳಷ್ಟು ಪುಸ್ತಕಗಳನ್ನು ಕಾರಂತರು ಓದಿ ಮುಗಿಸಿದರು. ಇವುಗಳ ಪ್ರಭಾವದಿಂದ ಕಾಲೇಜಿನ ಶಿಕ್ಷಣ ಅಷ್ಟೊಂದು ರುಚಿಸಲಿಲ್ಲ. ೧೯೨೧ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಯ ಸಂದೇಶ ಸಾರಲು ಮಂಗಳೂರಿಗೆ ಭೇಟಿ ನೀಡಿದರು. ಅವರ ಸಂದೇಶದ ಪ್ರಭಾವದಿಂದ ಕಾರಂತರು ಕಾಲೇಜಿಗೆ ಶರಣು ಹೊಡೆದು ಅಸಹಕಾರ ಚಳುವಳಿಗೆ ಧುಮುಕಿದರು.

ಮನೆ–ಮಾರು ತೊರೆದು, ಆದರ್ಶ ಕನಸುಗಳನ್ನು ಹೊತ್ತ ಯುವಕ ಕಾರಂತರು ಗಾಂಧೀಜಿಯವರ ವಿಚಾರಧಾರೆಗಳ ಪ್ರಚಾರ ನಡೆಸಿದರು. ಖಾದಿ, ಹಾಗೂ ಸ್ವದೇಶಿ ವಸ್ತುಗಳ ಮಾರಾಟ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ ಮುಂತಾದ ರಚನಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಇಂಥ ಹೋರಾಟದ ಹಾದಿಯಲ್ಲಿ ಅವರ ಬದುಕು ಅರಳತೊಡಗಿತು.

೧೯೨೪ ರಲ್ಲಿ ಕಾರಂತರು ತಮ್ಮ ಸಂಪಾದಕತ್ವದಲ್ಲಿ 'ವಸಂತ' ಎಂಬ ಮಾಸಪತ್ರಿಕೆಯನ್ನು ಆರಂಭಿಸಿದರು. ಅನೇಕ ಲೇಖನಗಳನ್ನು ಬರೆದರು. ಭೂತ, ವಿಚಿತ್ರಕೂಟ ಎಂಬ ಎರಡು ಪತ್ತೆದಾರಿ ಕಾದಂಬರಿಗಳು 'ನಿರ್ಭಾಗ್ಯ ಜನ್ಮ' ಎಂಬ ಸಾಮಾಜಿಕ ಕಾದಂಬರಿಯನ್ನು ಈ ಮಾಸಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಪತ್ರಿಕೆಯು ಗುಣಮಟ್ಟ ಕಾಯ್ದುಕೊಂಡಿದ್ದರೂ ಓದುಗರು ಅದರ ಬೆಂಬಲಕ್ಕೆ ನಿಲ್ಲದ ಕಾರಣ, ಮತ್ತು ಆರ್ಥಿಕ ಸಂಕಷ್ಟಗಳಿಗೆ ಬಲಿಯಾಗಿ ನಿಂತುಹೋಯಿತು. ಕಾರಂತರ ಈ ಪತ್ರಿಕಾ ವ್ಯವಸಾಯ ಯಶಸ್ವಿಯಾಗದಿದ್ದರೂ ಅವರನ್ನು ಒಬ್ಬ ಲೇಖಕನನ್ನಾಗಿ ಬೆಳೆಸಲು ಅದು ಅಪಾರ ಸಹಾಯ ಮಾಡಿತು.

೧೯೩೬ ರಲ್ಲಿ ಕಾರಂತರು ಲೀಲಾ ಅವರನ್ನು ವಿವಾಹವಾದರು. ಎರಡು ಗಂಡು ಮತ್ತು ಎರಡು ಹೆಣ್ಣು ಮಕ್ಕಳ ತಂದೆಯಾದರು. ಬದುಕಿನೊಂದಿಗಿನ ಹೋರಾಟ ಮತ್ತು ಸತತವಾದ ಸಾಹಿತ್ಯರಚನೆಯ ಹವ್ಯಾಸಗಳನ್ನು ಮುಂದುವರೆಸಿಕೊಂಡು ಹೋದರು.

ಕಾರಂತರಿಗೆ ರಂಗಭೂಮಿ, ನಾಟಕ ಮತ್ತು ನೃತ್ಯಗಳ ಮೇಲೆ ಆಸಕ್ತಿ ಇದ್ದಂತಯೇ ಯಕ್ಷಗಾನದ ಮೇಲೂ ಅಪಾರವಾದ ಆಸಕ್ತಿ ಹಾಗೂ ಪ್ರೀತಿ ಇತ್ತು. ೧೯೭೦ ರಲ್ಲಿ ಯಕ್ಷಗಾನದ ಸಾಂಪ್ರದಾಯಿಕ ಶಿಕ್ಷಣ ನೀಡುವ ಶಾಲೆಯೊಂದನ್ನು ಬ್ರಹ್ಮಾವರದಲ್ಲಿ ಆರಂಭಿಸಿದರು.

"ಹಕ್ಕಿಯಂತೆ – ರೆಕ್ಕೆ ಇದ್ದರೆ
ಪಕ್ಕ ಬಿಡಿಸಿ ಹಾರುತ್ತಿದ್ದೆ
ಬಿಳಿಯ ಮೋಡ ಏರುತ್ತಿದ್ದೆ
ಬೆಳ್ಳಿ ತಾರೆ ಸೇರುತ್ತಿದ್ದೆ"

ಎಂದು ಮಿಡಿಯುತ್ತಿದ್ದ ಮಕ್ಕಳ ಜಗತ್ತಿನ ಮಾಂತ್ರಿಕ ಶಿವರಾಮ ಕಾರಂತರ ಮಕ್ಕಳಿಗಾಗಿ ಶ್ರಮಿಸಿದರು. ಅವರು ಮಕ್ಕಳಿಗಾಗಿ ಬರೆದ "ಬಾಲ ಪ್ರಪಂಚ", "ವಿಜ್ಞಾನ ಪ್ರಪಂಚಗಳು", "ಅದ್ಭುತ ಜಗತ್ತು" ಮುಂತಾದ "ವಿಶ್ವಕೋಶಗಳು" ಕನ್ನಡದ ಗರ್ಭಗುಡಿಯಲ್ಲಿ ತಮ್ಮದೇ ಆದ ಶೋಭೆಯಿಂದ ಕಂಗೊಳಿಸುತ್ತಿತ್ತು. ಇದಲ್ಲದೆ "ಮಗನ ಮದುವೆ" ನಾಟಕ, "ಢಂ ಢಂ ಡೋಲು" ಶಿಶುಗೀತೆಗಳು,'ಹುಲಿರಾಯ' ಚಿಕ್ಕ ಚಿಕ್ಕ ಪ್ರಬಂಧಗಳು, 'ಒಂದೇ ರಾತ್ರಿ–

ಒಂದೇ ಹಗಲು’ ಭೌಗೋಳಿಕ ಪ್ರಬಂಧ ಮುಂತಾದ ‘ಕೃತಿಗಳನ್ನು ರಚಿಸಿ ಮಕ್ಕಳ ಓದುವ ಅಭಿರುಚಿಯನ್ನು ಬೆಳೆಸಿದರು. ಕಾರಂತರು ೧೯೩೪ರಲ್ಲಿ ಪುತ್ತೂರಿನಲ್ಲಿ ಪ್ರಾರಂಭಿಸಿದ ‘ಬಾಲವನ’ ಒಂದು ಮಾದರಿ ಶಾಲೆಯಾಗಿತ್ತು. ಈ ಶಾಲೆಯಲ್ಲಿ ನಾಟಕದ ಮೂಲಕವೇ ಪಾಠ ಕಲಿಸುವ ಪ್ರಯತ್ನವನ್ನು ಕಾರಂತರು ನಡೆಸಿದ್ದರು. ಕಡಲು, ನದಿ, ಬೆಟ್ಟ-ಗುಡ್ಡ ಮುಂತಾದ ಪ್ರಕೃತಿಯ ನಿತ್ಯನೂತನ ಮಡಿಲಿಗೆ ಮಕ್ಕಳನ್ನು ಕರೆದೊಯ್ದು ಅವರಿಗೆ ನಿಸರ್ಗದ ಮಹತ್ವದ ಬಗ್ಗೆ ಅರಿವು ಮೂಡಿಸಿದರು; ನಿಸರ್ಗ ಪ್ರೇಮ ಬೆಳೆಯುವಂತೆ ಮಾಡಿದರು. ಹೀಗೆ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದರು.

ಪರಿಸರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಶಿವರಾಮಕಾರಂತರು ೧೬ ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿಯ ಏಳು ಕೃತಿಗಳು ಇತರ ಭಾಷೆಗೆ ಅನುವಾದಗೊಂಡಿವೆ. ೮೦ರ ದಶಕದಲ್ಲಿ, ಜಗತ್ತಿನಾದ್ಯಂತ ಪರಿಸರಪ್ರೇಮ ವ್ಯಕ್ತಗೊಳ್ಳುವ, ಜಾಗೃತಿ ಮಾಡುವ ಕಾರ್ಯ ಪ್ರಾರಂಭಗೊಂಡಿತು. ಆದರೆ ದಶಕಗಳಷ್ಟು ಮೊದಲೇ ಕಾರಂತರು ತಮ್ಮ ಕೃತಿಗಳಲ್ಲಿ, ಭಾಷಣಗಳಲ್ಲಿ ಅರಿವು ಮೂಡಿಸುತ್ತ ಕಾಡುಪ್ರಾಣಿಗಳ ಸಂತತಿಯನ್ನು ಅಳಿವಿನಂಚಿನಿಂದ ಪಾರು ಮಾಡುವ ಬಗ್ಗೆ ತಿಳಿವಳಿಕೆ ಮೂಡಿಸಿದರು.

೧೯೭೮ರಲ್ಲಿ ತಮ್ಮ ‘ಮೂಕಜ್ಜಿಯ ಕನಸುಗಳು’ ಕಾದಂಬರಿಗಾಗಿ ಕಾರಂತರು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದರು. ಹಲವಾರು ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್, ಪಂಪಪ್ರಶಸ್ತಿ ರಾಜ್ಯ, ಕೇಂದ್ರ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ ಹಾಗೂ ಗೌರವಗಳನ್ನು ಪಡೆದರು. ಯಕ್ಷಗಾನದ ಚಟುವಟಿಕೆಗಳಿಗಾಗಿ ಮಧ್ಯಪ್ರದೇಶ ಇಟ್ಟ ಸರ್ಕಾರದ ‘ತುಲಸಿ ಸನ್ಮಾನ’ ಪ್ರಶಸ್ತಿ ಕೂಡ ಅವರನ್ನು ಅರಸಿಕೊಂಡು ಬಂದಿದೆ. ೧೯೯೭ ಶಿವರಾಮ ಕಾರಂತರು ನಿಧನರಾದರು.

## ಶಬ್ದಗಳ ಅರ್ಥ

ವಿಸ್ಮಯ – ಆಶ್ಚರ್ಯ; ಪ್ರತಿಭೆ – ವಿಶೇಷ ಜ್ಞಾನ;

ಅಪಾರ – ಬಹಳಷ್ಟು; ಉತ್ಕಟ – ಬಲವಾದ

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಕಂಗೊಳಿಸು ..................................; ಅನುಕಂಪ ..................................;

ನಿಗೂಢ ........................................

ಪ್ರಶ್ನೆ೧ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಶಿವರಾಮ ಕಾರಂತರು ಯಾವಾಗ ಜನಿಸಿದರು?

..........................................................................................

ಆ) ಶಿವರಾಮ ಕಾರಂತರ ಪ್ರಾಥಮಿಕ ವಿದ್ಯಾಭ್ಯಾಸ ಎಲ್ಲಿ ನಡೆಯಿತು?

..........................................................................................

ಇ) ಶಿವರಾಮ ಕಾರಂತರು ಯಾವ ಪತ್ರಿಕೆಯನ್ನು ಆರಂಭಿಸಿದರು?

..........................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಪ್ರಶ್ನೆ ಅ) ..........................................................................................

ಉತ್ತರ ..........................................................................................

..........................................................................................

ಆ) ..........................................................................................

ಉತ್ತರ ..........................................................................................

..........................................................................................

ಪ್ರಶ್ನೆ ೩) ಹೊಂದಿಸಿ ಬರೆದು ವಾಕ್ಯ ರಚನೆ ಮಾಡಿರಿ.

ಉದಾಹರಣೆ–ಕೋಟ ಇದು ಕಾರಂತರ ಜನ್ಮ ಸ್ಥಳವಾಗಿದೆ

| "ಅ" ಗುಂಪು | "ಬ" ಗುಂಪು |
|---|---|
| ಅ) ಕೋಟ | ಅ) ಮಾದರಿ ಶಾಲೆ |
| ಆ) ವಸಂತ | ಆ) ಮೂಕಜ್ಜಿಯ ಕನಸುಗಳು |
| ಇ) ಬಾಲವನ | ಇ) ಮಾಸಪತ್ರಿಕೆ |

ಈ) ಜ್ಞಾನಪೀಠ ಪ್ರಶಸ್ತಿ — ಈ) ಕಾರಂತರ ನಿಧನ

ಉ) ೧೯೭೭ — ಉ) ಕಾರಂತರ ಜನ್ಮಸ್ಥಳ

**ಪ್ರಶ್ನೆ ಳ) ಕೆಳಗಿನ ಶಬ್ದಗಳ ವಿಭಕ್ತಿಗಳನ್ನು ಗುರುತಿಸಿರಿ.**

ಅ) ಅಣ್ಣನು .............................. ಉ) ಮಗುವಿನ ..................................

ಆ) ಮರವನ್ನು ......................... ಊ) ನೆಲದಲ್ಲಿ ..................................

ಇ) ಮನೆಯಿಂದ ....................... ಎ) ಮಕ್ಕಳೇ ....................................

ಈ) ಹೊಲಕ್ಕೆ.............................. ಏ) ಗಿಡದಿಂದ ..................................

**ಉಪಕ್ರಮ:**

ಜ್ಞಾನಪೀಠ ಪ್ರಶಸ್ತಿ ಪಡೆದವರ ಹೆಸರು ಬರೆದು ಅವರ ಭಾವಚಿತ್ರಗಳನ್ನು ಸಂಗ್ರಹಿಸಿರಿ.

ಆಡುಮುಟ್ಟದ ಸೊಪ್ಪಿಲ್ಲ ಕಾರಂತರು ರಚಿಸದ ಸಾಹಿತ್ಯವಿಲ್ಲ

**ಥಟ್ಟನೆ ಹೇಳಿ:**

ಮೂರು ಕಣ್ಣುಂಟು ಮುಕ್ಕಣ್ಣನಲ್ಲ
ಜುಟ್ಟು ಉಂಟು ಮನುಷ್ಯನಲ್ಲ
ನೀರು ಉಂಟು ಬಾವಿಯಲ್ಲ
ನಾನ್ಯಾರು?

ತೆಂಗಿನಕಾಯಿ



ವ್ಯಾಕರಣ

ಕರ್ತೃ, ಕರ್ಮ, ಕ್ರಿಯಾಪದಗಳು:–

ಒಂದು ಮಾತಿನ ಪೂರ್ಣವಿಚಾರವನ್ನು ತಿಳಿಯಪಡಿಸುವ ಪದಗಳ ಸಮೂಹವೇ ವಾಕ್ಯ ಎನಿಸುವುದು. ವಾಕ್ಯದಲ್ಲಿ ಮೊದಲು ಕರ್ತೃಪದ ಆಮೇಲೆ ಕರ್ಮಪದ ಕೊನೆಗೆ ಕ್ರಿಯಾಪದ ಹೀಗೆ ಒಂದು ಬಗೆಯ ಅನುಕ್ರಮದಲ್ಲಿ ಪದಗಳು ಬರುತ್ತವೆ. ಒಂದೊಂದುಸಲ ಕರ್ತೃ ಕರ್ಮಪದಗಳಲ್ಲಿ ಸ್ಥಾನಪಲ್ಲಟವಾಗಬಹುದು.

ಉದಾ: ಹುಡುಗರು ಆಟವನ್ನು ಆಡುತ್ತಾರೆ.


ಹುಡುಗರು – ಕರ್ತೃ

ಆಟವನ್ನು – ಕರ್ಮ

ಆಡುತ್ತಾರೆ – ಕ್ರಿಯಾಪದ



# ೧೬ ನನ್ನ ದೇಹದ ಬೂದಿ



ನನ್ನ ದೇಹದ ಬೂದಿ ಗಾಳಿಯಲಿ ತೂರಿಬಿಡಿ,
ಹೋಗಿ ಬೀಳಲಿ ಭತ್ತ, ಬೆಳೆಯುವಲ್ಲಿ
ಬೂದಿ ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ ।೧॥

ನನ್ನ ದೇಹದ ಬೂದಿ ಹೊಳೆಯಲ್ಲಿ ಹರಿಯಬಿಡಿ,
ತೇಲಿ ಬೀಳಲಿ ಮೀನ ಬಾಯಿಯಲ್ಲಿ.
ಮುಷ್ಠಿ ಬೂದಿಯ ತಿಂದು ಪುಷ್ಟವಾಗಲು ಮೀನು,
ಧನ್ಯವಾಯಿತು ಹುಟ್ಟು ಸಾವಿನಲ್ಲಿ ।೨॥

ನನ್ನ ದೇಹದ ಬೂದಿ ಕೊಳದಲ್ಲಿ ಬೀರಿ ಬಿಡಿ,
ತಾವರೆಯು ದಿನದಿನವು ಅರಳುವಲ್ಲಿ
ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ
ಧನ್ಯವಾಯಿತು ಹುಟ್ಟು ಸಾವಿನಲ್ಲಿ ।೩॥

ಸತ್ತಮೇಲಾದರೂ ದೇಹ ಸೇವೆಗೆ ನಿಲ್ಲಲಿ,
ಇಂದಿಗೀ ನರಜನ್ಮ ಸೇವೆಯೆಂದು
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ, ದೇವ,
ಧನ್ಯವಾಯಿತು ಹುಟ್ಟು ಸಾವಿನಲ್ಲಿ ।೪॥

– ದಿನಕರ ದೇಸಾಯಿ

ಕೆಳಗಿನ ಶಬ್ದಗಳ ಅರ್ಥವನ್ನು ಶಬ್ದಕೋಶದ ಸಹಾಯದಿಂದ ಹುಡುಕಿ ಬರೆಯಿರಿ.

ನೆಗೆದು ........................................ ಪುಷ್ಪ ........................................

ಕೊಳ ........................................ ಪಂಕಜ ........................................

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಬೂದಿಯು ಭತ್ತದ ಗದ್ದೆಯಲ್ಲಿ ಬಿದ್ದರೆ ಏನಾಗುತ್ತದೆ?

..........................................................................................

ಆ) ಬೂದಿ ಕೆಸರಿನಲ್ಲಿ ಕೂಡಿದಾಗ ಏನಾಗುತ್ತದೆ?

..........................................................................................

ಇ) ನರಜನ್ಮ ಯಾವಾಗ ಸಾರ್ಥಕವಾಗುತ್ತದೆ?

..........................................................................................

ಪ್ರಶ್ನೆ ೨) ಕೆಳಗಿನ ಕವಿತೆಯನ್ನು ಪೂರ್ಣಗೊಳಿಸಿರಿ.

ನನ್ನ ದೇಹದ ಬೂದಿ ಹೊಳೆಯಲ್ಲಿ

........................................ ಹುಟ್ಟು ಸಾವಿನಲ್ಲಿ

ಪ್ರಶ್ನೆ ೩) ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿರಿ.

ಅ) ದೇಹ ................ ಆ) ಹೊಳೆ .....................

ಇ) ತಾವರೆ ................ ಈ) ಸೇವೆ ..............................

**ಉಪಕ್ರಮ:**

ದೇಹದಾನದ ಮಹತ್ವವನ್ನು ಶಿಕ್ಷಕ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

**ದೇಹದಾನ ಶ್ರೇಷ್ಠದಾನ**

**ಥಟ್ಟನೆ ಹೇಳಿ:**

ನೆಲವನ್ನು ಅಗೆಯಲಿಲ್ಲ
ಮಣ್ಣನ್ನು ತೆಗೆಯಲಿಲ್ಲ
ಎಂಥ ಬರ ಬಂದರೂ
ಬಾವಿ ಬತ್ತಲಿಲ್ಲ

ಉತ್ತರ

## ಅರ್ಜಿ ನಮೂನೆ

ಗ್ರಾಮಸ್ಥರು,
ಬಸವೇಶ್ವರ ಕಾಲನಿ,
ವಾರ್ಡ್ ಕ್ರಮಾಂಕ – ೦೧
ಕನಕಪುರ
ದಿನಾಂಕ: ೨೮-೧೦-೨೦೧೪

ಗೆ,
ಸರಪಂಚರು,
ಗ್ರಾಮ ಪಂಚಾಯತಿ
ಕನಕಪುರ

ವಿಷಯ: ನಿಯಮಿತ ನೀರು ಸರಬರಾಜು ಮಾಡುವ ಕುರಿತು.

ಮಾನ್ಯರೆ,

ನಾವು ಬಸವೇಶ್ವರ ಕಾಲನಿಯ ವಾರ್ಡ್ ಕ್ರಮಾಂಕ –೦೧ ರಲ್ಲಿಯ ಗ್ರಾಮಸ್ಥರು. ನಮ್ಮ ಓಣಿಯಲ್ಲಿರುವ ಪ್ರತಿಯೊಂದು ನೀರಿನ ನಳಕ್ಕೆ ಸರಿಯಾಗಿ ನೀರು ಬರುತ್ತಿಲ್ಲ. ಅಲ್ಲದೆ ನೀರು ಸರಬರಾಜು ಮಾಡುವ ಕೆಲವು ಪೈಪುಗಳು ಒಡೆದಿವೆ. ಅವುಗಳಲ್ಲಿ ಹೊಲಸು ಕೂಡಿಕೊಂಡು ನೀರು ಅಶುದ್ಧವಾಗುತ್ತಿದೆ. ಇದರಿಂದ ಹಲವಾರು ಜನರು ರೋಗ–ರುಜಿನಗಳಿಂದ ಬಳಲುತ್ತಿದ್ದಾರೆ. ಆದ್ದರಿಂದ ತಾವುಗಳು ಪ್ರತ್ಯಕ್ಷ ನೋಡಿ, ಅವುಗಳನ್ನು ರಿಪೇರಿ ಮಾಡಿಸಿ, ನಿಯಮಿತವಾಗಿ ಸ್ವಚ್ಛ ಹಾಗೂ ಶುದ್ಧ ನೀರಿನ ಪೂರೈಕೆ ಆಗುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಧನ್ಯವಾದಗಳು

ಇಂತಿ ಗ್ರಾಮಸ್ಥರು

| | ಹೆಸರು | ಸಹಿ |
|---|---|---|
| ೧. | .................... | ...................... |
| ೨. | .................... | ...................... |
| ೩. | .................... | ...................... |
| ೪. | .................... | ...................... |

# ೧೭. ಪರಮವೀರ ಚಕ್ರ :ನಮ್ಮ ಮಹಾ ಸಾಹಸಿಗಳು

ಪ್ರಾಚೀನ ಕಾಲದ ಮಹಾಸಾಹಸಿಗಳ ಹಾಗೂ ಅಸಮಾನ್ಯ ಕಾರ್ಯಗಳ ಬಗೆಗೆ ನೀವು ಕೇಳಿರಬಹುದು. ಆದರೆ ಇಂದೂ ಸಹ ನಮ್ಮ ರಕ್ಷಣೆಗಾಗಿ ನಮ್ಮ ದೇಶದ ಎಷ್ಟೋ ಶೂರ ಸೈನಿಕರು ತಮ್ಮಪ್ರಾಣದ ಬಲಿದಾನ ನೀಡುತ್ತಿದ್ದಾರೆ. ಅವರ ಇಂಥ ಸಾಹಸವನ್ನು ಗೌರವಿಸಲು ಅವರನ್ನು ಸೈನ್ಯದ ಗೌರವಗಳಿಂದ ಅಲಂಕರಿಸಲಾಗುವದು.

ಪರಮವೀರ ಚಕ್ರ ಇದು ಭಾರತದ ರಕ್ಷಣಾದಳದ (ಸೈನ್ಯದ) ಅತ್ಯುಚ್ಚಮಟ್ಟದ ಗೌರವವಾಗಿದೆ. ಇದನ್ನು ಶತ್ರುಗಳನ್ನು ಸದೆಬಡಿಯಲು ನೆಲ-ಜಲ ವಾಯುದಳದ ಸೈನಿಕರು ಮಾಡಿದ ಶೌರ್ಯದ, ಧೈರ್ಯದ, ಶ್ರೇಷ್ಠ ಹೌತಾತ್ಮ್ಯದ ಕಾರ್ಯಕ್ಕಾಗಿ ಕೊಡಲಾಗುವುದು.

ಪರಮವೀರ ಚಕ್ರ ಇದು ಒಂದು ಅಪರೂಪದ ಗೌರವ ಚಿಹ್ನೆ ಆಗಿದೆ. ಈವರೆಗೆ ೨೧ ಸಲ ಇದನ್ನು ನೀಡಲಾಗಿದೆ. ಇವರಲ್ಲಿ ೧೪ ಜನರಿಗೆ ಇದು ಮರಣೋತ್ತರವಾಗಿ ಪ್ರಾಪ್ತವಾಗಿದೆ.



ಈ ಗೌರವ ಪದಕ ನೋಡಲು ಬಹಳೇ ಸಾಧಾರಣವಾಗಿದೆ. ಅದನ್ನು ಕಂಚಿನಿಂದ ಮಾಡಿ ತಿರುಗಣಿಯಾಕಾರದಲ್ಲಿ ಕೂಡಿಸಲಾಗಿದ್ದು ನೇರಳೆ ಬಣ್ಣದ ರಿಬ್ಬನ್ನಿಗೆ ಪೋಣಿಸಲಾಗಿದೆ. ಆ ಪದಕದ ಮೇಲ್ಭಾಗದಲ್ಲಿಯ ಮಧ್ಯದಲ್ಲಿ ರಾಷ್ಟ್ರದ ಲಾಂಛನವಿದ್ದು ಅದರ ಸುತ್ತಲೂ ಇಂದ್ರನ ವಜ್ರಾಯುಧದ ಪ್ರತಿಮೆಗಳಿವೆ. ಹಿಂಬದಿಯಲ್ಲಿ ಪರಮವೀರಚಕ್ರ ಈ ಶಬ್ದಗಳನ್ನು ಹಿಂದೀ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಕೊರೆಯಲಾಗಿದೆ. ಮಧ್ಯದಲ್ಲಿ ಎರಡು ಕಮಲ ಪುಷ್ಪಗಳು ಇವೆ.

ಈ ಪರಮವೀರ ಚಕ್ರ ಪದಕದ ರಚನೆಯನ್ನು ಸಾವಿತ್ರಿಬಾಯಿ ಖಾನೋಲಕರ ಇವರು ಮಾಡಿರುವರು ಅವರು ಯುರೋಪದ ಮಹಿಳೆ. ಅವರು ಭಾರತೀಯ ಸೇನಾದಳದ ವಿಕ್ರಮ ಖಾನೋಲಕರ ಎಂಬ ಅಧಿಕಾರಿಯನ್ನು ಮದುವೆಯಾಗಿದ್ದರು. ಅವರಿಗೆ ಭಾರತದ ಬಗೆಗೆ ಪ್ರೀತಿ ಇತ್ತು, ಆದುದರಿಂದ ಅವರು ಭಾರತದ ನಾಗರೀಕತ್ವವನ್ನು ಸ್ವೀಕರಿಸಿದ್ದರು. ಅವರು ಮರಾಠಿ, ಸಂಸ್ಕೃತ ಹಿಂದೀ ಭಾಷೆ ಮಾತನಾಡುತ್ತಿದ್ದರು. ಭಾರತೀಯ ಕಲೆ ಹಾಗೂ ಪರಂಪರೆಗಳ ಅಭ್ಯಾಸವನ್ನು ಮಾಡಿದ್ದರು. ಮೊದಲನೆಯ ಪವೀಚವು ಯೋಗಾಯೋಗವೆಂಬಂತೆ ಅವರ ಹಿರಿಯ ಮಗಳ ಮೈದುನ ಮೇಜರ್ ಸೊಮನಾಥ ಶರ್ಮ ಅವರಿಗೆ ಪ್ರಾಪ್ತವಾಯಿತು.

ಇಂದ್ರನ ವಜ್ರ ಅಥವಾ ವಜ್ರಾಯುಧ ಇದಕ್ಕೆ ಸರಿಸಮಾನ ಆಯುಧ ಬೇರೊಂದಿಲ್ಲ. ಈ ವಜ್ರಾಯುಧ ಅಜಿಂಕ್ಯವಾಗಿದ್ದು ಋಷಿ ದಧೀಚಿಗಳ ಪರಮ ಹುತಾತ್ಮ್ಯದಿಂದ.

ಪುರಾಣದ ಒಂದು ಕಥೆಯಂತೆ, ಸಾವಿರಾರು ವರ್ಷಗಳ ಹಿಂದೆ ಒಬ್ಬ ರಾಕ್ಷಸ ಜಗತ್ತಿನ ಎಲ್ಲ ನೀರನ್ನು ಕದ್ದಿದ್ದ. ಸಾಮಾನ್ಯ ನಿಷ್ಕಲಂಕ ಜನರು ನೀರಿಲ್ಲದೆ ಕಷ್ಟಕ್ಕೆ ಒಳಗಾಗಿದ್ದು ಸಾಯುತ್ತಿದ್ದರು. ಯಾವುದೇ ಸಾಮಾನ್ಯವಾದ ಕಟ್ಟಿಗೆ, ಧಾತುಗಳಿಂದ ಮಾಡಿದ ಆಯುಧದಿಂದ ಅವನನ್ನು ಸೋಲಿಸುವದು ಸಾಧ್ಯವಿರಲಿಲ್ಲ. ಒಂದು ಅಸಮಾನ್ಯವಾದ ವಸ್ತುವಿನ ಅವಶ್ಯಕತೆ ಇತ್ತು. ಋಷಿ / ಧದೀಚಿಯ ಶರೀರದಲ್ಲಿನ ಎಲುಬುಗಳಲ್ಲಿ ಆ ಅಸಮಾನ್ಯ ಶಕ್ತಿ ಇರುವುದು ತಿಳಿದು ಬಂದಿತು. ಆದರೆ ಜೀವಂತವಾಗಿರುವ ಒಬ್ಬ ವ್ಯಕ್ತಿಯ ಎಲುಬುಗಳನ್ನು ಕೊಡು ಎಂದು ಹೇಗೆ ಕೇಳುವುದು? ದಧೀಚಿ ಋಷಿ ಒಬ್ಬ ಉದಾತ್ತ ವ್ಯಕ್ತಿಯಾಗಿದ್ದರು. ಅವರು ತಾವಾಗಿಯೇ ಜನರ ರಕ್ಷಣೆಗಾಗಿ ಪ್ರಾಣ ಬಿಟ್ಟು ತಮ್ಮ ಎಲುಬುಗಳನ್ನು ಕೊಟ್ಟು ಬಿಟ್ಟರು. ಈ ಎಲುಬುಗಳಿಂದ ಇಂದ್ರ ವಜ್ರ, ಇಂದ್ರನ ವಜಾಘಾತದ ಆಯುಧವನ್ನು ಮಾಡಿ ಆ ರಾಕ್ಷಸನನ್ನು ಸೊಲಿಸಲಾಯಿತು.

ಇಂದ್ರನ ವಜ್ರಾಯುಧ ಋಷಿ ದಧೀಚಿಯ ಎಲುಬಿನಿಂದ ಶಕ್ತಿ ಪಡೆದಂತೆ ಭಾರತದ ರಕ್ಷಣಾದಳವು ಪರಮ ಸಾಹಸಿಗಳ ಬಲಿದಾನದಿಂದ ಬಲ ಹಾಗೂ ಶಕ್ತಿ ಪಡೆಯುತ್ತದೆ. ಈ ಪರಮ ಸಾಹಸಿಗಳೇ ಪರಮವೀರ ಚಕ್ರ ಪ್ರಾಪ್ತರು.

# ೨೧ ಮಹಾನ್ ಪರಮವೀರರು



- ಮೇಜರ್ ಸೋಮನಾಥ ಶರ್ಮ
- ಲಾನ್ಸ ನಾಯಕ್ ಕರಮ್ ಸಿಂಗ್
- ಸೆಕೆಂಡ್ ಲೆಫ್ಟಿನೆಂಟ್ ರಾಮ ರಾಘೋಬಾ ರಾಣೆ
- ನಾಯಕ್ ಜಡೂನಾಥ್ ಸಿಂಗ್
- ಕಂಪೆನಿ ಹವಿಲ್ದಾರ್ ಮೇಜರ್ ಪೀರು
- ಕ್ಯಾಪ್ಟನ್ ಗುರುಬಚನ್ ಸಿಂಗ್ ಸಲಾರಿಯಾ
- ಮೇಜರ್ ಧಾನ್ ಸಿಂಗ್ ಥಾಪಾ
- ಸುಬೇದಾರ್ ಜೋಗೀಂದರ್ ಸಿಂಗ್
- ಮೇಜರ್ ಶೈತಾನ್ ಸಿಂಗ್
- ಕಂಪನಿ ಕ್ವಾರ್ಟರ್ ಮಾಸ್ಟರ್ ಹವಿಲ್ದಾರ್ ಅಬ್ದುಲ್ ಹಮೀದ್
- ಲೆಫ್ಟಿನೆಂಟ್ ಕರ್ನಲ್ ಆರ್ದೇಶಿರ್ ತಾರಾಘೋರ್
- ಲಾನ್ಸ್ ನಾಯಕ್ ಆಲ್ಬರ್ಟ್ ಎಕ್ಕ
- ಸೆಕೆಂಡ್ ಲೆಫ್ಟಿನೆಂಟ್ ಅರುಣ್ ಖೇತ್ರಪಾಲ್
- ಮೇಜರ್ ಹೋಶಿಯಾರ್ ಸಿಂಗ್
- ನೈಬ್ ಸುಬೇದಾರ್ ಬಾಣಾಸಿಂಗ್
- ಮೇಜರ್ ರಾಮಸ್ವಾಮಿ ಪರಮೇಶ್ವರನ್
- ಲೆಫ್ಟಿನೆಂಟ್ ಮನೋಜ್‌ಕುಮಾರ್ ಪಾಂಡೆ
- ಗ್ರೆನೇಡಿಯಲ್ ಯೋಗೇಂದ್ರಸಿಂಗ್ ಯಾದವ
- ರೈಫಲ್ ಮ್ಯಾನ್ ಸಂಜಯಕುಮಾರ್
- ಕ್ಯಾಪ್ಟನ್ ವಿಕ್ರಮ್ ಬಾತ್ರಾ
- ಫ್ಲಯಿಂಗ್ ಆಫೀಸರ್ ನಿರ್ಮಲಜಿತ್ ಸಿಂಗ್ ಸೆಖೋನ್

ಫ್ಲಾಯಿಂಗ್ ಆಫೀಸರ್ ನಿರ್ಮಲಜಿತ್ ಸಿಂಗ್ ಸೆಖೋನ್ ೧೦೮೭೭ F(P), PVC ನಂ ೧೮ ಸ್ಕ್ವಾಡ್ರನ್ ೧೪ ಡಿಸೆಂಬರ ೧೯೭೧ ರಂದು ಶ್ರೀನಗರದ ಮೇಲೆ ಶತ್ರುಗಳ ಆರು ಸಾಬ್ರಿ ವಿಮಾನಗಳು ವಾಯುದಾಳಿ ಮಾಡಿದವು. ಫ್ಲಾಯಿಂಗ್ ಆಫೀಸರ್ ನಿರ್ಮಲಜಿತ್ ಸಿಂಗ್ ಸೆಖೋನ್ ಇವರು ಆಗ ಆಪತ್ಕಾಲದ ಕೆಲಸದ ಮೇಲೆ ಇದ್ದರು. ಅವರಿಗೆ ಒಮ್ಮಿಂದೊಮ್ಮೆಲೆ ವಿಮಾನ ಉಡ್ಡಾಣ ಮಾಡುವುದು ಸಾಧ್ಯವಿರಲಿಲ್ಲ. ಏಕೆಂದರೆ ಬೇರೆ ವಿಮಾನಗಳು ಅಲ್ಲಿ ಧೂಳಿನ ಮೋಡಗಳನ್ನು ಎಬ್ಬಿಸಿದ್ದವು. ವಿಮಾನದ ದಾರಿ ಸ್ಪಷ್ಟವಾಗಿ ಕಾಣುವವರೆಗೆ ಶತ್ರುಗಳ ಆರು ವಿಮಾನಗಳು ಮೇಲೆ ಹಾರಾಡುತ್ತಿದ್ದವು. ಅವು ಬಹಳ ಕೆಳಗೆ ಇದ್ದವು. ಗುಂಡು ಸುರಿಸುತ್ತ ಸಂಪೂರ್ಣ ವಿಮಾನ ನಿಲ್ದಾಣದ ಜಾಗಗಳ ಮೇಲೆ ತೋಪುಗಳನ್ನು ಹಾರಿಸುತ್ತಿದ್ದವು. ಆ ಯುದ್ಧ ಆರರ ವಿರುದ್ಧ ಒಂದರದಾಗಿತ್ತು. ಆದರೂ ಸಹ ಫ್ಲಾಯಿಂಗ್ ಆಫೀಸರ್ ಸೆಖೋನ್ ಪರಿಸ್ಥಿತಿ ಅನುಕೂಲವಾದ ತಕ್ಷಣ ವಿಮಾನ ಹಾರಾಡಿಸಿ ಒಂದೇ ಸಲ ಎರಡೆರಡು ಸಾಬ್ರಿಸಗಳ ಮೇಲೆ ದಾಳಿ ಆರಂಭಿಸಿದರು. ಎರಡನ್ನೂ ಕೆಡವಿದರು. ಆ ಕಾಳಗ ಉಳಿದ ನಾಲ್ಕು ವಿಮಾನಗಳ ಜೊತೆ ಗಿಡದೆತ್ತರದಲ್ಲಿ ನಡೆಯಿತು. ಕೊನೆಗೆ ಶತ್ರುಗಳ ವಿಮಾನಗಳು ಯುದ್ಧಭೂಮಿ ಬಿಟ್ಟು ಪಲಾಯನ ಮಾಡಿದವು. ಸೈನ್ಯ ವಿಮಾನ ನಿಲ್ದಾಣ ಹಾಗೂ ಶ್ರೀನಗರ ಪಟ್ಟಣಗಳು ಸುರಕ್ಷಿತವಾಗಿ ಉಳಿದವು. ಅಯ್ಯೋ, ಆದರೆ ಫ್ಲಾಯಿಂಗ್ ಆಫೀಸರ್ ಸೆಖೋನ್ ಅದರ ವಿಮಾನ ಅಪಘಾತಕ್ಕೀಡಾಗಿ ಕುಸಿದು ಅವರು ನಿಧನ ಹೊಂದಿದರು.

ಫ್ಲಾಯಿಂಗ್ ಆಫೀಸರ್ ಸೆಖೋನ್ ಅವರು ಉಡ್ಡಾಣದ ಕೌಶಲದ ಮುಂದೆ, ಮರಣದ ಮುಂದೆ ತಾನೆಂದು ನಿಂತಾಗಲೂ ಖಚಿತವಾಗಿ ಅದನ್ನು ಎದುರಿಸುವ ಧೈರ್ಯ ತೋರಿಸಿದರು. ಅದ್ವಿತೀಯ ಶೌರ್ಯ ಹಾಗೂ ಕರ್ತವ್ಯದ ಕರೆಗೆ ಓಗೊಡುವ ಸಮಯಪ್ರಜ್ಞೆಯನ್ನು ಅವರು ತೋರಿಸಿದರು. ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಫ್ಲಾಯಿಂಗ್ ಆಫೀಸರ್ ನಿರ್ಮಲಜಿತ್‌ಸಿಂಗ್ ಸೆಖೋನ್ ಅವರಿಗೆ, ಇಂಥ ಮಹಾಸಾಹಸಿಗಳಿಗೆ ನಮ್ಮ ನಮನ.

ನೀವು ಇಂಥ ಮಹಾಸಾಹಸಿ ಪವೀಚ ಪಡೆದ ಇನ್ನಿತರರ ಬಗೆಗೆ ಮುಂದೆ ಕೊಟ್ಟ ಅಂತರ್ಜಾಲದಿಂದ ತಿಳಿದುಕೊಳ್ಳಬಹುದು. www.paramvirchakra.com. ತಮಗೆ ಆದ ಪ್ರಾಣಾಪಾಯಗಳು ಹಾಗೂ ಶಾರೀರಿಕ ತೊಂದರೆಗಳಿಗೆ ಮಹತ್ವ ಕೊಡದೆ ಶತ್ರುಗಳನ್ನು ಎದುರಿಸಿದ ಇಂತಹ ಶೂರರ, ಪ್ರೇರಣೆ ನೀಡುವಂತಹ ಕಾರ್ಯದ ಬಗೆಗೆ ಓದಿರಿ.

## ಶಬ್ದಗಳ ಅರ್ಥ

ಬಲಿದಾನ – ಪ್ರಾಣತ್ಯಾಗ; ಅಪರೂಪ– ವಿರಳ; ಪ್ರಾಪ್ತ– ದೊರೆತ; ಪದಕ–

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಬರೆಯಿರಿ.

ತೋಪು.....................................; ಕಾಳಗ–.................................;

ಪಲಾಯನ–..............................; ಉಡ್ಡಾಣ–..............................;

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ನಮ್ಮರಕ್ಷಣೆಗಾಗಿ ಮೂರು ಪ್ರಾಣದ ಬಲಿದಾನ ನೀಡುತ್ತಿದ್ದಾರೆ?

..........................................................................................

ಆ) ಪರಮವೀರ ಚಕ್ರ ಪದಕದ ರಚನೆಯನ್ನು ಯಾರು ಮಾಡಿದ್ದಾರೆ?

..........................................................................................

ಇ) ಸಾಬ್ರಿ ವಿಮಾನಗಳು ಯಾವ ನಗರದ ಮೇಲೆ ದಾಳಿ ಮಾಡಿದವು?

..........................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಪ್ರಶ್ನೆ ಅ) ..........................................................................................

ಉತ್ತರ..........................................................................................

ಪ್ರಶ್ನೆ ಆ) ..........................................................................................

ಉತ್ತರ..........................................................................................

ಪ್ರಶ್ನೆ ೩) ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬರೆಯಿರಿ.

ಅತ್ಯುಚ್ಚ ..........................................................................................

ಗೌರವ ..........................................................................................

ಅಸಾಮಾನ್ಯ ..........................................................................................

ಸಾಹಸ ..........................................................................................

ಪ್ರಶ್ನೆ ೪) ಕೆಳಗಿನ ವಾಕ್ಯಗಳಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿರಿ.

ಅ) ತಾಯಿಯು ಅಡುಗೆಯನ್ನು ಮಾಡುತ್ತಾಳೆ.

ಕರ್ತೃ ..........................................................................................

ಕರ್ಮ ..........................................................................................

ಕ್ರಿಯಾಪದ......................................................................................

ಆ) ಶಂಕರನು ಪುಸ್ತಕವನ್ನು ಓದುತ್ತಾನೆ.

ಕರ್ತೃ ..........................................................................................

ಕರ್ಮ............................................................................................

ಕ್ರಿಯಾಪದ......................................................................................

ಉಪಕ್ರಮ: ಯಾವ ಯಾವ ಕ್ಷೇತ್ರಗಳಲ್ಲಿ ಸಾಧನೆ ಮಾಡಿದಾಗ ಈ ಕೆಳಗಿನ ಪ್ರಶಸ್ತಿಗಳನ್ನು ಕೊಡಲಾಗುತ್ತದೆ ಎಂಬುದನ್ನು ಬರೆಯಿರಿ.

ಅ. ಅರ್ಜುನ ಪ್ರಶಸ್ತಿ=...........................

ಆ. ಜ್ಞಾನಪೀಠ ಪ್ರಶಸ್ತಿ =...........................

ಇ. ದಾದಾಸಾಹೇಬ ಫಾಲ್ಕೆ ಪ್ರಶಸ್ತಿ=...........................

ಧೈರ್ಯಂ ಸರ್ವತ್ರ ಸಾಧನಂ

ಥಟ್ಟನೆ ಹೇಳಿ:

ಚೋಟುದ್ದ ರಾಜ ಮೋಟುದ್ದ ಕಿರೀಟ

ಪರ್ರಂಥ ಸರಿದರೆ ಭರ್ರಂತ ಉರಿಯುವುದು.

# ೧೮ ಬಿದಿರು ನಾನಾರಿಗಲ್ಲದವಳು

ಬಿದಿರು ನಾನಾರಿಗಲ್ಲದವಳು ॥ಪಲ್ಲವಿ॥
ಹುಟ್ಟುತ್ತ ಹುಲ್ಲಾದೆ
ಬೆಳೆಯುತ ಮರವಾದೆ
ಸುಂದರ ಸ್ತ್ರೀಯರಿಗೆ ಕೇರುವ ಮರವಾದೆ ॥೧॥

ಮುದುಕಗೆ ಬಡಿಗ್ಯಾದೆ
ಮುತ್ಯಾಗ ಬೆತ್ತವಾದೆ
ದೊಡ್ಡ ದೊಡ್ಡ ಮಹಾತ್ಮರ ಕೈಯೊಳಗೆ ಬೆತ್ತವಾದೆ ॥೨॥

ಅಂಬಿಗನಿಗೆ ಕೋಲಾದೆ
ದಂಡಿಗೆ ನಾನಾದೆ
ನೀಟುಳ್ಳ ಹುಡುಗರಿಗೆ ಬೇಟೆಯ ಬಡಿಗ್ಯಾದೆ ॥೩॥


ಪಲ್ಲಕ್ಕಿ ದಂಡಿಗಿಯಾದೆ
ಪತ್ರಿಗೆ ಬುಟ್ಟಿಯಾದೆ
ಎಲ್ಲಮ್ಮನ ಗುಡ್ಡದೊಳಗೆ ಅಡ್ಲಿಗಿ ನಾನಾದೆ ॥೪॥

ಹಂದರ ಹಾಲಗಂಬವಾದೆ
ದಂಡಿ ಬಾಸಿಂಗವಾದೆ
ದೊಡ್ಡ ದೊಡ್ಡ ಮಠದೊಳಗೆ ಕಜ್ಜಾಯ ಬುಟ್ಟಿಯಾದೆ ॥೫॥

ತಿಪ್ಪೆಯ ಕೆಳಗಿದ್ದೆ
ಅದರುದ್ದ ಬೆಳದಿದ್ದೆ
ಸಿದ್ಧರಾಮೇಶ್ವರಗೆ ನಂದಿ ಕೋಲಾದೆ ॥೬॥

ದೇಶದೊಳು ಶಿಶುನಾಳ
ಧೀಶನ ಮಠದೊಳಗೆ
ಸಾಧುರ ಕೈಯೊಳಗೆ ಏಕದಾರಿ ಕೊಳವೆಯಾದೆ ॥೭॥

–ಶಿಶುನಾಳ ಶರೀಫ ಸಾಹೇಬರು



## ಶಬ್ದಗಳ ಅರ್ಥ

ಮಹಾತ್ಮ – ಶ್ರೇಷ್ಠ; ಸುಂದರ – ಆಕರ್ಷಕ;

ಹಂದರ – ಚಪ್ಪರ; ಅಡ್ಲಿಗಿ – ಬಿದಿರಿನ ಬುಟ್ಟಿ

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಬೆತ್ತ – ....................................; ಅಂಬಿಗ – ....................................;

ಪತ್ರಿ – ....................................; ದಂಡಿಗಿ – ....................................;

ಪಲ್ಲಕ್ಕಿ – ..................................

### ವಿಶೇಷ ವಿಚಾರ

ಹಾಲುಗಂಬ – ಮದುವೆಯ ಹಂದರದಲ್ಲಿ ನಿಲ್ಲಿಸುವ ಒಂದು ದೀಪದ ಕಂಬ.

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಹುಟ್ಟುವಾಗಿನ ಬಿದಿರಿನ ರೂಪ ಯಾವುದು?

.......................................................................................................

ಆ) ಅಂಬಿಗನಿಗೆ ಬಿದಿರು ಯಾವ ರೀತಿಯಲ್ಲಿ ಸಹಾಯ ಮಾಡುತ್ತದೆ?

.......................................................................................................

ಇ) ಶಿಶುನಾಳ ಶರೀಫರ ಕೈಯಲ್ಲಿ ಬಿದಿರು ಏನಾಗುತ್ತೇನೆಂದು ಹೇಳುತ್ತದೆ?

.......................................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

ಪ್ರಶ್ನೆ ೩) ಬಿದಿರಿನಿಂದ ಆಗುವ ಉಪಯೋಗಗಳನ್ನು ಹೆಸರಿಸಿರಿ.

..........................................................................................

ಪ್ರಶ್ನೆ ೪) ಕೆಳಗಿನ ಕವಿತೆಯ ಸಾಲುಗಳನ್ನು ಪೂರ್ಣ ಮಾಡಿರಿ.

ಅಂಬಿಗನಿಗೆ ....................................................

....................................................................

.................................................................... ಬಡಿಗ್ಯಾದೆ.

ಪ್ರಶ್ನೆ ೫) ಕೆಳಗಿನ ಶಬ್ದಗಳನ್ನು ವಾಕ್ಯದಲ್ಲಿ ಹೇಳಿರಿ.

೧) ನಂದಿಕೋಲು　　೨) ಮಹಾತ್ಮ　　೩) ಪಲ್ಲಕ್ಕಿ

ಉಪಕ್ರಮ: ಬಿದಿರಿನಿಂದ ಬೇರೆ ಬೇರೆ ವಸ್ತುಗಳನ್ನು ತಯಾರಿಸಿರಿ.

ಉದಾ:- ಪತಂಗ, ಆಕಾಶಬುಟ್ಟಿ, ಬೀಸಣಿಕೆ ಮುಂತಾದವು.


ಗಿಡಮರ ಬೆಳೆಸಿ ಪರಿಸರ ಉಳಿಸಿ

ಥಟ್ಟನೆ ಹೇಳಿ:

ಅಡ್ಡ ಹಾರುವುದು ಪಕ್ಷಿಯಲ್ಲ
ಅವಕ್ಕೆರಡು ಕೊಂಬುಗಳು ಬಸವನಲ್ಲ
ಅದಕ್ಕೊಂದೆ ಬಾಲವಿದೆ ಹನುಮನಲ್ಲ

ಗಾಳಿಪಟ

# ೧೯ ಸೌರ ಕೊಡೆ



ವಾಯುಮಂಡಲವು ಹಲವಾರು ಅನಿಲಗಳ ಭಂಡಾರವಾಗಿದೆ. ಅವುಗಳಲ್ಲಿ ಸಾರಜನಕ, ಆಮ್ಲಜನಕ ಮತ್ತು ಆರ್ಗಾನ ಆವಿಗಳು ಮುಖ್ಯವಾಗಿವೆ. ಇವೆಲ್ಲವೂ ಸೂರ್ಯನ ಕಿರಣಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಈ ಅನಿಲಗಳು ವಿಕಿರಣಗಳನ್ನು ಹೀರಿಕೊಂಡು ಆಯನೀಕರಣಗೊಳ್ಳುತ್ತವೆ. ಪರಮಾಣುಗಳೊಂದಿಗೆ ಸಂಯೋಗ ಹೊಂದುವದರಿಂದ ಓಝೋನ ಅನಿಲ ಉತ್ಪತ್ತಿಯಾಗುತ್ತದೆ ಈ ಓಝೋನ ಅನಿಲದ ಪದರು ಭೂಮಿಯಿಂದ ೨೦ ಕಿ.ಮೀ. ಅಂತರದಲ್ಲಿ ಇದೆ.

ಓಝೋನ ಪದರವು ಭೂಮಿಗೆ ಸೂರ್ಯನ ನೇರಳಾತೀತ ಕಿರಣಗಳು ತಗುಲದಂತೆ ರಕ್ಷಿಸುತ್ತವೆ. ನೇರಳೆ ಕಿರಣಗಳಿಂದ ಜೀವಸಂಕುಲ ರಕ್ಷಿಸುವ ಅನಿಲ ಇದಾಗಿದೆ. ಅದಕ್ಕಾಗಿ ಇದನ್ನು "ಜೀವಸಂಕುಲದ ರಕ್ಷಕ", "ನಿಸರ್ಗದ ಭೂರಕ್ಷಣಾ ಕೊಡೆ", ಅಥವಾ "ಸೌರಕೊಡೆ" ಎಂದು ಕರೆಯುತ್ತಾರೆ.

ನೈಸರ್ಗಿಕವಾಗಿ ವಾತಾವರಣದಲ್ಲಿರುವ ಸಾರಜನಕ, ಜಲಜನಕ ಹಾಗೂ ಕ್ಲೋರಿನ್‌ಗಳು, ಓಝೋನ ಅಣುಗಳನ್ನು ನಾಶಪಡಿಸುತ್ತವೆ. ಇತ್ತೀಚಿಗೆ ಮಾನವನ ಅಹಿತಕರ ಚಟುವಟಿಕೆಗಳಿಂದಾಗಿ ವಾಯುಮಾಲಿನ್ಯವು ಹೆಚ್ಚಾಗಿ ಓಝೋನ

ಪದರವು ವೇಗವಾಗಿ ನಶಿಸುತ್ತಿದೆ. ಇದರಿಂದ ಅತೀ ನೇರಳೆ ಕಿರಣಗಳು ಜೀವಿಗಳ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುತ್ತವೆ.

ಇಂದು ಓಝೋನ ಪದರು ಸವೆದು ಕ್ಷೀಣವಾಗುತ್ತಿದೆ. ಈ ಕ್ಷೀಣಕ್ಕೆ ಪ್ರಮುಖ ಕಾರಣ ಜೆಟ್ ವಿಮಾನಗಳಲ್ಲಿನ ಇಂಧನ ಕ್ಲೋರೋಫ್ಲೋರೋ ಕಾರ್ಬನಗಳು ಹಾಗೂ ಮೀಥೇನ್‌ಗಳು. ಇವುಗಳು ಓಝೋನ ವಾಯುವಿಗೆ ಅಪಾಯಕಾರಿಗಳೆನಿಸಿವೆ.

ಕಳೆದ ಎರಡು ದಶಕಗಳಿಂದ ಈ ಸಮಸ್ಯೆ ತುಂಬಾ ಗಂಭೀರವಾಗಿದೆ. ೧೯೮೫ರಲ್ಲಿ ಅಂಟಾರ್ಟಿಕ ಪ್ರದೇಶದಲ್ಲಿ ಓಝೋನ ಪದರು ತೆಳುವಾಗುತ್ತಿರುವುದನ್ನು ಗಮನಿಸಲಾಗಿದೆ. ಅಲ್ಲದೆ ಗುಬ್ಬಚ್ಚಿ, ಕಾಗೆ, ಮೈನಾ ಮುಂತಾದ ಹಕ್ಕಿಗಳು ಅಪಾಯದ ಅಂಚಿನಲ್ಲಿವೆ. ಜಲಚರ ಜೀವಿಗಳು, ಹಾವಸೆಗಳಂತಹ ಹುಲ್ಲುಜಾತಿಯ ಕೆಲವು ಸಸ್ಯಗಳ ಬೆಳವಣಿಗೆಯ ಮೇಲೆ ನೇರಳಾತೀತ ಕಿರಣಗಳು ಪರಿಣಾಮ ಬೀರುತ್ತವೆ. ಇದರಿಂದ ಆಹಾರ ಸರಪಳಿಯಲ್ಲಿ ಏರುಪೇರು ಉಂಟಾಗಿ ಪರಿಸರ ವ್ಯವಸ್ಥೆಯಲ್ಲಿ ಅಸಮತೋಲನ ಉಂಟಾಗುತ್ತದೆ. ಸಸ್ಯಗಳ ತೆಳುವಾದ ಮತ್ತು ಹಸಿರು ಭಾಗಗಳಾದ ಎಲೆ, ಹೂ, ಹಣ್ಣುಗಳ ಮೇಲೆ ನೇರಳಾತೀತ ಕಿರಣಗಳು ಬೀಳುವುದರಿಂದ ಅಲ್ಲಿನ ಜೀವಕೋಶಗಳು ನಾಶವಾಗಿ ದ್ಯುತಿ ಸಂಶ್ಲೇಷಣೆ ಕ್ರಿಯೆಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತದೆ. ಓಝೋನ್ ಪದರ ಕ್ಷೀಣವಾಗುವುದರಿಂದ ಅನೇಕ ಪರಿಣಾಮಗಳು ಉಂಟಾಗುತ್ತವೆ.

ಸೂರ್ಯನ ನೇರಳಾತೀತ ಕಿರಣಗಳು ನೇರವಾಗಿ ಮಾನವನ ಚರ್ಮದ ಮೇಲೆ ಬೀಳುವುದರಿಂದ ಅಲ್ಲಿ ನಡೆಯುವ ಕೋಶವಿಭಜನೆ ನಿಂತು ಚರ್ಮಕ್ಯಾನ್ಸರ್‌ಗೆ ಕಾರಣೀಭೂತವಾಗುವುದು. ನೇರವಾಗಿ ಕಣ್ಣಿನ ಮೇಲೆ ಬೀಳುವುದರಿಂದ ದೃಷ್ಟಿದೋಷ ಬರುವುದು. ಮಾನವನ ರೋಗ ಪ್ರತಿಕಾರಕ ಶಕ್ತಿ ಕ್ಷೀಣಿಸುತ್ತದೆ. ಜೀವಕೋಶಗಳು ನಾಶವಾಗಿರುವ ತರಕಾರಿಗಳನ್ನು ಆಹಾರವನ್ನಾಗಿ ಉಪಯೋಗಿಸುವುದರಿಂದ ನಮ್ಮ ಶರೀರದ ಮೇಲೆ ತೀವ್ರ ಪರಿಣಾಮವುಂಟಾಗುತ್ತದೆ. ಕಡಿಮೆ ವಯಸ್ಸಿನಲ್ಲಿಯೇ ರಕ್ತದೊತ್ತಡ, ಮಧುಮೇಹ, ಹೃದಯಾಘಾತ ಮೂತ್ರ ಪಿಂಡಗಳ ವಿಫಲತೆ ರೋಗಗಳು ಉದ್ಭವಿಸುತ್ತವೆ.

ನಮ್ಮ ಪರಿಸರದ ಮೇಲೆಯೂ ಓಝೋನ ಕ್ಷೀಣತೆಯಿಂದ ಹಲವಾರು ದುಷ್ಪರಿಣಾಮಗಳು ಉಂಟಾಗುತ್ತವೆ. ಜಾಗತಿಕ ತಾಪಮಾನದ ಏರಿಕೆಯಿಂದ ಧೃವಪ್ರದೇಶಗಳಲ್ಲಿಯ ಮಂಜಿನ ಗಡ್ಡೆಗಳು ಕರಗುತ್ತವೆ. ಇದರಿಂದ ಸಮುದ್ರಮಟ್ಟದಲ್ಲಿ ಏರುಪೇರುಗಳು ಉಂಟಾಗಿ ಸುನಾಮಿಗಳಾಗುವ ಸಂಭವ ಇರುತ್ತದೆ. ಮಣ್ಣಿನ ಮೇಲೆ ಆಮ್ಲಮಳೆ ಬೀಳುತ್ತದೆ. ಇದರಿಂದ ಬೆಳೆಗಳ ಇಳುವರಿ ಕಡಿಮೆಯಾಗುತ್ತದೆ. ಅದರಂತೆ ಐತಿಹಾಸಿಕ ಕಟ್ಟಡಗಳ ಮೇಲೆ ಪರಿಣಾಮ ಬೀರಿ ಅವು ಬಿರುಕು ಬಿಡುತ್ತವೆ.

ನಮ್ಮ ಪೃಥ್ವಿಯ ಅಸ್ತಿತ್ವದ ರಕ್ಷಣೆಗಾಗಿ ಓಝೋನ್‌ದ ರಕ್ಷಣೆ ಮಹತ್ವವನ್ನು ಅರಿತುಕೊಳ್ಳಬೇಕು. ಓಝೋನ್ ಪದರಿನ ರಕ್ಷಣೆಗಾಗಿ ಪ್ರಪಂಚದ ಹಲವಾರು

ರಾಷ್ಟ್ರಗಳು ೧೯೮೭ ರಲ್ಲಿ ಕೆನಡಾದ ಮಾಂಟ್ರಿಯೋಲ್‌ನಲ್ಲಿ ಸಭೆ ಸೇರಿ ಚರ್ಚಿಸಿದವು. ಇದರಲ್ಲಿ ೪೭ ರಾಷ್ಟ್ರಗಳು ಸೇರಿ ಒಂದು ಒಪ್ಪಂದ ಮಾಡಿಕೊಂಡವು. ಈ ಒಪ್ಪಂದಕ್ಕೆ ಮಾಂಟ್ರಿಯಲ್ ಎಂದು ಕರೆಯುವರು. ಇದಕ್ಕೆ ೧೫೦ ದೇಶಗಳು ಸಹಿ ಹಾಕಿದವು. ಭಾರತವು ೧೯೯೨ ರಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿತು.

ಪ್ರತಿವರ್ಷ ಸೆಪ್ಟೆಂಬರ್ ೧೬ ರಂದು ಓಝೋನ ಸಂರಕ್ಷಣ ದಿನವೆಂದು ಆಚರಿಸಲಾಗುತ್ತದೆ. ಇದರ ಸಂರಕ್ಷಣೆ ಎಲ್ಲರ ಪ್ರಮುಖ ಕರ್ತವ್ಯವಾಗಿದೆ.

ವಾಹನಗಳ ಸಂಖ್ಯೆಯು ಪ್ರಚಂಡವಾಗಿ ಬೆಳೆಯುತ್ತಿದೆ. ಈ ವಾಹನಗಳಿಂದ ಹೊರಬೀಳುವ ಹೊಗೆಯು ದಟ್ಟವಾಗಿರುತ್ತದೆ. ದಟ್ಟವಾದ ಹೊಗೆಬಿಡುವ ವಾಹನಗಳ ವ್ಯವಸ್ಥೆಗಳಿಂದ ದೂರವಿರಬೇಕು. ಅಗ್ನಿಶಾಮಕದಲ್ಲಿ ಉಪಯೋಗಿಸುವ ರಾಸಾಯನಿಕ ಪದಾರ್ಥಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕು.

ನಾವು ಪ್ಲಾಸ್ಟಿಕ್ ಚೀಲಗಳನ್ನು ಸುಡಬಾರದು. ದೈನಂದಿನ ಜೀವನದಲ್ಲಿ ವಾಹನಗಳ ಬಳಕೆಯಲ್ಲಿ ನಿಯಂತ್ರಣವಿಡಬೇಕು. ಹೆಚ್ಚಿನ ವಾಹನ ಬಳಕೆಯಿಂದ ವಾಯು ಮಾಲಿನ್ಯವಾಗುತ್ತದೆ. ತೈಲರಹಿತ ವಾಹನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಬೇಕು. ಪೆಟ್ರೋಲ್, ಡೀಸೆಲ್ ಇವುಗಳಿಗೆ ಪರ್ಯಾಯವಾಗಿ ಸಿ.ಎನ್.ಜಿ.ಯಂತಹ ಅನಿಲ ವಾಹನಗಳನ್ನು ಬಳಸುವುದು ಸೂಕ್ತ. ಗಿಡಮರಗಳನ್ನು ಬೆಳೆಸಬೇಕು, ಉಳಿಸಬೇಕು. ಕಾಡಿನ ನಾಶವನ್ನು ನಿಲ್ಲಿಸಬೇಕು. ಪರಿಸರದ ಸ್ವಚ್ಛತೆ ಕಾಪಾಡಬೇಕು. ಮಾಲಿನ್ಯ ತಡೆಗಟ್ಟಬೇಕು. ಈ ಕೃತಿಗಳನ್ನು ಮಾಡಿದಲ್ಲಿ ನಾವು ಓಝೋನ್ ಪದರಿನ ರಕ್ಷಣೆಗೆ ಸಹಾಯ ಮಾಡಿದಂತಾಗುತ್ತದೆ.

ಇತ್ತೀಚಿಗೆ ಹೊಸ-ಹೊಸ ಸಂಶೋಧನೆಗಳಿಂದ ವಿಜ್ಞಾನಿಗಳು ಓಝೋನ ಪದರಿನ ರಕ್ಷಣೆಗೆ ವಿಶೇಷ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದೊಂದು ಗಮನಾರ್ಹವಾದ ಮತ್ತು ಸ್ತುತ್ಯಸಂಗತಿ. ನಾವೆಲ್ಲರೂ ಓಝೋನ ಪದರಿನ ನಾಶದಿಂದ ಉಂಟಾಗುವ ದುಷ್ಪರಿಣಾಮಗಳ ಭೀಕರತೆಯನ್ನು ಅರ್ಥೈಸಿಕೊಂಡು ಪ್ರಜ್ಞಾವಂತರಾಗೋಣ.

## ಶಬ್ದಗಳ ಅರ್ಥ

ಅನಿಲ – ಹವೆ; ಪರಮಾಣು – ವಿಭಜಿಸಲಾಗದ ಕಣ

ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ವಿಭಜನೆ – ..............................

ಅಸ್ತಿತ್ವ –............................

ಪ್ರಚಂಡ – ............................

ಕೃತಿ – .............................

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಪ್ರಶ್ನೆ ಅ) ಓರೆಝೋನ ಪದರವು ಜೀವಸಂಕುಲಕ್ಕೆ ಹೇಗೆ ಸಹಾಯ ಮಾಡುತ್ತದೆ?

.............................................................................................

ಆ) ಓರೆಝೋನ ಅಣುಗಳನ್ನು ನಾಶಪಡಿಸುವ ಅನಿಲಗಳು ಯಾವುವು?

.............................................................................................

ಇ) ಓರೆಝೋನ್ ಮಹತ್ವವನ್ನು ಏಕೆ ತಿಳಿದುಕೊಳ್ಳಬೇಕು?

.............................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) .............................................................................................

ಉತ್ತರ .............................................................................................

ಆ) .............................................................................................

ಉತ್ತರ .............................................................................................

ಪ್ರಶ್ನೆ ೩) ಸರಿಯಾದ ಪದವನ್ನು ಹುಡುಕಿ ಬಿಟ್ಟಸ್ಥಳ ತುಂಬಿರಿ.

ಅ) ................................... ವು ಹಲವಾರು ಅನಿಲಗಳ ಬಂಡಾರವಾಗಿದೆ

(ಭೂಮಂಡಲ, ಸೌರಮಂಡಲ, ಚಂದ್ರಮಂಡಲ)

ಆ) ಭೂಮಿಯಿಂದ ಸುಮಾರು ......................... ಕಿ.ಮೀ ಅಂತರದಲ್ಲಿ ಓರೆಝೋನ್ ಪದರು ಇದೆ.

(೧೦೦, ೮೦, ೨೦)

ಇ) ................. ವಿಶ್ವ ಓಝೋನ ಸಂರಕ್ಷಣೆಯ ದಿನವೆಂದು ಆಚರಿಸಲಾಗುತ್ತದೆ.

(ಸೆಪ್ಟೆಂಬರ್ ೧೬, ಜುಲೈ ೧೬, ಜನವರಿ ೧೬)

ಈ. ೧೯೯೨ ರಲ್ಲಿ ಭಾರತವು ......................... ಒಪ್ಪಂದಕ್ಕೆ ಸಹಿ ಹಾಕಿತು.

(ಜಿನೆವಾ, ಈಜಿಪ್ತ, ಮಾಂಟ್ರಿಯಾಲ)

**ಪ್ರಶ್ನೆ ೪) ಕೆಳಗಿನ ಪದಗಳನ್ನು ವಾಕ್ಯದಲ್ಲಿ ಬಳಸಿರಿ.**

ಅ) ರಕ್ಷಿಸು :.................................................................................

ಆ) ಅಸಮತೋಲನ : ...................................................................

ಇ) ಇಳುವರಿ : ............................................................................

ಈ) ಸಂಶೋಧನೆ : .......................................................................

**ಉಪಕ್ರಮ:** ಭೂಕಂಪ, ಸುನಾಮಿ, ನೆರೆಹಾವಳಿ/ಮಹಾಪೂರ, ಚಂಡಮಾರುತ ಮುಂತಾದ ನೈಸರ್ಗಿಕ ವಿಪತ್ತುಗಳು ಬಗ್ಗೆ ಶಿಕ್ಷಕರಿಂದ / ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

## ಆರೋಗ್ಯವೇ ಸಂಪತ್ತು

**ಥಟ್ಟನೆ ಹೇಳಿ:**


ಕರಿಸೀರೆ ಉಟ್ಕೊಂಡು,
ಕಾಲುಂಗರ ತೊಟ್ಕೊಂಡು
ಮೇಲೆ ಹೋಗ್ತಾಳೆ,
ಕೆಳಗೆ ಬರ್ತಾಳೆ

ಬದನೆ



# ೨೦ ಜನಸಂಖ್ಯಾ ಸ್ಫೋಟ

ಜನಸಂಖ್ಯೆಯ ಬೆಳವಣಿಗೆಯಲ್ಲಿ ತೀವ್ರಗತಿಯಿಂದ ಹೆಚ್ಚಳವಾಗುವುದೇ ಜನಸಂಖ್ಯೆ ಸ್ಫೋಟ.





ಸೌಲಭ್ಯಗಳ ಕೊರತೆ

ವಸತಿ ಸಮಸ್ಯೆ,ಪೌಷ್ಟಿಕ ಆಹಾರದ ಕೊರತೆ; ಕುಡಿಯುವ ಶುದ್ಧ ನೀರಿನ ಕೊರತೆ; ಗುಣಮಟ್ಟದ ಶಿಕ್ಷಣದ ಕೊರತೆ; ಮೂಲಭೂತ ಸೌಕರ್ಯಗಳ ಕೊರತೆ; ದೈನಂದಿನ ಅವಶ್ಯಕತೆಗಳ ಪೂರೈಕೆಯ ಕೊರತೆ.

ಅರಣ್ಯ ಸಂಪತ್ತಿನ ನಾಶ

ಸಾಗುವಳಿಗಾಗಿ ಅರಣ್ಯಗಳ ಒತ್ತುವರಿ. ಅವಶ್ಯಕತೆಗಳ ಪೂರೈಕೆಗಾಗಿ ವೃಕ್ಷ ಸಂಹಾರ. ಔಷಧ ವನಸ್ಪತಿಗಳ ನಾಶ, ಭೂಸವಕಳಿ. ಆಕ್ಸಿಜನ್ ಉತ್ಪತ್ತಿಯಲ್ಲಿ ತೊಂದರೆ. ಪರಿಸರ ಅಸಮತೋಲನ.

ಭೂಸತ್ವ ಹೀನತೆ

ಆಹಾರ ವೃದ್ಧಿಗಾಗಿ ಹೊಸ ಹೊಸ ನೀರಾವರಿ ಯೋಜನೆಗಳ ನಿರ್ಮಾಣ, ನೀರಿನ ಅತಿ ಬಳಕೆ. ಕಾಲಗ್ಗೈ ಪದ್ಧತಿಯಿಂದ ನಿಲುಗಡೆ. ಅತಿಯಾದ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳ ಬಳಕೆ.

**ವಾಯು ಮಾಲಿನ್ಯ** ವಾಹನಗಳ ಮತ್ತು ಕಾರ್ಖಾನೆಗಳ ಹೊಗೆ, ವಿಷಾನಿಲ ಸೇರ್ಪಡೆ, ದುರ್ವಾಸನೆ

**ಜಲ ಮಾಲಿನ್ಯ** ಕೈಗಾರಿಕೀಕರಣದಿಂದ ಜಲದ ಸೆಲೆಗಳು ಬತ್ತಿ ಹೊಗುತ್ತಿವೆ. ಜೈವಿಕ ಕಲ್ಮಶ ಹಾಗೂ ಕಾರ್ಖಾನೆಗಳಿಂದ ಹೊರಟ ರಾಸಾಯನಿಕ ಕಲ್ಮಶಗಳ ಸೇರ್ಪಡೆಯಿಂದ ನದಿಗಳು ವಿಷ ವಸ್ತುಗಳ ಆಗರ.

ತಜ್ಞರ ಅಭಿಪ್ರಾಯಗಳು

ಥಾಮಸ್ ಮಾಲ್ತಸ್

ಆಂಗ್ಲ ಅರ್ಥಶಾಸ್ತ್ರಜ್ಞ

ಈ ಜಗತ್ತಿನ ಜಸಸಂಖ್ಯೆ ಯಾವುದೇ ಅಡೆತಡೆಗಳಿಲ್ಲದಿದ್ದಲ್ಲಿ ೨; ೪; ೮; ೧೬, . . . ಈ ಪ್ರಮಾಣದಲ್ಲಿ ವೃದ್ಧಿಸುತ್ತಾ ಹೋಗುತ್ತದೆ. ಆದರೆ ಆಹಾರ, ಉತ್ಪನ್ನ ಮಾತ್ರ ೧; ೨; ೩; ೪ ಈ ಪ್ರಮಾಣದಲ್ಲಿ ಹೆಚ್ಚುತ್ತದೆ. ಈ ಪ್ರಪಂಚದಲ್ಲಿ ಉತ್ಪಾದಿಸುವ ಆಹಾರಕ್ಕೂ ಹಾಗೂ ಅದನ್ನು ಅವಲಂಬಿಸಿರುವ ಜನಸಂಖ್ಯೆಗೂ ಸಮತೋಲನೆ ತಪ್ಪಿಹೋಗುವ ಸಾಧ್ಯತೆಗಳಿವೆ.

ಯಾವುದೇ ಒಂದು ಆರೋಗ್ಯವಂತ ದೇಶದಲ್ಲಿ ಪ್ರತಿಶತ ೩೦ ರಷ್ಟು ಭಾಗವಾದರೂ ಅರಣ್ಯವಿರಬೇಕು.

ಭಾರತದ ಜನಸಂಖ್ಯೆ

೧೯೭೧– ೫೪, ೮೧, ೫೯, ೬೫೨

೧೯೮೧– ೬೮, ೩೩, ೨೯, ೦೯೭

೧೯೯೧– ೮೪, ೬೩, ೦೨, ೬೮೮


೨೦೦೧– ೧೦೨, ೮೭, ೩೭, ೪೩೬

೨೦೧೧– ೧೨೧, ೦೧, ೬೩, ೪೨೨

೧೯೯೭ ರಲ್ಲಿ ಬ್ಯಾಂಕಾಂಕ್‌ನಲ್ಲಿ ಯುನೆಸ್ಕೋ ವತಿಯಿಂದ ಜನಸಂಖ್ಯೆಯ ಕುರಿತು ನಡೆಸಿದ ಮಹತ್ವದ ಕಾರ್ಯಾಗಾರದಲ್ಲಿ ರೂಪಿಸಿದ ಸಮರ್ಪಕವಾದ ನಿರ್ಣಯ:

ಶಾಲೆಯ ವಿದ್ಯಾರ್ಥಿಗಳಿಗೆ ಚಿಕ್ಕಂದಿನಿಂದಲೇ ಇಂದಿನ ಜಗತ್ತಿನ ಜನಸಂಖ್ಯೆಯ ಹೆಚ್ಚಳ, ಕಾರಣ ಮತ್ತು ಪರಿಹಾರಗಳ ಬಗ್ಗೆ ಸರಿಯಾದ ಅರಿವನ್ನು ಮೂಡಿಸಿ ಅವರು ಪ್ರಬುದ್ಧರಾಗಿ ವಿವೇಕಚಿತ್ತರಾಗಿ ಜವಾಬ್ದಾರಿಯುತ ತೀರ್ಮಾನವನ್ನು ಕೈಗೊಳ್ಳಲು ಸಹಾಯಕವಾಗುತ್ತದೆ.
ಜುಲೈ ೧೧– ವಿಶ್ವ ಜನಸಂಖ್ಯಾ ದಿನ ಜೂನ ೫– ವಿಶ್ವ ಪರಿಸರ ದಿನ

– ಜನಸಂಖ್ಯಾ ಶಿಕ್ಷಣ
– ದೃಢ ನಿರ್ಧಾರ
– ವೈಜ್ಞಾನಿಕ ದೃಷ್ಟಿಕೋನದ ಪಾಲನೆ ?
– ವೈದ್ಯಕೀಯ ಸಲಹೆ – ಚಿಕ್ಕ ಕುಟುಂಬ ಪರಿಕಲ್ಪನೆ



**ಉಪಕ್ರಮ:** ಮೂಢನಂಬಿಕೆ ನಿರ್ಮೂಲನೆ ಕುರಿತು ಶಿಕ್ಷಕರ ಸಹಾಯದಿಂದ ಒಂದು ಕೋಲಾಜನ್ನು ತಯಾರಿಸಿರಿ.

## ಚಿಕ್ಕ ಸಂಸಾರ ಚೊಕ್ಕ ಸಂಸಾರ

**ಥಟ್ಟನೆ ಹೇಳಿ:**

ತೊಲೆಗಂಬಗಳ ಅಗತ್ಯವಿಲ್ಲ
ಕಲ್ಲು ಮಣ್ಣು ಹಾಕಿಲ್ಲ
ಕೆಳಗೆ ಬಾಗಿಲವಿರುವ
ತೂಗುಮಂಚದಂತಿರುವ
ನನ್ನರಮನೆ ಯಾವುದು?

ಗೀಜಗನ ಗೂಡು



# ೨೧ ಸುಗ್ಗಿ


ಸುಗ್ಗಿಯು ಬಂದಿತು ಹಿಗ್ಗನು ತಂದಿತು
ನಮ್ಮಯ ನಾಡಿನ ಜನಕೆಲ್ಲ
ಸಗ್ಗದ ಸುಖವನು ನೀಡುತ ರೈತಗೆ
ದುಡಿಯಲು ಹಚ್ಚಿತು ದಿನವೆಲ್ಲ

ಬೆಳಸಿಯ ತಿನ್ನುತ ಮಜ್ಜಿಗೆ ಕುಡಿಯುತ
ಇರುವರು ರೈತರು ಸುಖದಲ್ಲಿ
ಜೋಳನು ಕೊಯ್ಯುತ ಗೂಡನು ಹಾಕುತ
ಕುಣಿವರು ರೈತರು ಹೊಲದಲ್ಲಿ

ಕಣವನು ಕಡಿಯುತ ನೀರನು ಹೊಡೆಯುತ
ಮೇಟಿಯ ಕುಣಿಯನು ಅಗೆಯುವರು
ತೆನೆಯನು ಮುರಿಯುತ ಹಾಡನು ಹೇಳುತ
ಗುಂಪಿಯ ನೆಳೆಯುತ ಒಗೆಯುವರು

ಹಂತಿಯ ಹೊಡೆಯುವ ಕಂಕಿಯ ತೆಗೆಯುತ
ಬೆಳಗಿನವರೆಗೂ ಹಾಡುವರು
ಕಾಳನು ತೂರುತ ಗಾಡಿಗೆ ಹೇರುತ
ಊರಿನ ಕಡೆಗೆ ಓಡುವರು

– ದಾ.ರಾ. ಬಳೂರಗಿ



## ಶಬ್ದಗಳ ಅರ್ಥ

ಬೆಳಸಿ – ಹಾಲುಗಾಳು, ಸೀತನಿ, ಕಣ – ರಾಶಿ ಮಾಡುವ ಸ್ಥಳ

ಮೇಟಿ – – ಕಣದಲ್ಲಿ ನೆಟ್ಟಿದ ಕಂಬ, ಕಂಕಿ – ಕಾಳಿಲ್ಲದ ತೆನೆ

ಶಬ್ದಕೋಶದ ಸಹಾಯದಿಂದ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಸುಗ್ಗಿ .................................... ರೈತ ....................................

ಅಗೆ ....................................

## ಅಭ್ಯಾಸ

ಪ್ರಶ್ನ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಸುಗ್ಗಿಯು ಏನನ್ನು ತಂದಿತು?

..........................................................................................

ಆ) ಸುಗ್ಗಿಯು ರೈತನಿಗೆ ಯಾವ ಸುಖವನ್ನು ನೀಡುತ್ತದೆ?

..........................................................................................

ಇ) ರೈತನು ಯಾವ ರೀತಿ ಸುಖವಾಗಿ ಇರುತ್ತಾನೆ?

..........................................................................................

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) ..........................................................................................

ಉತ್ತರ ..........................................................................................

ಆ) ..........................................................................................

ಉತ್ತರ ..........................................................................................

ಸುಗ್ಗಿಯು ಬಂದಿತು ಹಿಗ್ಗನು ತಂದಿತು

ಥಟ್ಟನೆ ಹೇಳಿ:

ಹಗಲಲ್ಲಿ ಅರಳುವ ಹಕ್ಕಿ
ರಾತ್ರಿಯಲ್ಲಿ ಮಲಗುವ ಹಕ್ಕಿ

ಸೂರ್ಯಕಾಂತಿ

## इयत्ता १ ली ते ८ वी साठीची पाठ्यपुस्तक मंडळाची वैशिष्ट्यपूर्ण पुस्तके

- मुलांसाठीच्या संस्कार कथा
- बालगीते
- उपयुक्त असा मराठी भाषा शब्दार्थ संग्रह
- सर्वांच्या संग्रही असावी अशी पुस्तके
- स्फूर्तीगीत
- गीतमंजुषा
- निवडक कवी, लेखक यांच्या कथांनी युक्त पुस्तक





















**पुस्तक मागणीसाठी www.ebalbharati.in, www.balbharati.in संकेतस्थळावर भेट द्या.**

***साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.***

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - ೪

बालभारती इयत्ता ६ वी (कन्नड)

₹ 46.00